ಕಾರಿಗಳಿಗೆ ಹೇಳಿದಾಗ್ಯೂ ಕೂಡ ಅವರು ಕೊಡದೆ ಇರುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಯಾರು ಬೇಕಾದರೂ ಏನಾದರೂ ಮಾಡಿಕೊಳ್ಳಲಿ ನಮ್ಮ ಪವರ್ ನಮಗೆ ಇದೆ ಎನ್ನತಕ್ಕ ಧೋರಣೆ ತೋರಿದರೆ ಯಾವರೀತಿ ಸಾರ್ವಜನಿಕ ಸೇವೆ ಮಾಡಿದಹಾಗೆ ಆಗುತ್ತದೆ.

ಶ್ರೀ ಸಿ. ಎಂ. ಇಬ್ರಾಹಿಂ:—ಅಸಿಸ್ಟೆಂಟ್ ರಿಜಿಸ್ಟ್ರಾರ್ ಪತ್ರದ ಬಗ್ಗೆ ಇದರಲ್ಲಿ ಪ್ರಸ್ತಾಪ ಬಂದಿಲ್ಲ, ಆ ಬಗ್ಗೆ ರಿಪೋರ್ಟ್ ಬಂದಿಲ್ಲ. ಮಾನ್ಯ ಸದಸ್ಯರು ಅದನ್ನು ಪ್ರಸ್ತಾಪ ಮಾಡಿದ್ದಾರೆ, ಆ ಲೆಟರನ್ನು ನನಗೆ ಕೊಡಿ. ನಾನು ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡೆಪ್ಯುಟಿ ಡೈರೆಕ್ಟರರನ್ನು ಟಿ. ನರಸೀಪುರಕ್ಕೆ ಕಳುಹಿಸಿಕೊಡುತ್ತೇನೆ. ಅವರು ಕೂಲಂಕಂಷವಾಗಿ ವಿಚಾರಣೆ ಮಾಡಿ ತಹಶೀಲ್ದಾರ್‌ವರು ಆ ರೀತಿ ಉದ್ಧಟತನದಿಂದ ನಡೆದುಕೊಂಡಿದ್ದರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ.

೨-೩೦ ಪಿ.ಎಂ.

ಇನ್ನೊಂದು ಹೆಜ್ಜೆ ಮುಂದೆ ಕೂಡ ಹೋಗಿ ಡಿ. ಸಿ. ಯವರ ಮೇಲೂ ಕೂಡ ಅಪಾದನೆಗಳೂ ಇದ್ದರೆ ಅವರ ಮೇಲೂ ಕೂಡ ಏತಕ್ಕೆ ಕ್ರಮ ಕೈಗೊಳ್ಳಬಾರದು ಎನ್ನುವುದನ್ನು ಕೂಡ ಬರೆದು ಇಲಾಖೆಗೆ ಕಳುಹಿಸಿ ಕೊಟ್ಟಿದ್ದೇನೆ. ಬರೀ ತಹಶೀಲ್ದಾರರು ತಪ್ಪು ಮಾಡಿದರು ಅಂತ ಅಲ್ಲ, ಡಿ.ಸಿ. ಯವರೇ ಮಾಡಿರಲೀ, ಇಲ್ಲವೇ ಸೆಕ್ರೆಟರಿಯವರೇ ತಪ್ಪು ಮಾಡಿರಲೀ ಇಲ್ಲವೇ ಡೈರಕ್ಟರ್‌ವರೇ ತಪ್ಪು ಮಾಡಿದರೆ ನಮ್ಮ ಅಧಿಕಾರಿಗಳು ತಪ್ಪು ಮಾಡಿದರೆ ಅದನ್ನು ಮುಚ್ಚಿಟ್ಟುಕೊಳ್ಳಬೇಕು ಎನ್ನುವ ಪ್ರಶ್ನೆ. ಇಲ್ಲ, ತಪ್ಪು ಮಾಡಿದವರಿಗೆ ಬರೆ ಹಾಕಿದರೆ ಮುಂದಿನ ಸಲ ಅವರು ತಪ್ಪು ಮಾಡುವುದಕ್ಕೆ ಹೋಗುವುದಿಲ್ಲ. ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಬರೆದು ಕಳುಹಿಸಿಕೊಟ್ಟರು. ತಹಶೀಲ್ದಾರರು ಈ ರೀತಿ ಮಾಡಿದ್ದಾರೆ ಎನ್ನತಕ್ಕದನ್ನು ನಮ್ಮ ಗಮನಕ್ಕೆ ತಂದಿದ್ದಾರೆ ಆದುದರಿಂದ ತಾವು ಕೊಟ್ಟಿರತಕ್ಕ ವರದಿ ಮತ್ತು ಟೀನರಸೀಪುರದಲ್ಲಿ ನಡೆದಿರತಕ್ಕ ಅವ್ಯವ್ಯವಹಾರ ಇವುಗಳನ್ನು ಆದಷ್ಟು ಬೇಗ ತನಿಖೆ ನಡೆಸುತ್ತೇನೆ ಮತ್ತು ಇವತ್ತೆ ಆದೇಶ ಕೊಡುತ್ತೇನೆ ಅಲ್ಲಿ ವಿತರಣೆಯಾಗಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಆ ರೀತಿ ವಿತರಣೆಯಾಗಿರದಿದ್ದರೆ ವಿತರಣೆ ಮಾಡುವುದಕ್ಕೆ ಫುಡ್ ಅಸಿಸ್ಟೆಂಟ್, ಮೈಸೂರು ರವರಿಗೆ ಆದೇಶ ಕೊಡುತ್ತೇನೆ.

ಶ್ರೀ ಕೆ. ಮಾದೇಗೌಡ: ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ತಹಶೀಲ್ದಾರ್‌ರವರಿಗೆ ಬರೆದಿರತಕ್ಕ ಕಾಗದ ಮತ್ತು ಡಿ. ಸಿ. ಯವರಿಗೆ ಬರೆದಿರತಕ್ಕ ಕಾಗದ ಮತ್ತು ಪಂಚಾಯಿತಿ ಛೇರ್‌ಮನ್‌ರವರು ತಹಶೀಲ್ದಾರ್‌ರವರಿಗೆ ರಿಕ್ವೆಸ್ಟ್ ಮಾಡಿಕೊಂಡು ಬರೆದಿರತಕ್ಕಂಥ ಕಾಗದ ಪತ್ರ ಮತ್ತು ಸಾವಿರಾರು ಜನ ಅರ್ಜಿ ಬರೆದು ಕೊಟ್ಟಿರತಕ್ಕದ್ದನ್ನೆಲ್ಲಾ ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಕಳುಹಿಸಿ ಕೊಡುತ್ತಿದ್ದೇನೆ.

FINANCIAL BUSINESS

Discussion and Voting on the demands for grants for the year 1980-1981.

SRI Y. RAMAKRISHNA (Minister for Law, Parliamentary Affairs and Animal Husbandry):—Sir on the recommendation to the Governor I beg to move:

Demand No. 4

"That a sum not exceeding Rs. 14,99,01,000 on Revenue Account and Rs. 1,02,50,000 on Capital Account inclusive of the sum granted 'on account' be granted to the Government to defray the charges which will come in course of pay-

ment during the financial year ending 31st day of March 1981 in respect of demand No. 4 – Animal Husbandry and Dairy Development.'‘

Demand No. 34

"That a sum not exceeding Rs 1,31,94,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1981 in respect of Demand No. 34 – State Legislature.'

Demand No. 35

"That a sum not exceeding Rs. 6,70,03,000 on Revenue Account inclusive of the sum granted 'on account' be granted to the Government to defray the charges which will come in c urse of payment during the financial year ending 31st day of March 1981 in respect of Demand No. 35– Administration of Justice."

The question was proposed.

† ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಬಡ ರೈತರಿಗೆ ಆಧಾರ ಭೂತವಾಗಿರತಕ್ಕ ಈ ಪಶುಸಂಗೋಪನಾ ಖಾತೆಯನ್ನು ನನ್ನ ಸ್ನೇಹಿತರಾದ ಶ್ರೀಮಾನ್ ರಾಮಕೃಷ್ಣರವರು ವಹಿಸಿಕೊಂಡಿದ್ದಾರೆ. ಅವರು ರೈತರು ಆದುದರಿಂದ ರೈತರ ಕಷ್ಟಗಳೇನೆಂಬುದನ್ನು ಮಾನ್ಯ ಸಚಿವರು ಅರಿತುಕೊಂಡಿದ್ದಾರೆಂದು ನಂಬಿಕೆ ಇದೆ.

(ಶ್ರೀ ಎಚ್.ಟಿ. ಕೃಷ್ಣಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆದರೆ ಈ ಖಾತೆಯಲ್ಲಿರತಕ್ಕ ಸಮಸ್ಯೆಗಳನ್ನು ನಿವಾರಿಸುವುದಕ್ಕೆ ಹೆಚ್ಚು ಕಾರ್ಯವನ್ನು ಮಾಡಿ ಈ ಒಂದು ಖಾತೆಗೆ ಹೆಸರು ತರುತ್ತಾರೆ ಎನ್ನುವುದನ್ನು ಕಾದು ನೋಡಬೇಕಾಗಿದೆ. ಅಧ್ಯಕ್ಷರೇ, ಬೆಳಿಗ್ಗೆ ಶ್ರೀ ಮಾಯಣ್ಣರವರು ಒಂದು ಪ್ರಶ್ನೆ ಕೇಳಿದಾಗ ಅದಕ್ಕೆ ಉತ್ತರವಾಗಿ ನಮ್ಮ ಮಾನ್ಯ ಮಂತ್ರಿಗಳವರು ಹಲವಾರು ವಿಚಾರಗಳನ್ನು ಹೇಳಿದ್ದಾರೆ. ರಿ ಆರ್ಗನೈಜೇಷನ್ ಆಫ್ ದಿ ಡಿಪಾರ್ಟ್‌ಮೆಂಟ್ ಎಂದು ಹೇಳಿದರು ಬಹಳ ಸರಳ ಹೃದಯದಿಂದ ಹೇಳಿದ್ದಾರೆ. ಪೈ ಕಮಿಷನ್‌ರವರು ಒಂದು ವರದಿಯನ್ನು ಕೊಟ್ಟ ಮೇಲೆ ಅಫಿಶಿಯಲ್ಸ್ ಕಮಿಟಿ ಎಂದು ಮಾಡಿದರು, ಅವರು ಕೊಟ್ಟಂಥ ಎಲ್ಲಾ ಸಲಹೆಗಳನ್ನೂ ಸರ್ಕಾರ ಒಪ್ಪಿಕೊಂಡಿದ್ದೆಂದು ಹೇಳಿದ್ದಾರೆ. ಇದರಲ್ಲಿ ನನಗೆ ಅನುಮಾನವಿದೆ ಅದಕ್ಕೆ ಅವರು ಉತ್ತರದಲ್ಲಿ ನನ್ನ ಅನುಮಾನವನ್ನು ಪರಿಹಾರ ಮಾಡಿಕೊಡಬೇಕೆಂದು ಹೇಳುತ್ತೇನೆ. ಆ ಆಫೀಸರ್ಸ್ ಸಮಿತಿ ಏನಿದೆ ಅದು ನನಗೆ ತಿಳಿದ ಮಟ್ಟಿಗೆ ೧೯೭೬ ರಲ್ಲಿಯೋ ಒಂದು ವರದಿಯನ್ನು ಕೊಟ್ಟಿದೆ. ಅದು ಇಲ್ಲಿಗೆ ೪ ವರ್ಷಗಳಾಯಿತು. ೪ ವರ್ಷಗಳಿಂದ ಅದು ಕಾರಣಾಂತರಗಳಿಂದ ಏತಕ್ಕೋ ಕಾರ್ಯರೂಪಕ್ಕೆ ಬರಲಿಲ್ಲ. ಇದರಿಂದ ಅಧಿಕಾರಿಗಳ ಮನಸ್ಸಿನಲ್ಲಿ ಕೆಲಸ ಮಾಡತಕ್ಕ ಒಂದು ಉತ್ಸಾಹವಿಲ್ಲ. ನಾನು ಕೂಡ ಕೆಲವು ದಿನ ಈ ಖಾತೆಯ ಮಂತ್ರಿಯಾಗಿದ್ದೆ. ನಮ್ಮ ಮನೆಯಲ್ಲಿ ನಾನು ಮಂತ್ರಿಯಾಗಿದ್ದಾಗ, ಕೋಳಿ ತಂದಿಟ್ಟರು, ಅವು ಮರಿ ಹಾಕುವುದರೊಳಗಾಗಿ ನನ್ನ ಮಂತ್ರಿ ಪದವಿ ಹೋಗಿ ಬಿಟ್ಟಿತ್ತು. ಇನ್ನು ಅಷ್ಟರೊಳಗೆ ಏಷ್ಟು ತಿಳಿದುಕೊಳ್ಳುವುದಕ್ಕೆ ಸಾಧ್ಯ. ಆದುದರಿಂದ ಅನುಭವದ ಮಾತಿನಲ್ಲಿ ಹೇಳುವುದಾದರೆ, ಮಾನ್ಯ ಸಚಿವರು ರೈತರಾಗಿದ್ದಾರೆ, ರೈತರ ತೊಂದರೆಗಳೇನೆಂಬುದು ಗೊತ್ತಿದೆ, ಅದನ್ನು ನಿವಾರಿಸುತ್ತಾರೆ ಎನ್ನುವ ನಂಬಿಕೆ

ನನಗೆ ಖಂಡಿತವಾಗಿಯೂ ಇದೆ. ಆದುದರಿಂದ ದಯವಿಟ್ಟು ಇದರ ಕಡೆಗೆ ಮಾನ್ಯ ಸಚಿವರು ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನು ಎಲ್ಲಾ ಇಲಾಖೆಯ ಹಾಗೆ ಈ ಇಲಾಖೆಯಲ್ಲಿ ಏನೂ ವ್ಯತ್ಯಾಸವಿಲ್ಲ. ಬಹಳ ದೊಡ್ಡ ಇಲಾಖೆ, ಆರೋಗ್ಯ ಇಲಾಖೆ ಬೇರೆ ಇಲಾಖೆಯಷ್ಟೇ ಜವಾಬ್ದಾರಿಯುತವಾದ ಇಲಾಖೆಯಾಗಿದೆ. ಆದರೆ ಇದರಲ್ಲಿ ಎಷ್ಟು ಜನ ಡೈರೆಕ್ಟರ್‌ಗಳಿದ್ದಾರೆ ? ಎಷ್ಟು ಜನ ಜಾಯಿಂಟ್ ಡೈರೆಕ್ಟರ್ಸ್‌ಗಳಿದ್ದಾರೆ ? ಡಿಸ್ಟ್ರಿಕ್ಟ್‌ನಲ್ಲಿ ಎಷ್ಟು ಜನ ಜವಾಬ್ದಾರಿ ವಹಿಸಿಕೊಂಡಿರತಕ್ಕ ಜನ ಇದ್ದಾರೆ ? ಎಂಬುದನ್ನು ತಾವು ಕೂಲಂಕುಷವಾಗಿ ಪರಿಶೀಲಿಸುವುದಾದರೆ ಆಗ ತಮಗೇ ಅರ್ಥವಾಗುತ್ತದೆ. ಇದರಲ್ಲಿ ಕೇವಲ ಒಬ್ಬರೇ ಡೈರೆಕ್ಟರ್ ಇದ್ದಾರೆ ನಾರಾಯಣ ಪೈ ಸಮಿತಿಯವರು ಒಂದು ರಿಪೋರ್ಟ್ ಕೊಟ್ಟಾಗ, ಆಫೀಸರ್ಸ್ ಕಮಿಟಿಯವರು ಮತ್ತೊಂದು ಮಾಡಿದರು. ಇದು ಏತಕ್ಕೋಸ್ಕರವಾಗಿ ಮಾಡಿದರೋ ನನಗಂತೂ ಗೊತ್ತಾಗಲಿಲ್ಲ. ಅವರ ಮನಸ್ಸು ಕೂಡ ಅರ್ಥವಾಗಲಿಲ್ಲ. ಅವರು ಮಾಡಿದ್ದು ಸರಿಯಲ್ಲ ಎನ್ನುವ ಕಾಲ ಕೂಡ ಬಂದಿದೆ, ಇಲ್ಲಿ ಕೇವಲ ಅಸಿಸ್ಟೆಂಟ್ ಡೈರೆಕ್ಟರ್‌ನ್ನು ಮಾತ್ರ ಹಾಕಿದ್ದೀರಿ ಇದಕ್ಕೆ ಕಾರಣವೇನೋ ಗೊತ್ತಾಗಲಿಲ್ಲ. ಆದುದರಿಂದ ತಾವು ಇದನ್ನು ಪುನರ್ ವಿಮರ್ಶೆ ಮಾಡಿ ನೋಡಬೇಕು. ಈಗ ೪೦೦ ಮಂದಿ ಅಸಿಸ್ಟೆಂಟ್ ಸರ್ಜನ್‌ರವರ ಹುದ್ದೆ ಖಾಲಿ ಇದೆ ೬೦೦ ಜನ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್‌ರವರ ಹುದ್ದೆ ಖಾಲಿ ಇದೆ. ೮೦೦ ಜನ ಕಾಪೌಂಡ್‌ರವರ ಹುದ್ದೆ ಖಾಲಿ ಇದೆ. ಸುಮಾರು ೫ ವರ್ಷಗಳಿಂದಲೂ ಸಹ ೭೦ ಲಕ್ಷ ರೂಪಾಯಿಗಳ ಹಣ ಏನು ಪ್ಲಾನ್‌ನಲ್ಲಿರತಕ್ಕ ಹಣವಿದೆ ಅದು ಲ್ಯಾಪ್ಸ್ ಆಗುತ್ತಿದೆ. ಆದುದರಿಂದ ತಾವು ಇದರ ಕಡೆಗೆ ಗಮನವನ್ನು ಹರಿಸಿ ವೈದ್ಯಾಧಿಕಾರಿಗಳಿಗೆ ಏನು ಶಿಫಾರಸ್ಸು ಮಾಡಿದ್ದಾರೆ, ಆ ಶಿಫಾರಸ್ಸಿನ ಪ್ರಕಾರ ಸರ್ಕಾರದಲ್ಲಿ ಬಂದಿದೆ, ಅವನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದೀರಿ. ಮಂಜೂರು ಮಾಡಿದ್ದರೆ ಅದನ್ನು ಜಾರಿಗೆ ಕೊಡುವುದಕ್ಕೆ ತೊಂದರೆ ಏನಿದೆ ? ಈಗ ಯೂನಿವರ್ಸಿಟಿಯಲ್ಲಿ ಪ್ರತಿ ವರ್ಷ ೪೦ ಹೆಚ್ಚಿಗೆ ಹುಡುಗರನ್ನು ಸೇರಿಕೊಂಡು ಅವರಿಗೆ ಟ್ರೈನಿಂಗ್ ಮಾಡಿ ಕಳುಹಿಸಿ ಕೊಡಿ. ನೀವು ಕೊಡತಕ್ಕ ಸಂಬಳಕ್ಕೂ, ಕೆ.ಡಿ.ಡಿ.ಸಿ.ಯವರು ಕೊಡತಕ್ಕ ಸಂಬಳಕ್ಕೂ, ಖಾಸಗಿ ಸಂಸ್ಥೆಗಳವರು ಕೊಡತಕ್ಕ ಸಂಬಳಕ್ಕೂ, ರಾಷ್ಟ್ರೀಕೃತ ಬ್ಯಾಂಕಿನವರು ಜೀವವಿಮಾ ಕಾರ್ಪೊರೇಷನ್ನಿನವರು ಕೊಡತಕ್ಕ ಸಂಬಳಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಆದ್ದರಿಂದ ಹೆಚ್ಚು ವೈದ್ಯರು ಈ ಇಲಾಖೆಗೆ ಬರುವುದಿಲ್ಲ. ಆದ್ದರಿಂದ ಸರ್ಕಾರದವರು ಪುನರ್ ವಿಮರ್ಶೆ ಮಾಡಿ ಮೆಡಿಕಲ್ ಅಸಿಸ್ಟೆಂಟ್ ಸರ್ಜನ್‌ಗಳಿಗೆ ಏನು ಸಂಬಳವನ್ನು ಕೊಡುತ್ತೀರೋ ಅದೇರೀತಿ ಸಂಬಂಳವನ್ನೂ ಪಶುವೈದ್ಯರಿಗೂ ಕೊಡುತ್ತೇವೆಂದರೆ ಯಾರಾದರೂ ಬರುವುದಕ್ಕೆ ಮನಸ್ಸು ಮಾಡುತ್ತಾರೆ. ಮನುಷ್ಯನಿಗೆ ವೈದ್ಯ ಮಾಡುವುದು ಸುಲಭ. ಆದರೆ ದನಗಳಿಗೆ ಮಾಡುವುದು ಸುಲಭವಲ್ಲ. ಮನುಷ್ಯನನ್ನು ಮಾತನಾಡಿಸಿದರೆ ಅವನಿಗೆ ಏನು ತೊಂದರೆ ಇದೆ ಎಂಬುದನ್ನು ಹೇಳುತ್ತಾನೆ. ಆದರೆ ದನಗಳು ಮಾತನಾಡುವುದಿಲ್ಲ. ಅದರ ತೊಂದರೆ ಏನು ಎಂಬುದನ್ನು ತಿಳಿದುಕೊಳ್ಳುವುದು ತುಂಬಾ ಕಷ್ಟ. ಮನುಷ್ಯನನ್ನು ಕೇಳಿ ಅವನ ತೊಂದರೆಯನ್ನು ತಿಳಿದುಕೊಂಡು ಅದಕ್ಕೆ ತಕ್ಕಂತೆ ಔಷಧಿ ಕೊಡಬಹುದು. ಆದರೆ ದನಗಳ ಕಾಯಿಲೆ ತಿಳಿದುಕೊಳ್ಳುದು ಮಹಾ ಕಷ್ಟ. ಆದ್ದರಿಂದ ಮನುಷ್ಯನನ್ನು ಪರೀಕ್ಷೆ ಮಾಡತಕ್ಕ ವೈದ್ಯರಿಗೆ ಅಷ್ಟೇನೂ ಕಷ್ಟವಿಲ್ಲ. ದನಗಳನ್ನು ಪರೀಕ್ಷೆ ಮಾಡತಕ್ಕ ವೈದ್ಯರಿಗೆ ಹೆಚ್ಚು ಅನುಭವ ಬೇಕು. ಆಸಕ್ತಿ ಇರಬೇಕು. ಆತನಿಗೆ ತಿಳಿದಿದ್ದನ್ನು ಪರೀಕ್ಷೆ ಮಾಡಿ ನೋಡಿ ಟ್ರೀಟ್‌ಮೆಂಟ್ ಮಾಡಬೇಕಾದರೆ ಸರಿಯಾಗಿ ಪರೀಕ್ಷಿಸಿ ಪ್ರಾಣಿ ಸಾಯದಂತೆ ಔಷಧ ಕೊಡಬೇಕಾಗುತ್ತದೆ. ಆದ್ದರಿಂದ ಇವರನ್ನು ಕೀಳುದರ್ಜೆಯಲ್ಲಿ ನೋಡುವುದು ಸರಿಯಲ್ಲ. ಇವರಿಗೆ ಮನುಷ್ಯನನ್ನು ನೋಡುವ ವೈದ್ಯರಿಗೆ ಕೊಡುವ ಸಂಬಳದಷ್ಟೇ ಪಶು ವೈದ್ಯರಿಗೂ ಕೊಟ್ಟರೆ ನಿಮ್ಮ ಇಲಾಖೆಗೆ ಒಳ್ಳೆಯ ಹೆಸರೂ ಬರುತ್ತದೆ, ಬೇಕಾದಷ್ಟು ಮಂದಿ ವೈದ್ಯರೂ ಬರುತ್ತಾರೆ. ಗುಜರಾತ್ ಸರ್ಕಾರದಲ್ಲಿ ಕೊಡುವಷ್ಟು, ಮದ್ರಾಸ್ ಸರ್ಕಾರದಲ್ಲಿ ಕೊಡುವಷ್ಟು ಸಂಬಳವನ್ನು ನಾವು ಕೊಡುತ್ತಿಲ್ಲ. ಆದ್ದರಿಂದ ನಮ್ಮಲ್ಲೂ ಅದೇರೀತಿ ಸಂಬಳವನ್ನು ಕೊಡುವುದಕ್ಕೆ ಒಪ್ಪಿದರೆ ಬಹಳ ಸಂತೋಷವಾಗುತ್ತದೆ. ನಾನು ಮಂತ್ರಿಯಾಗಿದ್ದಾಗ ಇದಕ್ಕೆ ಒಪ್ಪಿಗೆ ಕೊಟ್ಟು ಒಂದು ವಾರದಲ್ಲೇ ಕಳಿಸಿಕೊಟ್ಟೆ. ಸೆಕ್ರೆಟೇರಿಯೆಟ್‌ನಲ್ಲಿ ಫೈಲುಗಳು ಕುಳಿತುಕೊಳ್ಳುವುದಕ್ಕೆ ಕೆಲವು ಜಾಗಗಳಿವೆ. ಅಲ್ಲಿ ಹೋಗಿ ಅದು ಕುಳಿತುಕೊಂಡು ಬಿಟ್ಟಿದೆ. ಆದ್ದರಿಂದ ನೀವಾದರೂ (ಈಗಿನ ಪಶುಸಂಗೋಪನಾ ಮಂತ್ರಿಗಳು) ನೋಡಿ ಆ ಕೇಸವನ್ನು ಮಾಡಿ. ನೀವು ನನಗಿಂತ ಜೋರಾಗಿ ಮಾತನಾಡುತ್ತೀರಿ, ನೀವು ಅದನ್ನು ಸ್ವಲ್ಪ ಈಚೆಗೆ ತೆಗೆಸಿ ಅದು ಕಾರ್ಯರೂಪಕ್ಕೆ ಬರುವಂತೆ ಮಾಡಿದರೆ ನನಗಂತೂ ತುಂಬಾ ಸಂತೋಷವಾಗುತ್ತದೆ.

ಶ್ರೀ ಎಂ. ಸಿ. ನಾಣಯ್ಯ.—ಇನ್ನು ಮುಂದೆ ಫೈಲುಗಳು ಅಲ್ಲಿ ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲದಂತೆ ಮಾಡಿ.

ಶ್ರೀ ಜಿ. ರಾಮೇಗೌಡ.—ಆ ರೀತಿ ಮಾಡಿದರೂ ನನಗೆ ಸಂತೋಷ. ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್, ಅಸಿಸ್ಟೆಂಟ್ ಡೈರೆಕ್ಟರ್ ಹುದ್ದೆಗಳನ್ನು ಅವರವರ ಕೆಲಸಕ್ಕನುಗುಣವಾಗಿ ಸರಿಯಾಗಿ ವಿಂಗಡಿಸಿ ನೇಮಕಾತಿಗಳನ್ನು ಮಾಡಿದರೆ ಅಲ್ಲಿ ಚೆನ್ನಾಗಿ ಕೆಲಸ ಕಾರ್ಯಗಳು ನಡೆಯುತ್ತವೆ. ಅವರು ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ. ನಾನು ಹಾಕಿದ ಲೆಕ್ಕದ ಪ್ರಕಾರ ಇವರಿಗೆಲ್ಲಾ ೧೫೦ ಲಕ್ಷ ರೂಪಾಯಿ ಹೆಚ್ಚು ಖರ್ಚಾಗಬಹುದು. ಇಷ್ಟೊಂದು ಮಂದಿಗೆ ಇದು ಅಂಥ ಹೆಚ್ಚಿನ ಹೊರೆ ಏನೂ ಆಗುವುದಿಲ್ಲ. ಈಗ ನಮ್ಮ ಸರ್ಕಾರದಲ್ಲಿ ಹಣವನ್ನು ಬೇಕಾದಷ್ಟು ಧಾರಾಳವಾಗಿ ಕೊಡುತ್ತಿದ್ದಾರೆ. ಆದ್ದರಿಂದ ಇಂಥಾದ್ದಕ್ಕೆಲ್ಲಾ ಖರ್ಚು ಮಾಡಿದರೆ ತಪ್ಪೇನೂ ಆಗುವುದಿಲ್ಲ. ಎಲ್.ಐ ಸಿ.ಯಲ್ಲಿ ಒಬ್ಬ ವೈದ್ಯರಿಗೆ ೧೩೮೦ ರೂಪಾಯಿ ಕೊಡುತ್ತಿದ್ದಾರೆ. ಬ್ಯಾಂಕಿನಲ್ಲಿ ೧೫೦೦ ರೂಪಾಯಿ ಕೊಡುತ್ತಿದ್ದಾರೆ ; ಕೆ.ಡಿ.ಡಿ ಸಿ.ನಲ್ಲಿ ೧೨೦೦ ರೂಪಾಯಿ ಕೊಡುತ್ತಿದ್ದಾರೆ. ಭಾರತ್ ಆಗ್ರೋ ಫೌಂಡೇಷನ್‌ನಲ್ಲಿ ೮೮೦ ರೂಪಾಯಿ ಕೊಟ್ಟು ಓಡಾಡುವುದಕ್ಕೆ ವಾಹನ ಉಚಿತವಾಗಿ ಕ್ವಾರ್ಟರ್ಸ್ ಕೊಡುತ್ತಾರೆ. ಹೀಗಿರುವಾಗ ಸರ್ಕಾರದ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ೬೬೦ ರೂಪಾಯಿ ಇರುವುದನ್ನು ೭೫೦ ರೂಪಾಯಿ ಮೂಲ ವೇತನ ಕೊಡುವಂತೆ ಶಿಫಾರಸು ಮಾಡಲಾಗಿದೆ. ಅದನ್ನು ಒಪ್ಪಿದ್ದೇವೆ ಎಂದು ಹೇಳುತ್ತೀರಿ. ದಯವಿಟ್ಟು ಪುನಃ ಅದನ್ನು ಪರಿಶೀಲನೆ ಮಾಡಬೇಕು. ಆ ರೀತಿ ಪುನರ್ ವಿಮರ್ಶೆ ಮಾಡಿ ಕೊಟ್ಟರೆ ಬೇಕಾದಷ್ಟು ವೈದ್ಯರುಗಳು ಸಿಗುತ್ತಾರೆ. ನಿಮ್ಮ ಕೆಲಸವೂ ಚೆನ್ನಾಗಿ ನಡೆಯುತ್ತದೆ. ಡಾಕ್ಟರುಗಳಿಲ್ಲದೆ ಆಸ್ಪತ್ರೆಗಳಿವೆ. ನಿಮ್ಮ ಉತ್ತರದಲ್ಲಿ ೩೭೨ ಹುದ್ದೆಗಳು ಖಾಲಿ ಇದೆ ಎಂದು ಹೇಳಿದ್ದೀರಿ. ಆದರೆ ನನಗೆ ತಿಳಿದ ಪ್ರಕಾರ ೪೦೦ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇವೆ. ಇಷ್ಟನ್ನು ತುಂಬುವುದಕ್ಕೆ ಎಷ್ಟು ದಿನಗಳಾತ್ತದೋ ಗೊತ್ತಿಲ್ಲ. ೧೨೦ ಜನ ಒಂದು ವರ್ಷಕ್ಕೆ ಬರಬಹುದು. ಈ ಸಾರಿ ಹೆಣ್ಣುಮಕ್ಕಳಿಗೆ ಪ್ರವೇಶ ಕೊಟ್ಟಿದ್ದೀರಿ. ಏತಕ್ಕೆ ಇವರನ್ನು ಸೇರಿಸಿದ್ದಾರೋ ಗೊತ್ತಿಲ್ಲ. ಗಂಡಸರಿಗಿಂತಲೂ ಹೆಂಗಸರಿಗೆ ಕೆಲಸ ಕೊಟ್ಟರೆ ಉತ್ತಮ ಎಂಬ ದೃಷ್ಟಿಯಿಂದ ಮಾಡಿದ್ದೀರೋ ಏನೋ ಗೊತ್ತಿಲ್ಲ. ಹಸುಗಳಿಗೆ ಖಾಯಿಲೆ ಪರೀಕ್ಷೆ ಮಾಡುವುದಕ್ಕೆ ಗಂಡಸರಿಗಿಂತ ಹೆಂಗಸರೇ ಉತ್ತಮ ಎಂಬ ಭಾವನೆ ನಿಮ್ಮಲ್ಲಿರಬಹುದು. ದನಗಳೇನಾದರೂ ಒದ್ದರೆ ಇವರು ತಡೆದು ಕೊಳ್ಳುತ್ತಾರೋ ಇಲ್ಲವೋ ಗೊತ್ತಿಲ್ಲ. (ನಗು)

ಶ್ರೀ ಎಸ್. ಪ್ರಮಿಳ.—ಹಾಗಾದರೆ ಹೆಂಗಸರಿಗೆ ಕೊಡಬಾರದು ಎನ್ನುತ್ತೀರಾ ?

ಶ್ರೀ ಜಿ. ರಾಮೇಗೌಡ.—ಕೊಡಬಹುದು. ಹಸು ಕರು ಹಾಕುವಾಗ ಅದಕ್ಕೆ ಇರತಕ್ಕ ಬಾಧೆ, ಕರು ಹಾಕಿದಮೇಲೆ ಅದಕ್ಕೆ ಬರತಕ್ಕ ನೋವು, ಹಾಲು ಕರೆಯುವ ವಿಧಾನ ಇದೆಲ್ಲಾ ಹೆಣ್ಣುಮಕ್ಕಳಿಗೇ ಚೆನ್ನಾಗಿ ತಿಳಿದಿರುತ್ತದೆಯೇ ವಿನಹ ಗಂಡುಮಕ್ಕಳಿಗೆ ತಿಳಿದಿರುವುದಿಲ್ಲ. ಆದ್ದರಿಂದ ಹೆಣ್ಣುಮಕ್ಕಳೂ ಇರಬೇಕು. ಇವರು ಗ್ರಾಜುಯೇಷನ್ ಮಾಡಿದರೆ ಡೈರೆಕ್ಟರಿಗೆ ಪ್ರೈವೇಟ್ ಅಸಿಸ್ಟೆಂಟಾಗಬಹುದು, ಅಥವಾ ಯಾವುದಾದರೂ ಜಿಲ್ಲಾ ಕೇಂದ್ರದಲ್ಲಿ ಟೆಕ್ನಿಕಲ್ ಅಸಿಸ್ಟೆಂಟಾಗಬಹುದು ಅಥವಾ ಬೇರೆ ಯಾವುದಾದರೂ ಜಾಗದಲ್ಲಿರಬಹುದು. ಹಸುಗಳ ಹತ್ತಿರ ಹೋಗಿ ಕೆಲಸಮಾಡುವ ಉದ್ಯೋಗವಂತೂ ಅವರಿಗೆ ಸಿಗುವುದಿಲ್ಲ. ಆದ್ದರಿಂದ ಅವರಿಗೆ ಏತಕ್ಕೆ ಪ್ರವೇಶ ಕೊಡುತ್ತೀರಿ ಎಂದು ಕೇಳಿದೆನೇ ವಿನಹ ಅವರ ಮೇಲೆ ನನಗೆ ದ್ವೇಷ ಇಲ್ಲ, ಅಸೂಯೆ ಇಲ್ಲ. ಜ್ಞಾನ. ಹೆಣ್ಣು ಮಕ್ಕಳಿಗೆ ಹೆಚ್ಚಾಗಿದೆಯೇ ವಿನಹ ಗಂಡುಮಕ್ಕಳಿಗೆ ಹೆಚ್ಚಾಗಿಲ್ಲ ಎಂದು ಹೇಳುತ್ತಾರೆ.

ಶ್ರೀ ವೈ. ರಾಮಕೃಷ್ಣ.—ಕಾನೂನು ಪ್ರಕಾರ ಹೆಂಗಸರನ್ನು ಅರ್ಜಿ ಹಾಕಬಾರದು ಎಂದು ಹೇಳುವಹಾಗಿಲ್ಲ.

ಶ್ರೀ ಜಿ. ರಾಮೇಗೌಡ.—ಇದೇನಾಗುತ್ತದೆಂದರೆ ಅವರು ಬಿ.ಎಸ್‌ಸಿ. (ಅಗ್ರಿ)ಗೆ ಅರ್ಜಿ ಹಾಕಿಕೊಳ್ಳುತ್ತಾರೆ. ಅಲ್ಲಿ ಸೀಟಿಲ್ಲ ಎಂದು ಹೇಳುತ್ತಾರೆ ಹಾರ್ಟಿಕಲ್ಚರ್ ಕೋರ್ಸ್‌ಗೆ ಅರ್ಜಿ ಹಾಕಿಕೊಂಡಾಗ ಅಲ್ಲೂ ಸೀಟಿಲ್ಲ ಎಂದು ಹೇಳುತ್ತಾರೆ. ಕೊನೆಗೆ ಬಿ.ಎಸ್‌ಸಿ.ಗೆ ಹೋಗುತ್ತೀರಾ ಎಂದರೆ, ಯಾವುದೂ ಸಿಗದಿದ್ದುದರಿಂದ ಇದಕ್ಕೇ ಹೋಗುತ್ತೇನೆ ಎಂದು ಬರುತ್ತಾರೆ. ಅವರು ಏನೂ ಪ್ರೀತಿಯಿಂದ ಬರುತ್ತಾರೆ ಎಂದು ನಾನು ಹೇಳಲಾರೆ. ಆದ್ದರಿಂದ ಅವರಿಗೆ ಅವಕಾಶ ಮಾಡಿಕೊಡಿ. ನಾನು ಏಕೆ ಬೇಡ ಎಂದು ಹೇಳಲಿ. ಇನ್ನು ಈ ಇಲಾಖೆಯ ರೀ-ಆರ್ಗನೈಸೇಷನ್ ಮಾಡುವ ಕೆಲಸ ನಿಮ್ಮ ಕೈಯಲ್ಲಾದರೂ

ಆಗಲಿ. ಬೇಕಾದಷ್ಟು ಜನ ಮಹಾನುಭಾವರು ಬಂದುಹೋದರು. ನಾನು ಅದರಲ್ಲಿ ಒಬ್ಬ. ನೀವು ಎಷ್ಟು ದಿವಸ ಇರುತ್ತೀರೋ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಜಾಗ್ರತೆ ಮಾಡಿ ನಾನಂತೂ ಕರ್ನಾಟಕದ ರೈತರ ಪರವಾಗಿ ಅಭಿನಂದಿಸುತ್ತೇವೆ ದನಗಳ ಆರೋಗ್ಯ ಕಾಪಾಡುವುದಕ್ಕೆ ದೊಡ್ಡ ಉಪಕಾರ ಮಾಡಿಕೊಟ್ಟರೆ ನಿಮ್ಮ ಕೀರ್ತಿ ಹೆಚ್ಚಾಗಿರುತ್ತದೆ. ಇನ್ನೇನೂ ನಾನು ಈ ವಿಚಾರವಾಗಿ ಹೆಚ್ಚು ಹೇಳಬೇಕಾದ್ದಿಲ್ಲ. ಲೈವ್ ಸ್ಟಾಕ್ ಇನ್ಸ್‌ಪೆಕ್ಟರ ಹುದ್ದೆಗೆ ಅರ್ಜಿಗಳನ್ನು ಕರೆದಿದ್ದೇವೆ ಎಂದು ಹೇಳಿದ್ದೀರಿ. ಕರೆದು ತಿಂಗಳಾಯಿತು. ಇನ್ನೂ ಆಯ್ಕೆ ಮಾಡಿಲ್ಲ. ಏತಕ್ಕೆ ಮಾಡಿಲ್ಲ? ಬೇಗ ಮಾಡಿದರೆ ಎಷ್ಟೋ ಖಾಲಿ ಇರುವ ಜಾಗಗಳಿಗೆ ಕಳಿಸಿಕೊಡಬಹುದು ಮಾನ್ಯ ಅಧ್ಯಕ್ಷರೇ, ನನಗೆ ನಿಮ್ಮ ಅನುಭವಕ್ಕಿಂತಲೂ ಹೆಚ್ಚು ಅನುಭವ ಇಲ್ಲ. ನೆಲಮಂಗಲದಲ್ಲಿ ಅಮೃತಮಹಲ್ ತಳಿ ಏಳಿಗೆಯಾಗಿವೆಯಂತೆ. ಅವು ಮನುಷ್ಯರಿಗಿಂತಲೂ ಚುರುಕಾಗಿವೆಯಂತೆ. ನೀವೇನಾದರೂ ಜೊಂಡು ಹುಲ್ಲು ಹಾಕುತ್ತೀರೋ ಅಥವಾ ಎರಡು ಹೊತ್ತಿಗೆ ಬದಲಾಗಿ ಒಂದು ಹೊತ್ತಿಗೆ ಹುಲ್ಲು ಹಾಕುತ್ತೀರೋ ಏನೋ ಗೊತ್ತಿಲ್ಲ. ಒಟ್ಟಿನಲ್ಲಿ ಚುರುಕಾಗಿ ಓಡಾಡುತ್ತವೆ. ಇನ್ನೊಂದು ವಿಷಯವೇನೆಂದರೆ artificial insemination Centre ಮಾಡುವುದು ಒಳ್ಳೆಯ ಯೋಜನೆ. ಇದನ್ನು ನೀವು ಹಲವಾರುಕಡೆ ಮಾಡಬೇಕು. ಇದಲ್ಲದೆ Intensive Cattle Development Projects ಇದೆ. ಅಧಿಕಾರಿಗಳನ್ನು ಈ ಬಗ್ಗೆ ಕೇಳಿದರೆ ನಮಗೆ ಇರುವುದೇ ೧೦೦೦ಯೂನಿಟ್‌ಗಳು, ಅದನ್ನು ಮಾಡಿ ಮುಗಿಸಿದ್ದೇವೆ,ಹೆಚ್ಚಾಗಿ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ೫೦೦ ಹಸು ಇರುವ ಕಡೆ ಒಂದು ಮಾಡಿದರೂ ಕೂಡ ಚನ್ನಾಗಿರುತ್ತದೆ. ಇದೊಂದು ಒಳ್ಳೆಯ ಶ್ರೇಷ್ಠವಾದ ಯೋಜನೆಯಾಗಿದೆ ಬಹಳ ಉಪಯುಕ್ತವಾದ ಯೋಜನೆ. ನಿಮ್ಮ ಕಾಲದಲ್ಲಾದರೂ ಇನ್ನೊಂದು ಪ್ರಾಜೆಕ್ಟ್ ಮಾಡಿ. ಬೆಂಗಳೂರು ಕೋಲಾರ, ಮದ್ದೂರು ತಾಲ್ಲೂಕನ್ನು ಇದರಲ್ಲಿ ಸೇರಿಸಿದ್ದಾರೆ. ಶ್ರೀ ಎಸ್.ಎಂ.ಕೃಷ್ಣ ಅವರು ಮಂತ್ರಿಗಳಾಗಿದ್ದರು ಎಂದು ಅದನ್ನು ಸೇರಿಸಬಹುದು. ೫೦೦ ಹಸುಗಳಿರುವ ಕಡೆ ಒಂದೊಂದು ಇನ್‌ಸ್ಯುಮಿನೇಷನ್ ಸೆಂಟರ್ ಮಾಡಿದರೆ ೧೦೦ ಹಸುಗಳಿಗೆ ಇನ್‌ಸ್ಯುಮಿನೇಷನ್ ಮಾಡಿದರೂ ಒಂದು ತಿಂಗಳಿಗೆ ಎಷ್ಟೋ ಮಾಡಬಹುದು. ಅದನ್ನು ಶ್ರದ್ಧೆಯಿಂದ ಮಾಡಿದರೆ ೧೦೦ ಹಸುಗಳಲ್ಲಿ ಉತ್ತಮವಾದ ಆರೋಗ್ಯ ಹೊಂದಿದ್ದರೆ ಕನಿಷ್ಟ ೭೦ ಹಸುಗಳಾದರೂ ಗರ್ಭ ಕಟ್ಟಬಹುದು. ನಮ್ಮ ಅದೃಷ್ಟ ಚೆನ್ನಾಗಿದ್ದರೆ ೪೦ ಹೆಣ್ಣು ಕರುವಾದರೂ ಹುಟ್ಟಬಹುದು. ಹೀಗಾದರೆ ಒಂದು ವರ್ಷದಲ್ಲಿ ಒಂದು ಕರುವಿಗೆ ೧ ಸಾವಿರ ರೂಪಾಯಿಗೆ ಕಡಿಮೆ ಇಲ್ಲದೆ ಬರುತ್ತದೆ. ಆದ್ದರಿಂದ ಒಂದು ಕೃತಕ ಗರ್ಭಧಾರಣಾ ಕೇಂದ್ರ ಮಾಡಿದರೂ ಹಳ್ಳಿಗಳಲ್ಲಿರತಕ್ಕ ಜನರಿಗೆ ೪೦ರಿಂದ ೫೦ ಸಾವಿರ ರೂಪಾಯಿ ವರೆಗೂ ಹಣ ಬರುತ್ತದೆ. ಇದನ್ನು ದಯವಿಟ್ಟು ಮಾಡಬೇಕು. ಇದರಲ್ಲಿ ಎಫ್ ೨ ಇರುವ ಕಡೆ ಸುಮಾರು ಎಂಬತ್ತು ಸಹಸ್ರ ರೂಪಾಯಿಗಳವರೆಗೆ ಪಶುಸಂಪತ್ತು ಬೆಳೆಯುತ್ತದೆ; ಎಫ್ ೩ ಇರುವ ಕಡೆ ಸುಮಾರು ಎರಡು ಲಕ್ಷ ರೂಪಾಯಿಗಳವರೆಗೆ ಪಶುಸಂಪತ್ತು ಬೆಳೆಯುತ್ತದೆ ಆದುದರಿಂದ ಸಾಧ್ಯವಾದಷ್ಟು ಕೃತಕ ಗರ್ಭಧಾರಣಾ ಕೇಂದ್ರಗಳನ್ನು ತೆರೆಯಬೇಕೆಂದು ಹೇಳುತ್ತೇನೆ, ಈ ಕೇಂದ್ರಗಳಿಗೆ ಬೇಕಾಗಿರುವುದು. ಒಬ್ಬ ಜವಾನ ಮತ್ತು ಒಬ್ಬ ಲೈವ್ ಸ್ಟಾಕ್ ಇನ್ಸ್‌ಪೆಕ್ಟರ್. ಇಬ್ಬರಿಗೂ ಒಂದು ತಿಂಗಳಿಗೆ ಸುಮಾರು ಒಂದು ಸಾವಿರ ರೂಪಾಯಿ ಸಂಬಳವಾದರೆ ವರ್ಷಕ್ಕೆ ಸುಮಾರು ಹನ್ನೆರಡು ಸಾವಿರ ರೂಪಾಯಿ ಖರ್ಚಾಗಬಹುದು. ಒಂದು ವರ್ಷದಲ್ಲಿ ಆ ಪ್ರದೇಶದಲ್ಲಿ ಎಫ್೧, ಎಫ್೨ ಮತ್ತು ಎಫ್೩ ದರ್ಜೆಯ ಹಸುಗಳಲ್ಲಿ ಕರುಗಳು ಹುಟ್ಟುತ್ತಾ ಹೋದರೆ ಅಲ್ಲಿನ ಜನರ ಆರ್ಥಿಕ ಮಟ್ಟ ನಲವತ್ತು ಸಹಸ್ರ ರೂಪಾಯಿಗಳಿಂದ ಸುಮಾರು ಎರಡು ಲಕ್ಷ ರೂಪಾಯಿಗಳವರೆಗೆ ಏರುತ್ತದೆ. ಆದುದರಿಂದ, ಇದನ್ನು ಮಾಡಿದರೆ ರೈತರು ತಮಗೆ ಅಭಾರಿಯಾಗಿರುತ್ತಾರೆ ನಿಮಗೆ ಒಳ್ಳೆಯ ಹೆಸರೂ ಬರುತ್ತದೆ.

ಈ ಇಲಾಖೆಯ ಸೇವಾ ನಿಯಮಾವಳಿಗಳು ೧೯೫೬ರಲ್ಲಿ ಆಗಿದ್ದು ಇದುವರೆವಿಗೆ ಪರಿಷ್ಕೃತವಾಗಿಲ್ಲ. ಏತಕ್ಕೆ ಆಗಲಿಲ್ಲವೋ ನಾನು ಕಾಣೆ. ಇಂಥಾದ್ದೆಲ್ಲ ಬಹಳ ಜಾಗ್ರತೆ ಆಗುವುದಿಲ್ಲ. ಕಾರಣ ನಿಮಗೆ ಗೊತ್ತಿದೆ. ಆದುದರಿಂದ, ತಾವು ಮನಸ್ಸು ಮಾಡಿ, ಈ ಇಲಾಖೆಯ ಸೇವಾ ನಿಯಮಾವಳಿಗಳು ಬಹಳ ಬೇಗನೆ ಪರಿಷ್ಕೃತವಾಗಿ ಬರುವ ಹಾಗೆ ಮಾಡಿದರೆ ನೌಕರರು ತಮಗೆ ಅಭಾರಿಯಾಗಿರುತ್ತಾರೆ.

ಹಾಲು ಕರೆಯುವ ಹಸುಗಳ ತಳಿಯಲ್ಲಿ ನನಗೆ ಅತಿ ಪ್ರಿಯವಾದ ತಳಿ ಎಂದರೆ "ಸಿಂಧಿ'' ಮತ್ತು "ರೆಡ್ ಡೇನ್''. ಇವು ಬಹಳ ಚೆನ್ನಾಗಿ ಹಾಲು ಕರೆಯುತ್ತವೆ. ಒಂದು ದಿವಸಕ್ಕೆ ಸುಮಾರು ೨೦ ರಿಂದ ೩೦ ಲೀಟರ್ ಹಾಲು ಕರೆಯುವ ಹಸುಗಳು ಈ ಜಾತಿಯಲ್ಲಿವೆ. ಈ ಜಾತಿಯ ಒಂದು ಹಸುವಿನ ಬೆಲೆ ಸುಮಾರು ಆರು ಸಾವಿರದಿಂದ ಹತ್ತು ಸಾವಿರ ರೂಪಾಯಿಗಳವರೆಗಿದೆ. "ಸಿಂಧಿ'' ಜಾತಿಯ ಹಸುಗಳು ನಿಮ್ಮ ಇಲಾಖೆಯಲ್ಲಿಲ್ಲ. ಅದಕ್ಕೆ ಕಾರಣ ನನಗೆ ಗೊತ್ತಿಲ್ಲ, ಮಿಲಿಟರಿ ಡೈರಿಯಲ್ಲಿ ಈ ಜಾತಿಯ

ಹತ್ತಾರು ಹಸುಗಳಿದ್ದವು. ಈಗ ಅಲ್ಲೂ ಇಲ್ಲ. ಈಗ ಮದರಾಸಿನಲ್ಲಿ ಈ ಹಸುಗಳಿವೆ. ತಮಗೆ ಶಕ್ತಿ ಇದ್ದರೆ ಅಲ್ಲಿಂದ ತರಿಸಿಕೊಳ್ಳಿ. ಕೃತಕ ಗರ್ಭಧಾರಣೆ ಕೇಂದ್ರಗಳಲ್ಲಿ ಈ ಹಸುಗಳಿಂದ ಕರುಗಳನ್ನು ತಯಾರು ಮಾಡಿ ಮಾರಾಟ ಮಾಡುವುದಿದ್ದರೆ ಮಾರಾಟ ಮಾಡಿ, ಇಲ್ಲ, ಫಾರಂನಲ್ಲೇ ಇಡಿ, ಇಲ್ಲ, ಅದರಲ್ಲೇ ತಳಿ ಅಭಿವೃದ್ಧಿ ಮಾಡಿ. ಬೀದರೆಯಲ್ಲಿ ಡಿವೋ ಜಾತಿಯ ಹಸುಗಳಿವೆ. ಅವೂ ಕೂಡ ಚೆನ್ನಾಗಿ ಹಾಲು ಕರೆಯುತ್ತವೆ. ಅವುಗಳಿಗೆ ರೆಡ್‌ಡೇನ್ ತಳಿಯನ್ನು ಕ್ರಾಸ್ ಮಾಡಿ. ಇದರಲ್ಲಿ ಹೆಚ್ಚು ಹಾಲು ಕೊಡುವ ಹಸುಗಳು ಸಿಗುತ್ತವೆ. ಹರಿಯಾಣದಲ್ಲೂ ಈ ಜಾತಿಯ ಹಸುಗಳು ಇವೆ. ಈ ಜಾತಿಯ ಈಘರ್ ಅನ್ನು ತರಿಸಿ ರೆಡ್‌ಡೇನ್‌ಗೆ ಕ್ರಾಸ್ ಮಾಡಿದರೆ ಬೇರೆ ಜಾತಿಯ ಹಸುಗಳನ್ನು ಕ್ರಾಸ್ ಬ್ರೀಡ್‌ದ ತಳಿಗಿಂತಲೂ ನಾಲ್ಕು ಪಟ್ಟು ಹಾಲು ಕೊಡುತ್ತವೆ. ಇದನ್ನು ಯಾರೂ ಮಾಡುತ್ತಿಲ್ಲ. ಕೃತಕ ಗರ್ಭಧಾರಣ ಕೇಂದ್ರಗಳಲ್ಲಿ ಏನಿದೆ ಅದನ್ನು ನಾವು ತೆಗೆದುಕೊಂಡು ಹೋಗಬೇಕಾಗಿದೆ. ನಿರ್ದಿಷ್ಟವಾಗಿ ಇಂಥಾದ್ದನ್ನೇ ಕೊಡಿ ಎಂದು ಕೇಳುವ ಹಾಗಿಲ್ಲ. ಈಗ Frosen Semen ಎಂದು ಮಾಡಿದ್ದಾರೆ. ಇದು ನನಗೆ ಬಹಳ ಭಯ ಹುಟ್ಟಿಸಿದೆ. ಇದನ್ನು ಕೊಡಿಸಿದ ಹಸುಗಳಿಗೆ ಗರ್ಭಪಾತವಾಗುತ್ತಿದೆ. ಜೊತೆಗೆ ಕುರುಡು ಕರುಗಳು ಜಾಸ್ತಿ ಹುಟ್ಟುತ್ತವೆ. ನಾನೀಗ ನಮ್ಮ ಹಸುಗಳಿಗೆ ಇದನ್ನು ಕೊಡಿಸುತ್ತಿಲ್ಲ. ಏಕೆಂದರೆ, ಇದರಲ್ಲಿ ಎರಡು ತೊಂದರೆಗಳಿವೆ ಇದನ್ನು ಕೊಡಿಸಿದ್ದ ನಾಲ್ಕೈದು ಹಸುಗಳಿಗೆ ಗರ್ಭಪಾತವಾಯಿತು.. ಮಾನ್ಯ ನಾನಯ್ಯನವರು ನನಗೇ ಗರ್ಭಪಾತವಾಯಿತೆಂದು ತಿಳಿದು ನಗುತ್ತಿದ್ದಾರೆ! ಇಂತಹವರ ಹತ್ತಿರ ನಾವೇನನ್ನು ಮಾತನಾಡೋಣ?

ಶ್ರೀ ಎಂ.ಸಿ. ನಾನಯ್ಯ.—ಮಾನ್ಯ ರಾಮೇಗೌಡರು always believes lives. ಅದಕ್ಕಾಗಿ ನನಗೆ ನಗು ಬಂತು!

ಶ್ರೀ ಎಸ್ ಬಂಗಾರಪ್ಪ.—ಅವರ ಗರ್ಭಪಾತಕ್ಕೆ ಒಳ್ಳೆಯ ಕಾಲವನ್ನು ಆಯ್ಕೆ ಮಾಡಿದ್ದೀರಿ.

ಶ್ರೀ ಜಿ. ರಾಮೇಗೌಡ.— ಎಲ್ಲೆಲ್ಲೋ ಗಮನವಿಟ್ಟುಕೊಂಡು ಏನನ್ನೋ ಮಾತನಾಡಿದರೆ ನಾನೇನು ಮಾಡಲಿ? ನಮ್ಮ ಅದೃಷ್ಟ! ಮಾನ್ಯ ಹೆಚ್ ಟಿ. ಕೃಷ್ಣಪ್ಪನವರು ಅಧ್ಯಕ್ಷ ಪೀಠದಲ್ಲಿ ಕುಳಿತಿರುವುದು ನಮ್ಮ ಭಾಗ್ಯ! ಇಲ್ಲದಿದ್ದರೆ, ಇವರು ನಗುವಿನಲ್ಲಿ ನಾನು ಹೇಳಿದ್ದೆಲ್ಲಾ ಮರೆತುಹೋಗುತ್ತಿತ್ತು.

Frozen Semenನಲ್ಲಿ ನ್ಯೂನತೆ ಇದೆ ಎಂದು ಕೂಗು ಎದ್ದಿದೆ. ಅದರ ಬಗ್ಗೆ ವಿಚಾರ ಮಾಡಿ. ಮಿಲಿಟರಿ ಫಾರಂನಲ್ಲಿ ಸುಮಾರು ಇನ್ನೂರು ಹಸುಗಳಿಗೆ ಗರ್ಭಪಾತವಾಗಿದೆ. ಏತಕ್ಕೆಂದು ಅವರು ಕಂಡುಹಿಡಿದಿಲ್ಲ. ನೂರಾರು ಕುರುಡು ಕರುಗಳು ಹುಟ್ಟಿವೆ. Frozen Semen ಸರಿಯಾಗಿದೆ. Liquid Semen ಹಾಕಿದರೆ ಹೀಗಾಗುತ್ತದೆ ಅಥವಾ ಬೇರೆ ಕಾರಣದಿಂದ ಕುರುಡು ಕರುಗಳು ಹುಟ್ಟುತ್ತವೆ ಎಂದು ಹೇಳಿದರೆ ಬಹಳ ಸಂತೋಷ. ಕುರಂಡು ಕರುಗಳು ಹುಟ್ಟುವಂತಾಗಲೇ ಬಾರದೆಂದು ಹೇಳುವವನು ನಾನು. ಆದುದರಿಂದ, ಮಾನ್ಯ ಸಚಿವರು ಇದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ ನಮ್ಮ ಮನಸ್ಸಿನಲ್ಲಿರ ವ ಅಸಮಾಧಾನವನ್ನು ಹೋಗಲಾಡಿಸಬೇಕೆಂದು ಹೇಳುತ್ತೇನೆ.

ಮಾನ್ಯ ಮಾಯಣ್ಣನವರು ಮಾತನಾಡುವಾಗ ನನಗೆ ಕೆಲವು ಮಾಹಿತಿಗಳನ್ನು ಕೊಡಿಸಿಕೊಟ್ಟರು

ಇನ್ನು ಹೆಚ್ಚು ಪಶುವೈದ್ಯಶಾಲೆಗಳನ್ನು ತೆರೆಯಬೇಕಾಗಿಲ್ಲ, ಆಯೋಗದ ವರದಿ ಪ್ರಕಾರ ನಾವು ಎಲ್ಲಾ ಮಾಡಿಬಿಟ್ಟಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಬಹುಶಃ ತಮ್ಮನ್ನು ಯಾರೋ ಮಿಸ್‌ಗೈಡ್ ಮಾಡಿರಬಹುದೆಂದು ನಾನು ಭಾವಿಸುತ್ತೇನೆ. ಸ್ಥಳೀಯ ಹಸುಗಳಿಗೆ ಐದು ಸಾವಿರ ಪಶುಸಂಖ್ಯೆ ಇರುವ ಕಡೆ ಒಂದು ಆಸ್ಪತ್ರೆ ಇರಬೇಕೆಂದಿದ್ದರೆ, ಸುಧಾರಿತ ತಳಿಗಳಾದ ಎಫ ೩ ಹಸುಗಳು ಬಹಳ ಕಡಮೆ ಸಂಖ್ಯೆಯಲ್ಲಿದ್ದರೂ ಒಂದು ಆಸ್ಪತ್ರೆ ಇರಬೇಕೆಂದು ಮಾಡಲಾಗಿದೆ. ಆದುದರಿಂದ, ತಾವು ಇದನ್ನು ದಯವಿಟ್ಟು ಗಮನಿಸಿ, ಇನ್ನು ಎಲ್ಲೆಲ್ಲಿ ಆಸ್ಪತ್ರೆಗಳನ್ನು ಕಟ್ಟಿಸಬೇಕೋ ಅಲ್ಲಲ್ಲಿ ಕಟ್ಟಿಸಿ. ಪ್ರತಿ ಐನೂರು ಹಸುಗಳಿಗೊಂದು ಕೃತಕ ಗರ್ಭಧಾರಣ ಕೇಂದ್ರವನ್ನು ಮಾಡಿ. ನಾನು ಅರಣ್ಯ ಮಂತ್ರಿಯಾಗಿದ್ದಾಗ ಶಿವಮೊಗ್ಗದ ಕಡೆ ಪ್ರವಾಸ ಹೋಗುತ್ತಿದ್ದೆ. ಅಲ್ಲಿ ನಮಗೆ ಕಾಣುತ್ತಿದ್ದ ಹಸುಗಳು ಇವೇನು ಹಸುಗಳೋ ಅಥವಾ ಹಂದಿಗಳೋ ಎನ್ನುವ ಅನುಮಾನ ಬರುತ್ತಿದ್ದವು, ಆಪ್ತ ಸಹಾಯಕನನ್ನು ಕೇಳಿದರೆ ನಗುತ್ತಾನೆ ಎಂದು ಕಾರಿನ ಚಾಲಕನನ್ನು ಕೇಳುತ್ತಿದ್ದೆ ಇವು ಏನು ಎಂದು? ಅವನು ಇವು ಹಸುಗಳು ಎಂದು ಹೇಳುತ್ತಿದ್ದ, ಇಂಥಾ ದರ್ಜೆಯ ಹಸುಗಳೂ ನಮ್ಮಲ್ಲಿವೆ.

ಶ್ರೀ ಶೀರ್‍ನಾಳಿ ಚಂದ್ರಶೇಖರ್.—ದೊಡ್ಡಬಳ್ಳಾಪುರದಲ್ಲಿ ಇಂತಹ ಹಸುಗಳಿಲ್ಲವೋ? ಶಿವಮೊಗ್ಗದಲ್ಲಿ ಮಾತ್ರವೋ ಇಂತಹ ಹಸುಗಳಿರುವುದು?

ಶ್ರೀ ಜಿ. ರಾಮೇಗೌಡ.—ಮಾನ್ಯ ಚಂದ್ರಶೇಖರ್ ಅವರು ಎಷ್ಟು ಹಾಲು ಕುಡಿಯುತ್ತಾರೆ ನಮ್ಮ ಕೆ.ಹೆಚ್. ಶ್ರೀನಿವಾಸ್ ಅವರು ಆ ಹಾಲು ಕುಡಿನೇ ಇಷ್ಟು ಚೆನ್ನಾಗಿದ್ದಾರಲ್ಲ ಇನ್ನು ನಮ್ಮ ಕಡೆ ಹಾಲು ಕುಡಿದರೆ ಇನ್ನೆಷ್ಟು ಚೆನ್ನಾಗಿರುತ್ತಿದ್ದರು!

ನಮ್ಮ ಸಮಸ್ಯೆಯನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಮತ್ತು ಅವುಗಳನ್ನು ಪರಿಹಾರ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ರೆಡ್‌ಡೇನ್ ಫಾರಂ ಬಗ್ಗೆ ಹೇಳಬೇಕಾಗಿದೆ. ಡೇನಿಷ್ ಸರ್ಕಾರದವರು ನಮಗೆ ಕೊಟ್ಟ ವರ ವಿದು. ಅದನ್ನು ಮೊದಲು ಇಲ್ಲಿಗೆ ತಂದಾಗ ಮಾನ್ಯ ಎಂ.ವಿ. ಕೃಷ್ಣಪ್ಪನವರು ಮಂತ್ರಿಗಳಾಗಿದ್ದರು ಮತ್ತು ಶ್ರೀ ನಾರಾಯಣಸ್ವಾಮಿ ನಾಯಿಡು ಅವರು ನಿರ್ದೇಶಕರಾಗಿದ್ದರು. ನಮ್ಮ ಜಿಲ್ಲೆ ಮತ್ತು ಅದರ ಆಜಾಬಾಜುಗಳಲ್ಲಿ ಈ ತಳಿಯನ್ನು ಸುಧಾರಿಸಿ ಎಂದು ಹೇಳಿದಾಗ, ಇದು ಮಾಂಸದ ತಳಿ, ಹಾಲಿನ ತಳಿಯಲ್ಲ, ಸ್ವಲ್ಪ ನಿಧಾನ ಮಾಡಿ ಎಂದು ಹೇಳಿದರು. ಹಾಗೂ ಇದನ್ನು ಕ್ರಾಸ್ ಬ್ರೀಡ್ ಮಾಡಿಸಿದಾಗ ಮೊದಮೊದಲು ಒಳ್ಳೆಯ ಉಪಯೋಗ ಕಂಡುಬಂದಿತು. ಆದರೆ, ನಂತರ ಇದು ತಿಂಡಿ ಜಾಸ್ತಿ ತಿನ್ನುವುದೇ ಹೊರತು ಅದಕ್ಕನುಗುಣವಾದ ಅಥವಾ ಅದಕ್ಕನುಸಾರವಾಗಿ ಹಾಲಿನ ಪ್ರಮಾಣ ಬರಲಿಲ್ಲ. ಆದುದರಿಂದ, ಕ್ರಾಸ್ ಬ್ರೀಡ್ ಮಾಡಿದಾಗ, Jercy Red Dane+ Jersy Hallikar; Jersy local breed +Jersy H·F. ಹೀಗೆ Cross wise ಮಾಡಿದ್ದರಿಂದ ಹೆಚ್ಚು ಹಾಲು ಕೊಡುವುದಲ್ಲಿ ಒಳ್ಳೆಯ ಸುಧಾರಣೆ ಕಂಡುಬಂದಿತು.

೩_೦೦ ಪಿ. ಎಂ.

ದಯವಿಟ್ಟು ಈಫರ್ ಸೆಂಟರುಗಳನ್ನು ಜಾಸ್ತಿ ಮಾಡಿ, ರೆಡ್ ಡೇನ್ ಕ್ರಾಸ್ ಮಾಡಿ ಸಣ್ಣ ರೈತರಿಗೆ ಮತ್ತು ಮಧ್ಯಮವರ್ಗದ ರೈತರಿಗೆ ಹಸುಗಳನ್ನು ಕೊಡುವ ವ್ಯವಸ್ಥೆ ಮಾಡಿ. ಈಗ ೬೮ ಹಸುಗಳಿವೆ ಎಂದು ಕೇಳಿದ್ದೇನೆ. ಇವುಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ವೈ. ರಾಮಕೃಷ್ಣ.—೧೦೦ ಆಗಲಿ ಎಂದು ಇಟ್ಟು ಕೊಂಡಿದ್ದೇವೆ.

ಶ್ರೀ ಜಿ. ರಾಮೇಗೌಡ.—ಈಗ ಕಡಿಮೆ ದರದಲ್ಲಿ ಅಂದರೆ ೬೦೦, ೭೦೦, ೧೨೦೦ ರೂಪಾಯಿ ದರದಲ್ಲಿ ಕೊಡಬಹುದು. ಅದಕೋಸ್ಕರವೇ ಒಂದು ಸಣ್ಣ ಸಮಿತಿ ಬೇರೆ ಇದೆ. ಸಮಿತಿಯಲ್ಲಿ ತೀರ್ಮಾನವಾದ ರೇಟಿಗೆ ರೈತರುಗಳಿಗೆ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇಂಥ ಫಾರಂಗಳನ್ನು ಇನ್ನು ಜಾಸ್ತಿ ಮಾಡಲೇಬೇಕೆಂದು ನನ್ನ ಕೋರಿಕೆ. ಇದರ ಕಡೆ ಗಮನಕೊಡುತ್ತೀರೆಂದು ನಂಬಿದ್ದೇನೆ.

ನನಗೆ ಅತ್ಯಂತ ಪ್ರೀತಿಯಾದದ್ದು ಅಂದರೆ ಹಳ್ಳೀಕಾರ ಜಾತಿ ಮತ್ತು ಅಮೃತಮಹಲ್ ಜಾತಿಯ ಹಸುಗಳು. ಹೆಸರುಘಟ್ಟದಲ್ಲಿ ೯೩ ಹಸುಗಳು ಮಾತ್ರ ಹಳ್ಳೀಕಾರ್ ಜಾತಿಯವು ಇವೆ ಎಂದು ಕೇಳಿದ್ದೇನೆ ಇವು ಹೋಗಿಬಿಟ್ಟರೆ ಆ ಜಾತಿಯೇ ನಿರ್ಮೂಲನವಾದಂತಾಗುತ್ತದೆ. ತಮ್ಮ ಕಾಲದಲ್ಲಿ ಇದು ನಿರ್ಮೂಲನವಾಗದ ಹಾಗೆ ನೋಡಿಕೊಳ್ಳಿ. ಅಜ್ಜಂಪುರ ಮತ್ತು ಬೀರೂರಿನಲ್ಲಿ ಈ ಜಾತಿಯ ಹಸಂಗಳು ಇವೆಯೆಂದು ಕೇಳಿದ್ದೇನೆ. ನಾನು ಒಮ್ಮೆ ಬೀರೂರಿಗೆ ಹೋಗಿದ್ದಾಗ ಒಂದು ಘಟನೆ ನಡೆಯಿತು. ಅಲ್ಲಿರತಕ್ಕ ಕಾವಲುಗಾರರು ಏನು ಮಾಡುತ್ತಾರೆಂದರೆ, ಅವರಲ್ಲಿ ಕೂಡ ಹಸುಗಳು ಇವೆ. ಇಲ್ಲಿ ಹುಟ್ಟತಕ್ಕ ಕರುಗಳನ್ನು ತೆಗೆದುಕೊಂಡು ಹೋಗಿ ಅವರಲ್ಲಿರತಕ್ಕ ಕರುಗಳನ್ನು ತಂದು ಇಲ್ಲಿ ಇಡುತ್ತಾರೆ. ಇದನ್ನು ದಯವಿಟ್ಟು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡಿ. ಕೌಂಟಿಂಗ್ ಹಾಜರಾದೆ, ಕೌಂಟಿಂಗ್‌ನಲ್ಲಿ ಒಬ್ಬ ಕಾವಲುಗಾರನ ಮೇಲೆ ೬೦೦೦ ರೂಪಾಯಿ ಕೊಡುವಂತೆ ಆಯಿತು. ಏನಯ್ಯಾ ೬೦೦೦ ರೂಪಾಯಿ ಕೊಡಬೇಕಾಗುತ್ತೆ, ಎಂದು ಕೇಳಿದ್ದಕ್ಕೆ ಅವನು ಧಾರಾಳವಾಗಿ ಕೊಡುತ್ತೇನೆಂದು ಹೇಳಿದ. ಅವನಿಗೆ ೧೫,೦೦೦ ರೂಪಾಯಿ ಬರುವಾಗ, ಸಲೀಸಾಗಿ ಕೊಡುತ್ತಾನೆ. ಇದರ ಬಗ್ಗೆ ನಾನು ನೋಟ್ ಕೂಡ ಕಳಂಹಿಸಿದ್ದೇನೆ. ಸರ್ಕಾರ ಅಮೃತಮಹಲ್ ಮತ್ತು ಹಳ್ಳೀಕಾರ್ ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಕಾರಣ ಪ್ರತಿಯೊಬ್ಬ ರೈತನೂ ಕೂಡ ಟ್ರ್ಯಾಕ್ಟರ್ ಫವರ್ ಟಿಲ್ಲರ್ ಇಡುವುದಕ್ಕಾಗುವುದಿಲ್ಲ. ೧೦೦೦–೨೦೦೦ ರೂಪಾಯಿಗಳ ಎತ್ತುಗಳನ್ನು ಇಟ್ಟುಕೊಂಡು ಹೋಗುವುದಕ್ಕೆ ಸಾಧ್ಯ ಇದೆ. ನನ್ನ ಹತ್ತಿರ ಒಂದು ಜೊತೆ ಎತ್ತುಗಳು ಇವೆ. ನೀವು ಒಂದು ಸಾರಿ ಬನ್ನಿ, ನಾನೇ ಸಾರಥಿಯಾಗಿ ಕೊಡುತ್ತೇನೆ. ಗಾಡಿಗೆ ಎತ್ತುಗಳನ್ನು ಕಟ್ಟಿ ಹೊಡೆದರೆ ಯಾವ ರೀತಿ ಹೋಗುತ್ತವೆ, ಆನಂದವಾಗುತ್ತದೆ ಸ್ವಾಮಿ, ವಲ್ಡ್ ವಾರ್‌ನಲ್ಲಿ ಫಿರಂಗಿಯವರು ಮಹಾಯುದ್ಧದಲ್ಲಿ

ಹಳ್ಳೀಕಾರ್ ತಳಿ ಎತ್ತುಗಳು ಭಾಗವಹಿಸಿದ್ದನ್ನು ಫಿರಂಗಿಯವರು ಮೆಚ್ಚಿಗೆ ವ್ಯಕ್ತಪಡಿಸಿದ್ದರು ಎಂದು ಕೇಳಿದ್ದೇನೆ. ಮಹಾಯುದ್ಧದಲ್ಲಿ ಕುದುರೆಗಳಷ್ಟೇ ಕೆಲಸ ಮಾಡಿದ ನಿಮ್ಮ ಎತ್ತುಗಳನ್ನು ಶ್ಲಾಘಿಸಿ ವಂದನೆಯನ್ನರ್ಪಿಸುತ್ತೇವೆಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಇಂಥ ಶಕ್ತಿಯುತವಾದಂಥ ಜಾತಿಯ ತಳಿಗಳನ್ನು ನಿಮ್ಮ ಕಾಲದಲ್ಲಿ ಅಭಿವೃದ್ಧಿ ಮಾಡಿ. ಅಮೃತಮಹಲ್‌ಗೆ ಸೇರಿದಂತೆ ಸಾವಿರಾರು ಎಕರೆ ಜಮೀನು ಇದೆ. ಇಲ್ಲಿ ಒಳ್ಳೆಯ ಹುಲ್ಲು ಬೆಳಸಿ ಉತ್ತಮಜಾತಿಯ ಪಶುಗಳನ್ನು ಅಭಿವೃದ್ಧಿ ಮಾಡುವ ಕಡೆ ತಮ್ಮ ಗಮನಹರಿಸಬೇಕೆಂದು ಹೇಳುತ್ತೇನೆ. ಇದರಿಂದ ಕರ್ನಾಟಕಕ್ಕೆ ಒಳ್ಳೆಯ ಹೆಸರು ಬರುತ್ತದೆ.

ಜಾನುವಾರುಗಳಿಗೆ ಬರತಕ್ಕ ಕಾಯಿಲೆಗಳ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ರಿಂಡರ್‌ಪೇಸ್ಟ್ ಎನ್ನುವ ಕಾಯಿಲೆ ಬರುತ್ತದೆ. ಈ ರೋಗ ಬಂದು ಹೆಚ್ಚು ದನಗಳು ಸಾಯುತ್ತವೆ. ರೋಗ ಕಾಣಿಸಿಕೊಂಡ ಕೂಡಲೇ ಮುನ್ನೆಚ್ಚರಿಕೆ ವಹಿಸಿ ಜಾನುವಾರುಗಳಿಗೆ ಇನ್ನಾಕ್ಯುಲೇಷನ್ ಮಾಡಿದರೆ ಈ ರೋಗ ಹರಡುವುದಿಲ್ಲ ನಿಮ್ಮಲ್ಲಿರತಕ್ಕ ಕೆಲಸಗಾರರನ್ನು ನೋಡಿದರೆ ಚೈನಾ ಬಾರ್ಡರ್‌ನಲ್ಲಿ ಯುದ್ಧ ಮಾಡಬಹುದು. ಆದರೆ ಅವರು ಎಲ್ಲಿರುತ್ತಾರೋ ? ಏನು ಮಾಡುತ್ತಾರೋ ? ಪರಮಾತ್ಮನಿಗೆ ಗೊತ್ತಾಗಬೇಕು. ಅಕಸ್ಮಾತ್ ಕೇಳಿದರೆ, ಲೀವ್ ಲೆಟರ್ ಕೊಟ್ಟು ಹೋಗಿರುತ್ತಾರೆ. ಅದನ್ನು ಪ್ರಶ್ನೆ ಮಾಡತಕ್ಕ ಅಧಿಕಾರ ಇಲ್ಲ. ಹೊರಗಡೆಯಿಂದ ಬರತಕ್ಕ ನಾಲ್ಕು ಕಾಲಿನ ಪ್ರಾಣಿಗಳಿಗೆ ಚುಚ್ಚುಮದ್ದನು ಕೊಡಬೇಕು. ಹೊರಗಡೆಯಿಂದ ಬರತಕ್ಕ ಪ್ರಾಣಿಗಳಿಂದಲೇ ಕಾಯಿಲೆ ಹರಡುವುದು, ಇವತ್ತು ಈ ರೋಗದಿಂದ ೫೦೦೦–೬೦೦೦ ರೂಪಾಯಿ ಬೆಲೆ ಬಾಳತಕ್ಕ ಹಸುಗಳು ಸತ್ತುಹೋಗಿವೆ. ವ್ಯಾಕ್ಸಿನೇಷನ್ನುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರು ಮಾಡಿ ರಿಂಡರ್‌ಪೇಸ್ಟ್ ರೋಗ ಹರಡದಂತೆ ಕ್ರಮ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಈ ರೋಗದ ಬಗ್ಗೆ ಹೆಚ್ಚು ಗಮನಕೊಡ ಬೇಕಾಗಿದೆ. ಫೂಟ್ ಅಂಡ್ ಮೌತ್ ಮತ್ತು ಚಪ್ಪೆ ರೋಗ ಬೇರೆ ಜಾನುವಾರುಗಳಿಗೆ ಬರುತ್ತದೆ. ೩೦ ರಾಸುಗಳು ಸಾಯುವವರೆಗೆ ನಿಮ್ಮ ಡಾಕ್ಟರು ಹೋಗುವುದಿಲ್ಲ, ರಿಪೋರ್ಟ್ ತೆಗೆದುಕೊಂಡು ಬಾ ಅದನ್ನು ತೆಗೆದುಕೊಂಡು ಬಾ ಅಂತ ಹೇಳಿಕಳುಸುತ್ತಾನೆ. ರಿಪೋರ್ಟ್ ತೆಗೆದುಕೊಂಡು ಹೋಗಲು ಬಂದರೆ ಸಂಬಂಧಪಟ್ಟ ಸೆಕ್ರೆಟರಿ ಇರುವುದಿಲ್ಲ. ಸೆಕ್ರಟರಿಗಳ ವಿಚಾರ ಗೊತ್ತೇ ಇದೆ, ಇಷ್ಟೆಲ್ಲಾ ಮಾಡಿಕೊಂಡು ಹೋದರೆ. ನನಗೆ ಪ್ರಾವಿಷನಾ ಇಲ್ಲ. ಕಾಗದ ಬರೆದುಕೊಡುತ್ತೇನೆ. ಹೋಗಿ ನೀನೆ ತೆಗೆದುಕೊಂಡು ಬಾ ಎಂದು ಹೇಳುತ್ತಾನೆ. ಅಷ್ಟು ಹೊತ್ತಿಗೆ ಇನ್ನು ೩೦ ಹಸುಗಳು ಸತ್ತು ಹೋಗಿ ರುತ್ತವೆ. ನಾನು ಮಂತ್ರಿಯಾಗಿದ್ದಾಗ ರೀಜನಲ್ ಆಫೀಸಿನಲ್ಲಿ ಒಂದು ಕೋಲ್ಡ್‌ಸ್ಟೋರೇಜ್ ಇಟ್ಟು ಅದರಲ್ಲಿ ಜಾನುವಾರುಗಳಿಗೆ ಬೇಕಾದಂತ ಎಲ್ಲ ಔಷಧಿಗಳನ್ನು ಸಾಕಷ್ಟು ಇಡುವ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೆ. ಅದು ನಡೆಯಿತೋ, ನಡೆಯಲಿಲ್ಲವೋ ಗೊತ್ತಿಲ್ಲ, ಅವನೇ ಹೋದ ಇದೆಲ್ಲಾ ಏತಕ್ಕೆ ಎಂದು ಸುಮ್ಮನಾಗಿಬಿಟ್ಟರೇನೋ ? ರೀಜನಲ್ ಆಫೀಸಿನಲ್ಲಿ ಎಲ್ಲ ರೀತಿಯ ಇನ್ನಾಕ್ಯುಲೇಷನ್ ಮತ್ತು ವ್ಯಾಕ್ಸಿನೇಷನ್ನುಗಳನ್ನು ಇಡುವುದಕ್ಕೆ ವ್ಯವಸ್ಥೆ ಮಾಡಿದರೆ ಅಂಟುರೋಗಗಳನ್ನು ತಡೆಯುವುದಕ್ಕೆ ಅನುಕೂಲ ವಾಗುತ್ತದೆ. ಫೂಟ್ ಅಂಡ್ ಮೌತ್ ರೋಗಕ್ಕೆ ಕೊಡತಕ್ಕ ಚುಚ್ಚುಮದ್ದನ್ನು ಪುಕ್ಕಟೆಯಾಗಿ ಮಾಡಿ ೪ ರೂಪಾಯಿ ಎತಕ್ಕೆ ವಸೂಲು ಮಾಡುತ್ತೀರಿ ? ಹಣಕಾಸಿನ ಮಂತ್ರಿಯವರ ಆಕ್ಷೇಪಣೆ ಇದೆ. ಕಮಿಷನರ್‌ರವರ ಆಕ್ಷೇಪಣೆ ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಕೇಸ್‌ವರ್ಕರದ್ದು ಭಾರಿ ಆಕ್ಷೇಪಣೆ ಇದೆ ಎಂದು ಕೇಳಿದ್ದೇನೆ. ಆ ರೀತಿ ಇದ್ದರೆ ತೆಗೆಯಿರಿ. ಪುಕ್ಕಟೆಯಾಗಿ ಮಾಡುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ವೈ. ರಾಮಕೃಷ್ಣ.—ಫುಟ್ ಅಂಡ್ ಮೌತ್ ರೋಗಕ್ಕೆ ಪುಕ್ಕಟೆಯಾಗಿ ಮಾಡುವುದಕ್ಕೆ ಆರ್ಡರ್ಸ್ ಕೊಟ್ಟಿದ್ದೇವೆ.

ಶ್ರೀ ಜಿ. ರಾಮೇಗೌಡ.—ಹೋದವಾರ ೪ ರೂಪಾಯಿ ವಸೂಲು ಮಾಡಿದ್ದಾರೆ. ಅಭಿನಂದನೆ ಗಳು ಮತ್ತೆ ತೆಲಾರಿಸಿಸ್ ಎನ್ನುವ ರೋಗ ಬರುತ್ತೆ. ಇದಕ್ಕೆ ಫೆ–ಪೊಲಿಟಿಕಲ್ ಫೀವರ್ ಅಂತ ಕೆಲವು ಡಾಕ್ಟರು ಹೇಳುತ್ತಾರೆ, ಕಾರಣ ಪೊಲಿಟಿಕಲ್ ಫೀವರ್ ಬಂದಮೇಲೆ ಹಾಲು ಕರೆಯುವುದು ಕಡಿಮೆ ಯಾಗುತ್ತಂತೆ ಸಾಯುವುದೂ ಇಲ್ಲ ಬದಕುವುದು ಇಲ್ಲ, ಕೊರಗಿ ಕೊರಗಿ ಕಡ್ಡಿ ಆದಂಗೆ ಆಗುತ್ತದೆಂದು ಹೇಳುತ್ತಾರೆ.

ಶ್ರೀ ಸಿ. ಎಂ. ಇಬ್ರಾಹಿಂ.—(ಯು) ಕಾಂಗ್ರೆಸ್ ಆದಂಗೆ ಆಗುತ್ತದೆ.

ಶ್ರೀ ಜಿ. ರಾಮೇಗೌಡ— ನಾನಯ್ಯನವರು ಹೇಗಿದ್ದಾರೆ, ಬಸಪ್ಪನವರು ಹೇಗಿದ್ದಾರೆ ನಾನು ಬಹಳ ವಯಸ್ಸಾಗಿದ್ದರೂ ಹೇಗಿದ್ದೇನೆ. ಆ ವಿಚಾರ ಈಗ ಬೇಡ, ಖಾಯಿಲೆ ವಾಸಿಯಾಗಬೇಕು,

ಅಧ್ಯಕ್ಷರೆ ಜಪಾನ್‌ನಲ್ಲಿ ಪಾಮಕ್ವೀನ್ ಇಂಜೆಕ್ಷನ್ ಇದೆ. ನಾನು ಮಂತ್ರಿಯಾಗಿದ್ದಾಗ ಐದು ಲಕ್ಷ ರೂಪಾಯಿ ಬಾಳತಕ್ಕ ಇಂಜೆಕ್ಷನ್ ಇಲ್ಲಿಗೆ ಬರಬೇಕು ಅಂತ ಮಾಡಿದ್ದೆ. ಅದು ಏನಾಗಿದೆ ಗೊತ್ತಿಲ್ಲ. ಈಗಲಾದರೂ ಅದಕ್ಕೆ ಇಂಡೆಂಟ್ ಮಾಡಿ ತರಿಸಿ ಎಲ್ಲಾ ರೀಜನಲ್ ಆಫೀಸುಗಳಲ್ಲಿಯೂ ಇಟ್ಟುಕೊಂಡರೆ ಬಹಳ ಜನ ಇದರಿಂದ ಪ್ರಯೋಜನ ಪಡೆಯುತ್ತಾರೆ. ಇದು ಬಹಳ ಕೆಟ್ಟ ಜ್ವರ, ಇದರಿಂದ ಭಯಂಕರವಾದ ನಷ್ಟ ನಮ್ಮಗಳಿಗೆ ಆಗಿದೆ. ಇದಕ್ಕೆ ಸಹಾಯ ಮಾಡುತ್ತಾರೆಂದು ನಾನು ನಂಬಿದ್ದೇನೆ. ಇನ್ನು ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಅಭಿವೃದ್ಧಿ ಕಾರ್ಯ ಆಗಿಲ್ಲ. ನಿಮ್ಮ ಕಾಲದಲ್ಲಿ ಅದು ಆಗಬೇಕಾದರೆ ಅದು ಏನೋ ಕಾರ್ಪೊರೇಷನ್ ಆಗಬೇಕು ಅಂತ ವರ್ಲ್ಡ್ ಬ್ಯಾಂಕಿನವರು ಹೇಳುತ್ತಾರೆ ಅಂತ ವದಂತಿ ಇದೆ. ಇನ್ನು ಮದರ್ ಡೈರಿ ಮಾಡಬೇಕೆಂದು ಹೆಬ್ಬಾಳ್‌ನಲ್ಲಿ ಲ್ಯಾಂಡ್ ಅಕ್ವೈರ್ ಮಾಡಬೇಕು ಅಂತ ಹೇಳಿ ಐದು ವರ್ಷ ಕಾಯ್ದರು ಆ ಜಮೀನಿನ ವಿಚಾರದಲ್ಲಿ ಹೈಕೋರ್ಟಿಗೆ ಹೋದರು. ಅದನ್ನು ಉಗಿದು ಬಿಟ್ಟು ಇನ್ನೊಂದು ಕಡೆ ನೋಡಬಹುದಿತ್ತು. ಈಗ ಇನ್ನೊಂದು ಜಾಗ ನೋಡಲಿಕ್ಕೆ ಹೋಗಿದ್ದಾರೆ ಅಲ್ಲಿ ಯಾರು ಕೋರ್ಟಿಗೆ ಹೋಗುತ್ತಾರೋ ಗೊತ್ತಿಲ್ಲ. ಜಾಗ ಹುಡುಕುವುದೇ ನಿಮ್ಮ ಕೆಲಸ ಆದರೆ ಡೈರಿ ಆಗುವುದು ಯಾವಾಗ ಇದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಿ ಇಲ್ಲದಿದ್ದರೆ ಮದರ್ ಡೈರಿ ಅಂತ ಬಿಟ್ಟುಬಿಡಿ ಸಿಸ್ಟರ್ ಡೈರಿ ಅಂತ ಆದರೂ ಜಾಗ್ರತೆ ಮಾಡಿ. ಬೆಂಗಳೂರಿನಲ್ಲಿರತಕ್ಕ 20 ಲಕ್ಷ ಜನಸಂಖ್ಯೆಗೆ ಕೊಡಕ್ಕ ಹಾಲನ್ನು ಶೋಧನೆ ಮಾಡಿ, ಫಾಸ್ಚುರೈಸ್ ಮಾಡಿ ಕೊಡತಕ್ಕ ಅರೇಂಜ್‌ಮೆಂಟ್ ಈಗ ಇರತಕ್ಕ ಡೈರಿಯಲ್ಲಿ ಇಲ್ಲ. ಅಧಿಕಾರಿಗಳಿಗೆ ಹೇಳಿದರೆ ಏನು ಪ್ರಯೋಜನ ಆಗುವುದಿಲ್ಲ. ರೈತರಿಗೆ ಕಷ್ಟ ಇದೆ, ಫ್ಲೆಷ್ ಸೀಸನ್, ರೈನಿ ಸೀಸನ್ ಅಂತ ಹೇಳುತ್ತಾರೆ, ಇವೊತ್ತು ತೆಗೆದುಕೊಂಡು ಬಾ ಅಂತ ಹೇಳುತ್ತಾರೆ ನಾಳೆ ಬೇಡ ಅಂತ ಹೇಳುತ್ತಾರೆ ರೈತರು ಅನೇಕ ತರಹದ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ ಇದನ್ನು ನಿಲ್ಲಿಸಬೇಕು. ಯಾವ ಕಾಲವೇ ಆಗಲಿ, ಯಾವ ಸೀಸನ್ನೇ ಆಗಲಿ ಹಾಲು ತೆಗೆದುಕೊಳ್ಳಬೇಕು. ಆ ರೀತಿ ತೆಗೆದುಕೊಂಡು ಹಾಲನ್ನು ವಿತರಣೆ ಮಾಡತಕ್ಕ ವ್ಯವಸ್ಥೆಯನ್ನು ನೀವು ಮಾಡಬೇಕು. ಡೈರಿಯಲ್ಲಿರತಕ್ಕ ಹಾಲನ್ನು ಹಂಚುವ ವ್ಯವಸ್ಥೆ ಸರಿ ಇಲ್ಲ. ಮೊದಲು ಒಂದು ಲಾರಿ ಹಾಲನ್ನು ತೆಗೆದುಕೊಂಡು ಹೋಗಿ ಹತ್ತು ಕಡೆ ನಿಲ್ಲಿಸುತ್ತಾನೆ ಮತ್ತೆ ತಿರುಗಿ ವಾಪಸ್ಸು ಬರುವಾಗ ಮಿಕ್ಕಿದ್ದು ತಂದು ಅಲ್ಲಿಯೇ ಹಾಕುತ್ತಾನೆ. ಈ ವ್ಯವಸ್ಥೆ ಸರಿಯಲ್ಲ. ಪಾಪ್ಯುಲೇಷನ್‌ಗೆ ಅನುಸಾರವಾಗಿ ಡೇ ಅಂಡ್ ನೈಟ್ ಸರ್ವೀಸ್ ಇಡಿ. ರೆಫ್ರಿಜೇಟರ್‌ಗಳಲ್ಲಿ ಹಾಲನ್ನು ಇಡುವಂತೆ ವ್ಯವಸ್ಥೆ ಮಾಡಿ. ಹಗಲು ರಾತ್ರಿ ಸರ್ವೀಸ್ ಮಾಡಿದರೂ ಖರ್ಚಾಗುತ್ತದೆ. ಹಾಲನ್ನು ಖರ್ಚುಮಾಡುವ ವಿಧಾನವನ್ನು ನಮ್ಮವರು ಅರಿತುಕೊಂಡಿಲ್ಲ. ನೀವು ಐ. ಎ. ಎಸ್. ಆಫೀಸರ್ ಹಾಕಿದ್ದೀರಾ. ನಾವು ಐ. ಎ. ಎಸ್. ಆಫೀಸರ್‌ಗಳನ್ನು ಮಾತನಾಡುವ ದೇವರು ಅಂತ ತಿಳಿದುಕೊಂಡಿದ್ದೇವೆ. ಎಲ್ಲಾ ತಿಳಿದ ಜ್ಞಾನಿಗಳು ಅಂತ ಹೇಳುತ್ತೇವೆ. ನಾನು ಇದರ ಬಗ್ಗೆ ಒತ್ತಾಯ ಮಾಡಿಹೇಳಿಲಿಕ್ಕೆ ಆಗುವುದಿಲ್ಲ. ತಾವು ಅದೇ ಶೈಲಿಯಲ್ಲಿ ಹೋದರೆ ಏನೂ ಕೆಲಸ ಆಗುವುದಿಲ್ಲ. ಅದರಲ್ಲಿ ಹೆಚ್ಚಿಗೆ ವಿಚಾರ ಮಾಡಿದಂಥ ಒಬ್ಬ ಟೆಕ್ನಿಕಲ್ ಪ್ಲ್ಯಾನ್ ಹಾಕಿ. ನೂರಾರು ಹಾಲು ಮಾರಾಟ ಕೇಂದ್ರಗಳನ್ನು ಮಾಡಿ ಏತಕ್ಕೆ ನಿಮ್ಮ ಹಾಲು ಖರ್ಚಾಗುವುದಿಲ್ಲ. ಖಂಡಿತವಾಗಿ ಖರ್ಚಾಗುತ್ತದೆ. ಇವೊತ್ತು ನೀವು ಒಂದು ಲಕ್ಷ ಲೀಟರ್ ಹಾಲು ಮಾಡುತ್ತೇವೆ ಅಂದರೆ ಪ್ರೈವೇಟ್‌ನವರು ಐದು ಲಕ್ಷ ಲೀಟರ್ ಹಾಲು ಮಾರುತ್ತಾರೆ. ಇದನ್ನು ಲೆಕ್ಕ ಹಾಕಿದರೆ ಇನ್ನೂ ಐದು ಲಕ್ಷ ಲೀಟರ್ ಹಾಲು ಮಾರುವ ಅವಕಾಶ ಇದೆ. ಬೆಂಗಳೂರಿನಲ್ಲಿ ಇಪ್ಪತ್ತು ಲಕ್ಷ ಜನಸಂಖ್ಯೆ ಇರುವಾಗ ಒಬ್ಬೊಬ್ಬರು ಅರ್ಧ ಲೀಟರ್ ಹಾಲು ಅಂದರೆ 10 ಲಕ್ಷ ಲೀಟರ್ ಹಾಲು ಬೇಕಾಗುತ್ತದೆ. ಶ್ರೀಮತಿ ಪ್ರಮಿಳಾ ಅವರು ಮಾಂಸ ತಿನ್ನುವುದಿಲ್ಲ ಅವರಿಗೆ ಎರಡು ಲೀಟರ್ ಹಾಲು ಬೇಕಾಗುತ್ತದೆ.

ಶ್ರೀ ಶೀರನಾಳಿ ಚಂದ್ರಶೇಖರ್.—ತಮಗೆ ಯಾರು ಹೇಳಿದರು.

ಶ್ರೀ ಜಿ. ರಾಮೇಗೌಡ.—ಇಂತಹವನ್ನೆಲ್ಲಾ ಕೇಳಿ ತಿಳಿದುಕೊಳ್ಳಬೇಕೇನು. ನೀವು ಓಡಾಡಿ ನಿಮ್ಮ ಕಾಲು ನೋಡಿ ಹೇಳುತ್ತೇನೆ. ನಿಮಗೆ ಯಾವ ಕಾಯಿಲೆ ಬಂದಿದೆ ಅಂತ. ಅಧ್ಯಕ್ಷರೇ, ಈ ಹಾಲು ಮಾರುವ ವ್ಯವಸ್ಥೆಯನ್ನು ಸುಧಾರಿಸಬೇಕಾಗಿದೆ. ಇನ್ನು ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಕೌನ್ಸಿಲ್‌ನವರಿಗೆ ಬೆಲೆಗಾಗಿ ಕೊಟ್ಟಿದ್ದೇವೆ ಅಂದರೆ ಪೌಡರ್ ಪ್ಲಾಂಟ್ ಹಾಕುತ್ತಾರೊ ಅಥವಾ ಪೌಡರ್ ಹಾಕುತ್ತಾರೋ. ಪ್ಲಾಂಟ್ ಹಾಕುತ್ತಾರೋ, ಐದು ವರ್ಷದಿಂದ ಆಗುತ್ತಿದೆ. ಈಗ ಸಿಮೆಂಟ್ ಸಿಕ್ಕುವುದು ಕಷ್ಟ ಅಂತ ನಿಂತಿದಿಯೋ ಹೇಗೋ ಗೊತ್ತಿಲ್ಲ ಇನ್ನು ಇವೊತ್ತು ಹಾಲು ಉತ್ಪತ್ತಿಯಾಗುವುದನ್ನು ಖರ್ಚಾಗುವುದನ್ನು ಗಮನಿಸಿದ್ದೀರಿ. ಉತ್ಪತ್ತಿಯನ್ನು ಖರ್ಚು ಮಾಡುವುದಾದರೆ ಬಡವರ ಆರ್ಥಿಕ ಪರಿಸ್ಥಿತಿ ಖಂಡಿತ

ಉತ್ತಮವಾಗುತ್ತದೆ. ಇದರಲ್ಲಿ ಯಾವುದೇ ಅನುಮಾನ ಇಲ್ಲ ಅಂತ ನನ್ನ ನಂಬಿಕೆ ಇದೆ. ಇನ್ನು ಕೆ.ಡಿ.ಡಿ.ಸಿ ಸಹಕಾರ ಸಂಘಗಳು ಇಡೀ ಕರ್ನಾಟಕದಲ್ಲಿಯೇ ಅಲ್ಲ, ಗುಜರಾತ್‌ನಲ್ಲಿಯೂ ಲಾಸ್ ಆಗತಕ್ಕ ಸಂಘಗಳು ಇಲ್ಲ. ಮೊಟ್ಟ ಮೊದಲು ಪ್ರಾರಂಭವಾದಾಗ ಬೇಕಾದಷ್ಟು ಬೋನಸ್ ಇತ್ತು. ನಮ್ಮ ಜಿಲ್ಲೆಯಲ್ಲಿಯೇ ಸುಮಾರು ಒಂದೂವರೆ ಲಕ್ಷ ರೂಪಾಯಿ ಲಾಭ ಇತ್ತು. ಅದರಲ್ಲಿ ಏನೋ ಅಧ್ಯಕ್ಷರು ಕಾರ್ಯದರ್ಶಿಗಳು ಕಂಡುಹಿಡಿದುಕೊಂಡಿದ್ದಾರೆ. ಅವರಿಗೆ ಬೋನಸ್ ಇಲ್ಲ. ಆದ್ದರಿಂದ ಆ ಸ್ಥಿತಿಯಲ್ಲಿ ತಂದಿಟ್ಟಿದ್ದಾರೆ. ಯಾವ ಸೊಸೈಟಿಯಲ್ಲೂ ಹಾಲು ಟೆಸ್ಟ್ ಮಾಡಲಿಕ್ಕೆ ಆಸಿಡ್ ಇಲ್ಲ. ಬೇಕಾದರೆ ಮಾನ್ಯ ಮಂತ್ರಿಗಳು ಹೋಗಿ ನೋಡಿಕೊಂಡು ಬನ್ನಿ. ಬೆಂಗಳೂರು ಜಿಲ್ಲೆಯಲ್ಲಿ ಯಾರು ಹಾಲು ತರುತ್ತಾರೆ ಅಂತ ಸೆಕ್ರೆಟರಿ ನೋಡುತ್ತಾ ರಾಮೇಗೌಡರು ಮನೆಯ ಹಾಲು ಅಂದರೆ ೫ ಪರ್‌ಸೆಂಟ್ ಹಾಕುತ್ತಾನೆ. ಅದೇ ತಿಮ್ಮೇಗೌಡರು ಮನೆಯ ಹಾಲು ಅಂದರೆ ೩.೫ ಪರಸೆಂಟ್ ಹಾಕುತ್ತಾನೆ ೩.೫ ಪರ್‌ಸೆಂಟ್‌ಗಿಂತಲೂ ಕಡಿಮೆ ಇದ್ದರೆ ಅವನು ರಿಜೆಕ್ಟ್ ಮಾಡಬೇಕಾಗುತ್ತದೆ. ೩.೫ ರಿಂದ ೬.೫ ರ ವರೆಗೆ ಮುಖ ನೋಡಿ ಹಾಕುತ್ತಾನೆ ಹೊರತು ಟೆಸ್ಟ್ ಮಾಡಿ ಹಾಕುವುದಿಲ್ಲ. ಇದು ರೈತರ ಕರ್ಮ. ಆದುದರಿಂದ ಎಲ್ಲಾ ಹಾಲಿನ ಸೊಸೈಟಿಗಳಲ್ಲೂ ಹಾಲನ್ನು ಟೆಸ್ಟ್ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇದರಲ್ಲಿ ಆರ್ಟಿಫಿಷಿಯಲ್ ಇನ್‌ಸಿನ್ಯುಯೇಷನ್ ಸೆಂಟರ್ಸ್ ಇಟ್ಟಿದ್ದೇವೆ ಅಂತ ಹೇಳಿದ್ದಾರೆ. ಅಲ್ಲಿಗೆ ವಾರಕ್ಕೆ ಎರಡಾವರ್ತಿ ಡಾಕ್ಟರುಗಳು ಕಾರಿನಲ್ಲಿ ಹೋಗುತ್ತಾರೆ. ಪರಿಸ್ಥಿತಿ ಈ ರೀತಿ ಇದೆ. ಈ ಡಾಕ್ಟರು ಕಾರಿನಲ್ಲಿ ಹೋಗಿದ್ದಾಗ ಹಸುಗಳಿಗೆ ಕಾಯಿಲೆ ಬರಬೇಕು. ಇಲ್ಲದೆ. ಇದ್ದರೆ ಇಲ್ಲ ಫೋನ್ ಮಾಡಿದರೆ ೧೫ ರೂಪಾಯಿ ಕೊಟ್ಟರೆ ಬರುತ್ತಾರೆ ಇವೊತ್ತು ೧೫ ರೂಪಾಯಿ ಇಲ್ಲದೇ ಇರತಕ್ಕ ಜನರು ಎಷ್ಟೋ ಜನ ಇದ್ದಾರೆ. ಇನ್ನು ಎರಡನೇ ಸಾರಿ ಬರಬೇಕು ಅಂದರೆ ೧೦ ರೂಪಾಯಿ ಕೊಡಬೇಕು. ದಯವಿಟ್ಟು ಇದನ್ನು ತಪ್ಪಿಸಿ. ಪ್ರತಿಯೊಂದು ಸೊಸೈಟಿಯಲ್ಲೂ ಕೂಡ ನೀವು ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ ರನ್ ಆಗುವಂತೆ ಮಾಡಿ. ಅದರಲ್ಲಿ ಔಷಧಿಗಳನ್ನು ಇಟ್ಟರೆ ಸುಲಭ ರೀತಿಯಲ್ಲಿ ಚಿಕಿತ್ಸೆ ಮಾಡಿಸಿ ಬದುಕತಕ್ಕ ಅವಕಾಶ ಇದೆ. ಈ ಒಂದು ಅನುಕೂಲವನ್ನಾದರೂ ಮಾಡುತ್ತೀರಾ ? ಇದು ಬಹಳ ಪ್ರಾಮುಖ್ಯವಾದುದು, ಮೊನ್ನೆ ಶ್ರೀಮಾನ್ ಹನುಮೇಗೌಡರು ಬಹಳ ಯುದ್ಧ ಮಾಡಿದರೂ. ಹಾಲಿನ ಬೆಲೆ ಹೆಚ್ಚು ಆಗಬೇಕು ೫ ಪೈಸೆ ೧೦ ಪೈಸೆ ಕೊಟ್ಟರೆ ಒಪ್ಪುವುದಿಲ್ಲ ಅಂತ ಹೇಳಿದರು ನನಗೆ ಸಂತೋಷವಾಯಿತು. ನಾನು ಅದರ ಬಗ್ಗೆ ಹೆಚ್ಚಿಗೆ ಹೇಳಲಿಕ್ಕೆ ಹೋಗುವುದಿಲ್ಲ. ನಾವು ರೈತರಿಗೆ ಕೊಡತಕ್ಕ ಬೆಲೆ ಬಹಳ ಕಡಿಮೆ ಇದೆ. ಇವೊತ್ತು ಒಣ ಹುಲ್ಲು, ಹಸಿ ಹುಲ್ಲು, ವೀಟ್ ಬ್ರಾನ್, ಕಡಳೆ ವಟ್ಟು, ಹಿಂಡಿ ಬೆಲೆ ಏರುತ್ತಿರುವುದನ್ನು ನೋಡಿದರೆ ನೀವು ಕೊಡತಕ್ಕ ಬೆಲೆ ಅವರಿಗೆ ಖಂಡಿತ ಸಾಲುವುದಿಲ್ಲ. ಸೊಸೈಟಿಗಳಿಗೆ ಸಪ್ಲೈ ಮಾಡುತ್ತೇವೆ ಎಂಬುದಾಗಿ ಹೇಳಿದ್ದಾರೆ. ಅದು ಕಳೆದ ಮೂರು ವರ್ಷಗಳಿಂದಲೂ ಇನ್ನೂ ಆಗುತ್ತಲೇ ಇದೆ. ಈ ರಾಜ್ಯದಲ್ಲಿ ನನ್ನ ಕ್ಷೇತ್ರವಾದ ದೊಡ್ಡಬಳ್ಳಾಪುರದಲ್ಲಿ ಮತ್ತು ರಾಜನಕುಂಟೆ ಹೆಚ್ಚಿಗೆ ಹೈನುಗಾರಿಕೆ ಇದೆ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಆಸಿಡ್ ಪ್ಲಾಂಟ್‌ನ್ನು ಯಾರೋ ಒಬ್ಬ ಪ್ರಭಾವಿ ವ್ಯಕ್ತಿಗಳಿಂದ ಮಂಡ್ಯಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಹಾಕಿದ್ದಾರೆ. ಇದರಿಂದ ಏನಾಗಿದೆ ಎಂದರೆ ಸೇಲ್ಸ್‌ಟ್ಯಾಕ್ಸ್ ಎರಡರಷ್ಟು ಬೀಳುತ್ತದೆ. ಮತ್ತೆ ಟ್ರಾನ್ಸ್‌ಪೋರ್ಟ್ ಚಾರ್ಜ್‌ಸ್ ಕೂಡ ಒಂದಕ್ಕೆರಡರಷ್ಟು ಬೀಳುತ್ತದೆ. ಎಲ್ಲ ಸೊಸೈಟಿಗಳಲ್ಲೂ ಆಸಿಡ್ ಇರುವಂತಹ ವ್ಯವಸ್ಥೆಯನ್ನು ಮಾಡಬೇಕು. ರೈತನು ಅಷ್ಟೊಂದು ಹಣವನ್ನು ಕೊಟ್ಟು ಕೊಂಡು ಹೋಗುವಂತಹ ಪರಿಸ್ಥಿತಿಗೆ ಇನ್ನೂ ಬಂದಿಲ್ಲ. ಒಳ್ಳೆಯ ಆಹಾರವನ್ನು ಕೊಟ್ಟರೆ ಹೆಚ್ಚು ಹಾಲನ್ನು ದನಗಳು ಕರೆಯುತ್ತವೆ. ಬಹಳ ಮುಖ್ಯವಾಗಿ ಹಸಿರು ಹುಲ್ಲನ್ನು ಕೊಡದಿದ್ದರೆ ಹಸುಗಳು ಹೆಚ್ಚು ಹಾಲನ್ನು ಕರೆಯುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ಎಗ್ಸಾಮಿನೇಷನ್ ಬೇಕಾಗಿಲ್ಲ. ಫೀಡರ್ ಡೆವಲ್ಪಮೆಂಟ್ ಎಂಬ ಸ್ಕೀಂ ಒಂದು ಇದೆ. ಅದನ್ನು ಚೆನ್ನಾಗಿ ಬೆಳೆಸಿ ಪ್ರತಿಯೊಂದು ತಾಲ್ಲೂಕಿನಲ್ಲೂ ಬರಬೇಕಾದುದು ಬಹಳ ಅವಶ್ಯಕತೆ ಇದೆ. ಇದರ ಬಗ್ಗೆ ಇಲಾಖೆಯ ಅಧಿಕಾರಿಗಳಿಗೆ ತಿಳುವಳಿಕೆ ಕೊಡಬೇಕು. ನಮ್ಮಲ್ಲಿ ೩ ಲೀಟರ್‌ನಿಂದ ೫ ಲೀಟರ್ ವರೆಗೆ ಹಾಲು ಕರೆಯುವ ಹಸುಗಳೇ ಬಹಳ ಅಪರೂಪ. ನಾನು ಮಂತ್ರಿಯಾಗಿದ್ದಾಗ ಶ್ರೀಮಾನ್ ಹನುಮೇಗೌಡರು ಅಮೇರಿಕಾಕ್ಕೆ ಹೋಗಿದ್ದರು. ಅವರು ಅಲ್ಲಿ ಏನು ನೋಡಿ ಬಂದಿರಿ ಎಂಬುದಾಗಿ ನಾನು ಕೇಳಿದ್ದಕ್ಕೆ ೪೦ ಲೀಟರ್ ಹಾಲನ್ನು ಕರೆಯತಕ್ಕಂತಹ ಹಸುವನ್ನು ನೋಡಿದೆ ಎಂಬುದಾಗಿ ಹೇಳಿದರು. ೪೦ ಲೀಟರ್ ಹಾಲನ್ನು ಕರೆಯುವಂತಹ ಹಸುವನ್ನು ನೋಡುವಂತಹ ಸುಯೋಗ ಅವರಿಗೆ ಸಿಕ್ಕಿತ್ತು. ಅದನ್ನು ಕೇಳಿ ನನಗೆ ಅತ್ಯಂತ ಆನಂದವಾಯಿತು. ಅಲ್ಲಿ ೪೦ ಲೀಟರ್ ಹಾಲನ್ನು ಹಸು ಕರೆಯುತ್ತಿದ್ದರೆ ನಮ್ಮಲ್ಲಿ ೧೪ ಲೀಟರ್ ಹಾಲನ್ನಾದರೂ ಕರೆಯಬೇಡವೆ ? ಅದನ್ನು ಮನಸ್ಸಿನಲ್ಲಿಟ್ಟು ದಯಮಾಡಿ ತಾವು ಅಂತಹ ತಳಿಯನ್ನು ನಮ್ಮ ದೇಶಕ್ಕೆ ತನ್ನಿ ಅದೇ ನಮ್ಮ ದೊಡ್ಡ

ಭಾಗ್ಯ. ಸುಮ್ಮನೆ ೨ ಲೀಟರ್. ೩ ಲೀಟರ್ ಹಾಲನ್ನು ಕರೆಯುವುದರಿಂದ ಯಾವುದೇ ರೀತಿಯ ಅನುಕೂಲ ರೈತರಿಗೆ ಆಗುವುದಿಲ್ಲ ನಾನು ತಿಳಿದಮಟ್ಟಿಗೆ ೧೦ ಲೀಟರ್‌ನಿಂದ ೩೦ ಲೀಟರ್ ಹಾಲನ್ನು ಒಂದು ದಿವಸದೊಳಗೆ ಕರೆಯುವಂತಹ ಹಸುವಿನ ತಳಿಗಳು ನಮಗೆ ಬೇಕು. ಆದ್ದರಿಂದ ಈ ಎಲ್ಲಾ ವಿಚಾರಗಳನ್ನು ಫ್ರೀಡ್‌ಲೀವ್ಸ್ ಕೊಡುವ ವ್ಯವಸ್ಥೆಯನ್ನು ತಾವು ಮಾಡಬೇಕು. ಫ್ರೀಡ್‌ಲೀವ್ಸ್‌ನ್ನು ನಾನು ತಿಳಿದಹಾಗೆ ಎಷ್ಟೆಷ್ಟೋ ಜನಗಳಿಗೆ ಕೊಟ್ಟಿದ್ದಾರೆ. ಅವರು ೫ ಗುಂಟೆಯಲ್ಲಿ ಹಾಕಿದ್ದಾರೆ. ೧ ಗುಂಟೆ ಜಮೀನನಲ್ಲೂ ಹಾಕಿದ್ದಾರೆ. ಮತ್ತೊಂದು ಸಲ ಕೇಳುವುದಕ್ಕೆ ಹೋದರೆ ೨೫೦ ರೂ. ಕೊಡಬೇಕೆಂದು ಹೇಳಿದ್ದಾರೆ. ಅದೇ ರೀತಿ ನನ್ನನ್ನು ಕೇಳುವುದಕ್ಕೆ ಬಂದರು ನಾನು ಅವರಿಗೆ ಹೇಳಿದೆ, ನೀವು ಕೊಟ್ಟಿರುವುದನ್ನು ಅಲ್ಲಿ ಹಾಕಿದ್ದೇನೆ, ಬೇಕಾದರೆ ಬಂದು ಕಿತ್ತುಕೊಂಡು ಹೋಗಿ. ಆದರೆ ನಾನು ಮಾತ್ರ ಒಂದು ಪೈಸೆ ಕೊಡುವುದಿಲ್ಲ ಎಂಬುದಾಗಿ ಹೇಳಿದೆ. ಇದಕ್ಕಾಗಿ ಫ್ರೂಟ್ಸ್ ಡೆವಲಪ್‌ಮೆಂಟ್‌ಗಾಗಿ ಬೇಕಾದಷ್ಟು ದುಡ್ಡು ಖರ್ಚಾಗುತ್ತಿದೆ.

ಶ್ರೀ ಚೌಡರೆಡ್ಡಿ.—ಫ್ರೂಟ್ ಲೀವ್ಸ್‌ಗೆ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ ಎಂಬುದಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದಕ್ಕೆ ಕಾರಣ ಏನೆಂದರೆ ಅದನ್ನು ಬೆಳೆಸಬೇಕಾದರೆ ಈ ಹುಲ್ಲನ್ನು ಬೆಳೆಸಬೇಕಾದರೆ ಗೊಬ್ಬರ ಹಾಕಬೇಕಾಗುತ್ತದೆ. ಆದರಲ್ಲೂ ಇವತ್ತು ಗೊಬ್ಬರದ ಬೆಲೆ ವಿಪರೀತ ಗಗನಕ್ಕೆ ಏರಿದೆ. ಇದರಿಂದಾಗಿ ಫ್ರಾಡ್ ಡೆವಲಪ್‌ಮೆಂಟ್‌ನವರು ಈ ಒಂದು ಯೋಜನೆಯನ್ನು ಈ ವರ್ಷದಿಂದ ತೆಗೆದುಹಾಕಿದ್ದಾರೆ. ಮುಖ್ಯವಾಗಿ ಬೆಳೆ ಸರಿಯಾಗಿ ಕೊಡುವುದಿಲ್ಲ, ಆದ್ದರಿಂದ ಇದಕ್ಕೆ ನಿಜವಾದ ರೇಟನ್ನು ಕೊಡದಿದ್ದರೆ ಈ ಯೋಜನೆ ಸರಿಯಾಗಿ ಆಗುವುದಿಲ್ಲ. ಆದ್ದರಿಂದ ಈಗ ತೆಗೆದು ಕೊಳ್ಳುತ್ತಿರುವ ರೇಟು ಹೆಚ್ಚೇನೂ ಅಲ್ಲ. ಇದನ್ನು ಮಾನ್ಯ ರಾಮೇಗೌಡರು ಅವರು ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಪ್ರಾರಂಭ ಮಾಡಿದರು. ಈಗಿನ ಮಂತ್ರಿಗಳು ಅದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ನಾವುಗಳೆಲ್ಲರೂ ಸಹಕಾರ ಕೊಡೋಣ.

ಶ್ರೀ ಜಿ. ರಾಮೇಗೌಡ.—ಬಹಳ ಪ್ರೀತಿಯಿಂದ, ಬಹಳ ಸಾವುದಾನದಿಂದ ಅವರ ಮಾತನ್ನು ಕೇಳಿದ್ದೇನೆ. ನಿಜ, ಬೆಂಗಳೂರು ಯೂನಿಯನ್‌ಗೆ ಅಧ್ಯಕ್ಷರಾಗಿದ್ದಂತಹ ಕಾಲದಲ್ಲಿ ನಡೆದಂತಹದ್ದನ್ನು ಅವರು ಹೇಳಿದ್ದಾರೆ. ಅದು ಅವರ ತಪ್ಪು ಅಲ್ಲ. ಅವರನ್ನು ಅಲ್ಲಿಂದ ಕಿತ್ತುಹಾಕಬಾರದಾಗಿತ್ತು. ಈಗ ಅವರನ್ನೇ ಪುನಃ ಆ ಯೂನಿಯನ್ನಿನ ಅಧ್ಯಕ್ಷರನ್ನಾಗಿ ಮಾಡಿ. ನಾನೂ ಗ್ರಾಸ್ ಡೆವಲಪ್‌ಮೆಂಟ್ ಹಾಕಿದ್ದೇನೆ. ಬಂದು ನೋಡಿ. ಆದರೆ ಅದಕ್ಕೆ ಗೊಬ್ಬರ ಹಾಕದಿದ್ದರೆ ಅದು ಬೆಳೆಯುವುದಿಲ್ಲ. ಮತ್ತೆ ಹಸಿ ಹುಲ್ಲು ಇಲ್ಲದಿದ್ದರೆ ಹಸುಗಳು ಹಾಲನ್ನೇ ಕರೆಯುವುದಿಲ್ಲ. ಆದರೆ ರೈತನು ಈ ಹೈನುಗಾರಿಕೆಗೆ ಬೇಕಾದಂತಹ ಪದಾರ್ಥಗಳನ್ನು ಹೆಚ್ಚು ಬೆಲೆಗೆ ಕೊಟ್ಟು ಕೊಡಬೇಕಾಗುತ್ತದೆ. ಇದರಿಂದಾಗಿ ಹೈನುಗಾರಿಕೆಯನ್ನು ಬಿಡುತ್ತಿದ್ದಾರೆ. ಕಾರಣ ಇದರಿಂದ ಏನೂ ಉಪಯೋಗವಿಲ್ಲ. ಲಾಸಾಗುತ್ತಿದೆ. ಇದರಿಂದಾಗಿ ಈ ರಾಜ್ಯದಲ್ಲಿರುವ ಹೈನುಗಾರಿಕೆಯ ಬಗ್ಗೆ ಒಂದು ಸೆನ್ಸಸ್ ಮಾಡುವುದು ಅತ್ಯಂತ ಅವಶ್ಯಕ ಇದೆ. ಇದರ ಬಗ್ಗೆ ನಾನು ಕೆ.ಡಿ.ಡಿ.ಸಿ. ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಅವರು ಜೇಪಿನಲ್ಲಿ ಬಂದು ಸೆನ್ಸಸ್ ಮಾಡುತ್ತೇವೆಂದು ಹೇಳಿದ್ದಾರೆ. ಬೆಂಗಳೂರಿನಲ್ಲಿ ಕೊಳಚೆ ನೀರಿನಲ್ಲಿ ಹುಲ್ಲನ್ನು ಬೆಳೆಸುತ್ತಾರೆ. ಅದನ್ನು ನಮ್ಮ ಹಸುಗಳೂ ತಿನ್ನುವುದೇ ಇಲ್ಲ. ನಾವು ಹಾಕುತ್ತಿರತಕ್ಕಂತಹ ಗ್ರಾಸ್‌ಗೆ ಎನ್.ಬಿ. ೨೧ ಗೊಬ್ಬರವನ್ನು ಹಾಕದಿದ್ದರೆ ಬೆಳೆಯುವುದೆ ಇಲ್ಲ. ಹಸಿರು ಹುಲ್ಲು ಬೆಳೆಯಬೇಕಾದರೆ ಗೊಬ್ಬರ ಹಾಕಬೇಕು. ಮತ್ತು ನೀರನ್ನು ಕೊಡಬೇಕು. ಬೇಸಾಯ ಮಾಡಬೇಕು. ಇಷ್ಟೆಲ್ಲಾ ಮಾಡಿದರೆ ಹಸಿರು ಹುಲ್ಲು ಬರುತ್ತದೆ. ಇಲ್ಲದಿದ್ದರೆ ಬರುವುದಿಲ್ಲ. ಈ ರೀತಿ ಮಾಡುವಂತಹ ಹೈನುಗಾರರಿಗೆ ಸರ್ಕಾರ ಪ್ರೋತ್ಸಾಹ ಕೊಡಬೇಕು.

ಮತ್ತೆ ಮಾನ್ಯ ಅಧ್ಯಕ್ಷರೆ, ಈ ಇಲಾಖೆಯವರು ನಡೆಸುತ್ತಿರುವ ಪಶು ವೈದ್ಯಾಲಯ ಒಂದು ಕಂಟೋನ್ಮೆಂಟ್ ರೈಲ್ವೇ ಸ್ಟೇಷನ್‌ನ ಎದುರುಗಡೆ ಇದೆ. ಇನ್ನೊಂದು ಆಸ್ಪತ್ರೆಯನ್ನು ಮಂಜೂರು ಮಾಡುವುದಕ್ಕಿಂತ ಇರತಕ್ಕಂತಹ ಆ ಆಸ್ಪತ್ರೆಯನ್ನೆ ಇಂಪ್ರೂವ್ ಮಾಡಬೇಕು. ಆ ಒಂದು ಆಸ್ಪತ್ರೆ ಕಳೆದ ೧೦೦ ವರುಷಗಳಿಂದಲೂ ಹಾಗೇ ಇದೆ. ನಾವುಗಳು ಏನಾದರೂ ಆ ಆಸ್ಪತ್ರೆಯನ್ನು ನೋಡಿದ್ದೀರಾ? ನೀವೇನಾದರೂ ನಾಯಿಯನ್ನು ಸಾಕಿದ್ದರೆ ಅಲ್ಲಿಗೆ ಹೋಗಿರುತ್ತೀರಾ, ಇಲ್ಲದಿದ್ದರೆ ಇಲ್ಲ.

ಛೇರ್ಮನ್.—ಇಲ್ಲ.

ಶ್ರೀ ಜಿ. ರಾಮೇಗೌಡ.—ತಮ್ಮ ಕಾಲದಲ್ಲಾದರೂ ಆ ಆಸ್ಪತ್ರೆಯನ್ನು ಇಂಪ್ರೂವ್ ಮಾಡಿ. ಅಲ್ಲಿ ಒಂದು ಎಕ್ಸ್‌ರೇ ಯೂನಿಟ್ ಇರಲೇಬೇಕಾಗುತ್ತದೆ. ಕಾರಣ ದನಗಳು ಮೇವನ್ನು ತಿನ್ನುತ್ತಿರುವಾಗ ಕಬ್ಬಿಣದ ತಂತಿ, ಕಡ್ಡಿ ಕಸ ಅಂತಹದು ಇಂತಹದು ಎಲ್ಲವನ್ನೂ ತಿಂದುಬಿಡುತ್ತದೆ. ಅದು ಹೊಟ್ಟೆಯೊಳಗೆ ಸೇರಿಕೊಂಡು ಹಾಗೆ ಇದ್ದು ಬಿಡುತ್ತದೆ. ಆ ಹಸು ನನಗೆ ಇಂತಹ ಕಾಯಿಲೆ ಇದೆ ಎಂಬುದಾಗಿ ಹೇಳುವ ಹಾಗೆ ಇಲ್ಲ. ಇದರಿಂದಾಗಿ ಪ್ರತಿಯೊಂದು ಹಸುವನ್ನೂ ಕೂಡ ಆಸ್ಪತ್ರೆಗೆ ಬಂದಾಗ ಎಕ್ಸ್‌ರೇ ತೆಗೆಯುವುದನ್ನು ಮಾಡಬೇಕು. ಮತ್ತೆ ನಾನು ಕಳೆದ ೧೫ ದಿವಸದ ಕೆಳಗೆ ನನ್ನ ಒಂದು ಹಸು ಕಾಲು ಮುರಿದುಕೊಂಡಿತ್ತು. ಆ ಹಸುವನ್ನು ಲಾರಿಯ ಮೇಲೆ ತಂದು ಅಲ್ಲಿ ಬಿಟ್ಟಿದ್ದೇನೆ. ಬಂದ ದಿವಸ ಇದನ್ನು ಎಕ್ಸ್‌ರೇ ತೆಗೆಯಿರಿ ಎಂಬುದಾಗಿ ಕೇಳಿಕೊಂಡೆ. ಇಲ್ಲಿಗೆ ೧೫ ದಿವಸಗಳಾದರೂ ಯಾರೂ ಇದರ ಕಡೆ ನೋಡುವವರೇ ಇಲ್ಲ. ಎಕ್ಸ್‌ರೇ ತೆಗೆಯಲಿಕ್ಕೆ ಫಿಲಂ ಇಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ಇದು ಬೆಂಗಳೂರು ನಗರದ ರಾಜಧಾನಿಯಲ್ಲೇ ಈ ತರಹ ಆದರೆ ಇನ್ನು ಹಳ್ಳಿಕಡೆ ಯಾವ ರೀತಿ ಇರಬಹುದೆಂಬುದನ್ನು ತಾವು ಊಹೆ ಮಾಡಿಕೊಳ್ಳಬಹುದು. ನಾನು ಹೋದರೆ ಸಾಕು ಅದು ಎದ್ದು ನಿಂತು ಬಿಡುತ್ತದೆ. ಕಾರಣ ನಾನು ಅಲ್ಲಿಗೆ ಹೋದಾಗಲೆಲ್ಲ ಹುಲ್ಲನ್ನು ತೆಗೆದುಕೊಂಡು ಹೋಗುತ್ತೇನೆ. ಇದರಿಂದಾಗಿ ನಾನು ಹೋದರೆ ಸಾಕು ಹುಲ್ಲು ತಂದಿದ್ದಾರೆಂದು ಎಂದು ಎದ್ದು ನಿಂತುಕೊಂಡು ಬಿಡುತ್ತದೆ.

೩–೩೦. ಪಿ. ಎಂ.

ರೈತರಿಗೆ ಬಹಳ ಕಷ್ಟವಿರುವುದರಿಂದ ಇಂತಹ ಕೇಂದ್ರಗಳು ಕೋಲಾರ, ತುಮಕೂರು ಇಂತಹ ದೊಡ್ಡದೊಡ್ಡ ಕೇಂದ್ರಗಳಲ್ಲಿ ಸ್ಥಾಪನೆಯಾಗಬೇಕೆಂದು ನಾನು ಕಳಕಳಿಯಿಂದ ಸರ್ಕಾರವನ್ನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ. ಆಸ್ಪತ್ರೆಗಳಲ್ಲಿ ಶುಲ್ಕ ಹಾಕಿದರೂ ಚಿಂತೆಯಿಲ್ಲ ಕುಂಟೆತ್ತುಗಳಿಗೆ ಒಂದು ವ್ಯವಸ್ಥೆ ಆಗುವ ರೀತಿಯಲ್ಲಿ ಆಸ್ಪತ್ರೆಗಳನ್ನು ನಿರ್ಮಾಣ ಮಾಡಬೇಕು. ಇದರಿಂದ ಪಶುಗಳಿಗೆ ಒಂದು ನೆಮ್ಮದಿ ಸಿಗಬೇಕು ಎಂದು ಹೇಳುತ್ತೇನೆ.

ಇನ್ನು ಬಾಫ್ಕೋ ಬಗ್ಗೆ ಹೇಳುತ್ತೇನೆ. ಬೆಂಗಳೂರು ಅನಿಮಲ್ ಫುಡ್ ಕಾರ್ಪೊರೇಷನ್ ಎಂದು ಇದೆ. ಆಹಾ, ಅಲ್ಲಿನ ವಿಚಿತ್ರವೋ ವೈಚಿತ್ರ್ಯವೊ......

ಶ್ರೀ ಕೆ. ಎಚ್. ಶ್ರೀನಿವಾಸ್.—ಅದಷ್ಟು ಈಗ ತೆಗೆದುಹಾಕಲಾಗಿದೆಯೆಂದು ಕಾಣುತ್ತದೆ.

ಶ್ರೀ ಜಿ. ರಾಮೇಗೌಡ.—ಅದನ್ನು ನಿಮ್ಮ ಸರ್ಕಾರ ಬಂದಮೇಲೆ ತೆಗೆದುಹಾಕಿರಬಹುದೆಂದ ಕಾಣುತ್ತದೆ. ಇಲ್ಲಾ ಇದನ್ನು ತೆಗೆದುಹಾಕಬಾರದು. ಇದು ಇರಬೇಕು. ಮಾನ್ಯ ಸದನದ ಅಧ್ಯಕ್ಷ ಪೀಠವನ್ನು ಅಲಂಕರಿಸಿರುವ ಮಾನ್ಯ ಕೃಷ್ಣಪ್ಪನವರು ತೂಕ ಜಾಸ್ತಿ ಆಗಿರುವುದರಿಂದ ಬರೀ ಕೋಳಿ ಮತ್ತು ಮೀನನ್ನು ತಿನ್ನುತ್ತಿದ್ದಾರೆಂದು ಯಾರೋ ಒಬ್ಬರು ನನಗೆ ಹೇಳಿದರು. ಈಗ ಮಾಂಸದ ಬೆಲೆ ಕೆ.ಜಿ.ಗೆ. ೨೫ ರೂಪಾಯಿಗಳಾಗಿವೆ. ಆದ್ದರಿಂದ ಈ ಬಗ್ಗೆ ಮದ್ರಾಸ್ ಸರ್ಕಾರದವರು ಯಾವ ವಿಧವನ್ನು ಅನುಸರಿಸುತ್ತಿದ್ದಾರೆ ಅದನ್ನು ನೋಡಿಕೊಂಡು ಇದನ್ನೂ ಇಂಪ್ರೂವ್ ಮಾಡುವುದಕ್ಕೆ ಮನಸ್ಸುಮಾಡಬೇಕೆಂದು ಮಾನ್ಯ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈ ಕಾರ್ಪೊರೇಷನ್‌ನನ್ನು ಏನಾದರೂ ತೆಗೆದುಹಾಕಿದ್ದರೆ ಪುನಃ ಅದನ್ನು ಅಸ್ತಿತ್ವಕ್ಕೆ ತರಬೇಕೆಂದು ಕೇಳಿ ಕೊಳ್ಳುತ್ತೇನೆ. ಛೇರ್ಮನ್‌ಗಳನ್ನು ತೆಗೆದುಹಾಕಿದಿರಿ. ಯಾರನ್ನೂ ನೇಮಕ ಮಾಡಿಲ್ಲ. ನಿಮಗೆ ಬೇಕಾದವರನ್ನು ನೇಮಕ ಮಾಡಿ ನಾವು ಬೇಡ ಎನ್ನುವುದಿಲ್ಲ. ಯೂನಿಯನ್ ಛೇರ್ಮನ್‌ಗಳನ್ನು ತೆಗೆದಿರಿ, ಒಬ್ಬರನ್ನೂ ಹಾಕಲಿಲ್ಲ ನಿಮಗೆ ಯಾರು ಸಿಗುತ್ತಾರೋ ಅವರನ್ನು ಹಾಕಿಕೊಂಡು ಹೋಗಿ.

ಇನ್ನು ರೆಡ್‌ಡೇನ್ ಫಾರಂ ಬಗ್ಗೆ ಹೇಳಬೇಕೆಂದು ಅಲ್ಲಿ ಒಂದು ವೈಶಿಷ್ಟ್ಯ ಇದೆ. ಅಲ್ಲಿ ಟಿ. ಬಿ. ಬಂದಿರತಕ್ಕ ಒಂದುನೂರು ಹಸುಗಳು ಅಲ್ಲಿ ಇವೆ. ಅವುಗಳ ಕೆಲಸ ಏನೆಂದರೆ ಹುಲ್ಲುತಿನ್ನುವುದು, ಸಗಣಿ ಹಾಕುವುದು ನಂತರ ಮಲಗಿ ನಿದ್ರೆ ಮಾಡುವುದು ಇಷ್ಟೇ. ಏಕೆ ಇವುಗಳನ್ನು ಹಾಕಿಕೊಂಡಿದ್ದೀರೋ ನನಗೆ ಗೊತ್ತಿಲ್ಲ. ಇವುಗಳ ಹಾಲನ್ನು ಯಾರೂ ಕುಡಿಯುವುದಿಲ್ಲ. ಆದರೂ ಆ ಹಸುಗಳನ್ನು ಕಾಪಾಡಿಕೊಂಡು ಬರಲಾಗಿದೆ. ಅವುಗಳನ್ನು ಏನು ಮಾಡಬೇಕು ಎಂಬುದರ ಬಗ್ಗೆ ನಾನು ಇಲ್ಲಿ ಹೇಳುವುದಿಲ್ಲ. ಅದನ್ನು ಮಾನ್ಯ ಮಂತ್ರಿಗಳ ಕಛೇರಿಗೆ ಬಂದು ಹೇಳುತ್ತೇನೆ. ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಲಿ. ಆದುದರಿಂದ ಇವನ್ನು ಅದಷ್ಟು ಬೇಗ ತೆಗೆದುಬಿಡಿ. ಯಾವರೀತಿಯಲ್ಲಾದರೂ ತೆಗೆಯಬಹುದು. ಇವುಗಳನ್ನು ತೆಗೆಯುವುದರಿಂದ ಬೇರೆಯವಕ್ಕೆ ರೋಗಬರುವುದು ತಪ್ಪುತ್ತದೆ. ಸ್ಟೇಟ್ ಎಕ್ಸ್‌ಚೆಕರ್‌ಗೆ

ಖರ್ಚು ಕಡಿಮೆಯಾಗುತ್ತದೆ. ಇದರಿಂದ ಒಳ್ಳೆಯದಾಗುತ್ತದೆ. ಈ ಫಾರ್ಮ್‌ನಲ್ಲಿ ಒಂದು ಕೆಚ್ಚಲುಳ್ಳ ಹಸುಗಳೂ ಸಹಾ ಇದೆ. 2 ಕೆಚ್ಚಲುಗಳು ಇರತಕ್ಕಂತಹ ಹಸುಗಳೂ ಸಹಾ ಇವೆ. ಈ ಬಗ್ಗೆ ಗಮನ ಕೊಡಬೇಕು. ಇದರಿಂದ ಬಹಳ ಕಷ್ಟವಾಗುತ್ತದೆ. ಈ ರೀತಿ ನಮ್ಮ ಪಶುಸಂಗೋಪನಾ ಇಲಾಖೆ ಯಲ್ಲಿ ಹಲವಾರು ಒಳ್ಳೆ ಕೆಲಸಗಳನ್ನು ಮಾಡುವುದಕ್ಕೆ ಅವಕಾಶಗಳಿವೆ. ನಾನು ಇನ್ನೂ ಎರಡು ಮೂರು ವಿಚಾರಗಳನ್ನು ಹೇಳಬೇಕೆಂದಿದ್ದೆ. ಕಾಲಾವಕಾಶವಿಲ್ಲದ್ದರಿಂದ ನಾನು ಇಷ್ಟಕ್ಕೇ ಭಾಷಣವನ್ನು ನಿಲ್ಲಿಸ ಬೇಕು. ಮಾನ್ಯ ಶೀರ್ನಾಳಿ ಚಂದ್ರಶೇಖರ್ ಅವರು ಅವರ ಪ್ರದೇಶಗಳಲ್ಲಿ ಇರತಕ್ಕ ಹಸುಗಳ ವಿಚಾರ ವನ್ನು ಏನು ಹೇಳುತ್ತಾರೋ ಅದನ್ನು ಕೇಳಬೇಕಾಗಿದೆ. ಅದರ ಪ್ರದೇಶದಲ್ಲಿನ ಹಸುಗಳು ಹೋಗುತ್ತಿ ದ್ದರೆ ಅದನ್ನು ನೋಡುವುದಕ್ಕೇ ಒಂದು ಆನಂದ. ಅದರ ಹಸುಗಳ ಕೆಚ್ಚಲುನೋಡಬೇಕಾದರೆ ನಾವು ರಸ್ತೆಯಲ್ಲಿ ಮಲಗಿಕೊಳ್ಳಬೇಕಾಗುತ್ತದೆ. ಹಳ್ಳಿಗಳಲ್ಲಿರತಕ್ಕ ಹಸುಗಳ ಅಭಿವೃದ್ಧಿ ಮಾಡಿದರೆ ಹಳ್ಳಿಯ ಅಭಿವೃದ್ಧಿ ಮಾಡಿದಂತಾಗುತ್ತದೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಮಾದೇಗೌಡ (ಬನ್ನೂರು).—ಮಾನ್ಯ ಅಧ್ಯಕ್ಷರೆ, ಪಶು ಸಂಗೋಪನೆ ವಿಷಯದಲ್ಲಿ ನಾನು ಆ ವಿಚಾರ ಮಾಡಲಾಗಿ ನಾನು ಈ ಬಗ್ಗೆ ಮಾತನಾಡತಕ್ಕದ್ದು ಅನಿವಾರ್ಯವೆನಿಸಿದ್ದರಿಂದ ಒಂದೆ ರಡು ಮಾತುಗಳನ್ನು ಈ ಬಗ್ಗೆ ಮಾತನಾಡುವುದಕ್ಕೆ ಬಯಸುತ್ತೇನೆ. ಆದರಲ್ಲೂ ಕೂಡ ಹೈನುಗಾರಿಕೆ ವಿಚಾರದಲ್ಲಿ ಆಳವಾದ ಅನುಭವ ಪಡೆದಿರತಕ್ಕ ಮತ್ತು ಹೈನುಗಾರಿಕೆ ಕಸುಬನ್ನೆ ನಂಬಿಕೊಂಡಿರತಕ್ಕ ಸಾಮಾನ್ಯ ಜನರ ವಿಚಾರದಲ್ಲಿ ಬಹಳ ಕಳಕಳಿ ಇರತಕ್ಕ ನಮ್ಮ ಮಾನ್ಯ ಮಂತ್ರಿಗಳು ಈ ಒಂದು ಖಾತೆ ಯನ್ನು ಹೊಂದಿದ್ದಾರೆ. ಇದರಿಂದ ನನಗೆ ಬಹಳ ಸಂತೋಷವಾಗಿದೆ. ಆದರೆ ಇವತ್ತಿನ ದಿವಸ ನಾನು ಮೂಲಭೂತವಾಗಿ ಇದರ ವಿಚಾರವಾಗಿ ಮಾತನಾಡಬೇಕಾದರೆ ಸಾಮಾನ್ಯವಾದಂತಹ ಬದಲಾವಣೆಯಾದ ಪರಿಸ್ಥಿತಿಯಲ್ಲಿ ಸಂದರ್ಭಕ್ಕೆ ತಕ್ಕಂತೆ ನಮ್ಮ ಮಾನ್ಯ ಮಂತ್ರಿಗಳು ಏನು ಅಂದಾಜನ್ನು ತಯಾರು ಮಾಡ ಬೇಕಾಗಿತ್ತೋ ಆ ರೀತಿ ಆಗಿಲ್ಲ. ಬಹುಶಃ ಈ ನಮ್ಮ ಸರ್ಕಾರದ ಖಜಾನೆಯ ಹಿತದೃಷ್ಟಿಯಿಂದ ನಮ್ಮ ಎಕನಾಮಿಕ್ ಇರಬೇಕಾಗುತ್ತದೆ. ಆದರೆ ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತೆಗೆದುಕೊಂಡು ಹೆಚ್ಚಿನ ಒಂದು ದುಡ್ಡನ್ನು ಈ ಇಲಾಖೆಗೆ ಒದಗಿಸಿಕೊಡಬೇಕಾಗಿತ್ತು. ಅದನ್ನು ಮುಂದೆ ಮಾಡಬೇಕೆಂದು ನಾನು ಕಳಕಳಿಯಿಂದ ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಧ್ಯಕ್ಷರೆ, ನಾನು ಏಕೆ ಹೇಳುತ್ತಿದ್ದೇನೆಂದರೆ, ಬದಲಾದ ಪರಿಸ್ಥಿತಿ ಎಂದರೆ ಇವತ್ತು ನಮ್ಮ ಸರ್ಕಾರದಲ್ಲಿ ಮುಖ್ಯವಾಗಿ ಆಸ್ಪತೆ ಗಳ ವಿಚಾರದಲ್ಲಿ ಎರಡು ಇಲಾಖೆಗಳನ್ನು ನಾವು ನೋಡುತ್ತಿದ್ದೇವೆ. ಪಶುಸಂಗೋಪನೆಗಳಿಗಾಗಿ ಇರ ತಕ್ಕ ಆಸ್ಪತ್ರೆಗಳು ಮತ್ತು ನಮ್ಮ ಸಾಮಾನ್ಯ ಜನರಿಗೆ ಸೌಕರ್ಯಗಳನ್ನು ಒದಗಿಸತಕ್ಕಂತಹ ಆಸ್ಪತ್ರೆಗಳು. ಆದರೆ ಇವತ್ತಿನ ಒಂದು ಪರಿಸ್ಥಿತಿಯನ್ನು ನೋಡಿದರೆ, ಜನರ ಒಂದು ಸೌಕರ್ಯಕ್ಕಾಗಿ ಒದಗಿಸತಕ್ಕ ಆಸ್ಪತ್ರೆಗಳು ಏನಿವೆ ಅವುಗಳಿಗೆ ಒದಗಿಸಿರುವ ಹಣ ಏನಿದೆ ಅದನ್ನೂ ಹೈನುಗಾರಿಕೆಯ ಅಭಿವೃದ್ಧಿಗಾಗಿ ಮತ್ತು ಅವುಗಳ ಆಸ್ಪತ್ರೆಗಾಗಿ ಒದಗಿಸತಕ್ಕ ಹಣ ಏನಿದೆ ಇವೆರಡನ್ನೂ ಹೋಲಿಸಿದಾಗ ಬಹುಶಃ ನಾವು ಹಳ್ಳಿಗಾಡಿನಲ್ಲಿರತಕ್ಕ ಪರಿಸ್ಥಿತಿಯನ್ನು ನಾವು ನಿಜವಾಗಿಯೂಕೂಡ ಅರಿತಿದ್ದೇವೆಯೋ ಇಲ್ಲವೋ ಎಂಬುದು ನಮ್ಮ ಮನಸ್ಸಿಗೆ ಬರುತ್ತದೆ. ಇವತ್ತು ಅಧ್ಯಕ್ಷರೆ, ಒಂದು ಮಾತನ್ನು ತಮಾಷೆಗೆ ಹೇಳುತ್ತೇನೆ. ಇವತ್ತು ನಮ್ಮ ಹಳ್ಳಿಗಾಡಿನಲ್ಲಿ ಏನು ಜನರಿದ್ದಾರೆ ಅವರು ದನಗಳಾಗಿದ್ದಾರೆ, ಏನು ದನಗಳು ಇವೆ ಅವು ಜನಗಳಾಗಿವೆ ಎಂದು. ಇಂತಹ ಪರಿಸ್ಥಿತಿ ನಮ್ಮ ಹಳ್ಳಿಗಳಲ್ಲಿ ಬಂದಿದೆ. ಬದಲಾದ ಪರಿಸ್ಥಿತಿಯಲ್ಲಿ ಶ್ರೀ ರಾಮಕೃಷ್ಣ ಅವರು ಏನು ಜನರಿಗಾಗಿ ಆಸ್ಪತ್ರೆಗಳ ಸೌಕರ್ಯವನ್ನು ಒದಗಿಸಿಕೊಟ್ಟಿದ್ದಾರೆ ಅದರಲ್ಲಿ ಅರ್ಧಭಾಗವನ್ನಾ ದರೂ ಕೂಡ ಈ ಪಶುಸಂಗೋಪನಾ ಆಸ್ಪತ್ರೆಗಳಿಗೆ ಒದಗಿಸಿಕೊಡಬೇಕಾಗಿತ್ತೆಂದು ನನ್ನ ಒಂದು ಕಳಕಳಿಯ ಮನವಿ.

ಈವತ್ತಿನ ದಿವಸ ಹಳ್ಳಿಗಾಡುಗಳಲ್ಲಿ ನೋಡಿದರೆ ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ ನಮ್ಮ ಊರಿನಲ್ಲಿಯೇ ಒಂದು ಮನೆಯಲ್ಲಿ ಒಂದು ಎರಡು ಹಸುಗಳನ್ನು ಇಟ್ಟುಕೊಂಡಿರುವುದನ್ನು ನಾವು ನೋಡಿದ್ದೇವೆ. ತಮ್ಮ ಮಕ್ಕಳು ಜ್ವರ ಕಾಯಿಲೆ ಬಿದ್ದರೂ ಕೂಡ ಅಲಸ್ಯಮಾಡಿರತಕ್ಕಂಥ ಸಂದರ್ಭ ಗಳು ಇರುತ್ತವೆ ಆದರೆ ತಾವು ಮೇಯಿಸಿ ಹಾಲನ್ನು ಕರೆಯತಕ್ಕಂಥ ಹಸುಗಳು ಏನಾದರೂ ಕಾಯಿಲೆಗೆ ಒಳಗಾದರೆ ಆ ಕೂಡಲೇ ಅದರ ಶುಶ್ರೂಷೆಯ ಕಡೆ ಹೆಚ್ಚು ಗಮನವನ್ನು ಕೊಡುತ್ತಾರೆ. ಇಂಥ ಪರಿಸ್ಥಿತಿ ಯಲ್ಲಿ ನಾವು ಹಳ್ಳಿಗಾಡಿನಲ್ಲಿರತಕ್ಕಂಥ ಜಾನುವಾರುಗಳಿಗೆ ಕೊಡುವ ಪ್ರೋತ್ಸಾಹವನ್ನು ನೋಡಿದರೆ

ನಿಜಕ್ಕೂ ಇದು ಸಮಾಧಾನ ಕೊಡತಕ್ಕಂಥದ್ದಲ್ಲ. ಅವರು ಸಾಹುಕಾರರಾಗಬೇಕು ಎನ್ನುವ ದೃಷ್ಟಿಯಿಂದ ಮಾಡತಕ್ಕಂಥ ಉದ್ಯೋಗವಲ್ಲ, ಎರಡು ಹೊತ್ತು ಊಟಕ್ಕಾಗಿ ಮಾಡತಕ್ಕಂಥ ಈ ಕೆಲಸಕ್ಕೆ ತಮ್ಮ ಮಕ್ಕಳನ್ನೂ ನಿರ್ಲಕ್ಷ ಮಾಡಿ ದನಗಳನ್ನು ಪೋಷಣೆ ಮಾಡತಕ್ಕಂಥ ಜನರ ಬವಣೆಯನ್ನು ನೋಡಿದರೆ ನನಗಂತೂ ವೈಯಕ್ತಿವಾಗಿ ವ್ಯಥೆಯಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಒಂದು ಸಾಮಾನ್ಯವಾದ ನಿಯಮವನ್ನೇ ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಅಧ್ಯಕ್ಷರೇ ಹತ್ತಾರು ವರ್ಷಗಳಿಂದ ನಡೆಸಿಕೊಂಡು ಬಂದಂಥ ರೀತಿಯಲ್ಲಿ ನಡೆಯುವುದಾದರೂ ಲಕ್ಷಾಂತರ ಬಡ ಕುಟುಂಬಗಳ ಮೇಲೆ ಅಲಕ್ಷತನವನ್ನು ತೋರಿದಂತಾಗುತ್ತದೆಂದು ಹೇಳಬೇಕಾಗುತ್ತದೆ, ಈ ದೃಷ್ಟಿಯಿಂದ ನಾವು ಜನರಿಗೆ ಯಾವ ಪ್ರಮಾಣದಲ್ಲಿ ಆಸ್ಪತ್ರೆಗಳನ್ನು ತೆರೆಯುತ್ತಿದ್ದೇವೆಯೋ ಅಷ್ಟೇ ಪ್ರಮಾಣದಲ್ಲಿ ರಾಜ್ಯದಲ್ಲಿ ಆಸ್ಪತ್ರೆಗಳನ್ನು ದನಗಳಿಗಾಗಿ ತೆರೆಯಬೇಕು. ಒಂದೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಆಸ್ಪತ್ರೆಯನ್ನು ತೆಗೆಯತಕ್ಕಂಥ ಉದಾರ ಮನೋಭಾವನೆಯನ್ನು ಮಾನ್ಯ ಮಂತ್ರಿಯವರು ತೋರಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರೇ ಈವತ್ತಿನ ದಿವಸ ಜನರಿಗೆ ಯಾವ ರೀತಿ ತೊಂದರೆ ಬರುತ್ತದೆ, ಯಾವರೀತಿ ಕಷ್ಟವಾಗಿತ್ತದೆಂಬುದಕ್ಕೆ ಬಹಳ ಸೂಕ್ಷ್ಮವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೈಸೂರು ಡಿಸ್ಟ್ರಿಕ್ಟ್ ಮತ್ತು ಮಂಡ್ಯ ಡಿಸ್ಟ್ರಿಕ್‌ನಲ್ಲಿ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಇದೆ. ಇದರಲ್ಲಿನ ಸುಮಾರು ೩೨೦ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಇದೆ. ಈ ೩೨೦ ಸಹಕಾರಿ ಸಂಘಗಳಲ್ಲಿ ೬೫ ಸಾವಿರ ಕುಟುಂಬಗಳು ಇದರಲ್ಲಿ ಪಾಲುಗೊಂಡಿದೆ. ೬೫ ಸಾವಿರ ಕುಟುಂಬಗಳು ಪಾಲುಗೊಂಡಿವೆ ಎಂದು ಬಹುಶಃ ಮೂರು ಲಕ್ಷ ಜನ ಇದನ್ನೇ ಆಧಾರವಾಗಿ ಇಟ್ಟುಕೊಂಡಿದ್ದಾರೆಂದು ಹೇಳಬಹುದು. ಮೈಸೂರು ಮಂಡ್ಯದಲ್ಲಿ ಈ ಒಂದು ಪರಿಸ್ಥಿತಿ ಇರುವಾಗ ಇದನ್ನೇ ಆಧಾರವಾಗಿ ಇಟ್ಟುಕೊಂಡು ಈ ಕಸಬಿನಲ್ಲಿ ನಿರತರಾಗಿರತಕ್ಕಂಥ ೬೫ ಸಾವಿರ ಕುಟುಂಬಗಳಿಗೂ ಈವತ್ತಿನ ದಿವಸ ಅವರು ಮೇವನ್ನು ಕೊಟ್ಟು ಹಸುಗಳನ್ನು ಕಾಪಾಡುವುದಕ್ಕೆ ತಕ್ಕಂಥ ಕೂಲಿ ಈವತ್ತಿನವರೆಗೂ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅವರು ಬೇರೆ ಕಡೆ ಹೋದರೆ ೮–೧೦ ರೂಪಾಯಿಗಳನ್ನು ಸಂಪಾದನೆ ಮಾಡುವಂಥ ಅವಕಾಶಗಳು ಇರುತ್ತವೆ. ಈ ಕಸುಬಿನಲ್ಲಿಯೇ ನಿರತರಾಗಿರತಕ್ಕಂಥ ೬೫ ಸಾವಿರ ಕುಟುಂಬಗಳ ಬವಣೆಗೆ ಈಡಾಗಿರತಕ್ಕಂಥದ್ದಕ್ಕೆ ಕಾರಣವೇನೆಂದರೆ ಅವರು ಉತ್ಪಾದನೆ ಮಾಡತಕ್ಕಂತ ಹಾಲಿಗೆ ಸರಿಯಾದ ಬೆಲೆ ಸಿಕ್ಕದೆ ಇರುವುದು. ತಾವು ಹೇಳುವುದನ್ನು ಒಪ್ಪುತ್ತೇನೆ. ಬ್ಯಾಲೆನ್ಸ್ ಆಗಿ ಇರಬೇಕು, ಏತಕ್ಕೆಂದರೆ ರೈತರು ಉತ್ಪಾದನೆ ಮಾಡತಕ್ಕಂಥ ಹಾಲನ್ನು ಕೆಡದಂತೆ ನೋಡಿಕೊಂಡು ಸರಿಯಾದ ರೀತಿಯಲ್ಲಿ ವಿತರಣೆಯಾಗಬೇಕಾದರೆ ಕೇಳುವವರೂ ಇರಬೇಕೆಂದು ತಾವು ಏನು ಹೇಳುತ್ತೀರಿ ಅದನ್ನೂ ಕೂಡ ನಾನು ಒಪ್ಪುತ್ತೇನೆ. ಬ್ಯಾಲೆನ್ಸ್ ಮಾಡಬೇಕೆಂದು ಹೇಳಿ ಕೇಳುವವರ ಹಿತದೃಷ್ಟಿಯನ್ನೇ ತೆಗೆದುಕೊಳ್ಳಬಾರದು. ಅದನ್ನು ಉತ್ಪಾದನೆ ಮಾಡತಕ್ಕಂಥವರ ಹಿತದೃಷ್ಟಿಯನ್ನೂ ಕೂಡ ತೆಗೆದುಕೊಳ್ಳಬೇಕು. ಕೊಂಡುಕೊಳ್ಳತಕ್ಕಂಥವರು ಉತ್ಪಾದನೆ ಮಾಡತಕ್ಕಂಥವನಿಗಿಂತಲೂ ನೂರು ಪಾಲು ಉತ್ತಮ ಸ್ಥಿತಿಯಲ್ಲಿಯೇ ಇರುತ್ತಾರೆ. ಉತ್ತಮವಾದ ಕೆಲಸದಲ್ಲಿ ಇರುತ್ತಾರೆ, ಉತ್ತಮವಾದ ಕೂಲಿಯನ್ನು ಸಂಪಾದನೆ ಮಾಡುತ್ತಿರುತ್ತಾರೆ. ಆದ್ದರಿಂದ ಉತ್ಪಾದಕರ ಬೇಡಿಕೆ ಹಾಲಿನ ದರವನ್ನು ಏರಿಸಬೇಕೆಂದು ಏನು ಇದೆ ಅದನ್ನು ಆದಷ್ಟು ಜಾಗ್ರತೆಯಾಗಿ ತಾವು ಮಾಡಬೇಕು. ಇಲ್ಲದಿದ್ದ ಪಕ್ಷದಲ್ಲಿ ನಾನು ತಿಳಿದ ಪ್ರಕಾರ ಈ ಎರಡು ಡಿಸ್ಟ್ರಿಕ್ಟ್‌ನ ಸಂಘಸಂಸ್ಥೆಗಳವರು ಸಂಘಟನೆಯಾಗಿ ಸರ್ಕಾರದವರು ಇಂತಿಷ್ಟು ದಿವಸಗಳೊಳಗೆ ಹಾಲು ಉತ್ಪಾದನೆ ಮಾಡತಕ್ಕಂಥವರ ಬೇಡಿಕೆಗಳನ್ನು ನೆರವೇರಿಸದೆ ಹೋದರೆ, ತಾತ್ಕಾಲಿಕವಾಗಿ ಅವರು ಮುಷ್ಕರ ಹೂಡತಕ್ಕಂಥ ಅಭಿಪ್ರಾಯವನ್ನು ಹೊಂದಿರುತ್ತಾರೆ. ಈವತ್ತಿನ ದಿವಸ ಅವರು ಮುಷ್ಕರ ಹೂಡಿದ್ದೆ ಆದರೆ ಅದನ್ನೇ ನಂಬಿಕೊಂಡು ಜೀವನ ಮಾಡುತ್ತಿರುವ ಲಕ್ಷಾಂತರ ಜನರು ಬವಣೆಗೆ ಒಳಗಾಗಬೇಕಾಗುತ್ತದೆ. ಇದಕ್ಕೆ ಸಾರ್ವಜನಿಕ ಮುಖಂಡರುಗಳೂ ಕೂಡ ತಮ್ಮ ಬೆಂಬಲವನ್ನು ಸೂಚಿಸಿದ್ದಾರೆ. ಈ ದೃಷ್ಟಿಯಿಂದಲಾದರೂ ನಾನು ಸರ್ಕಾರವನ್ನು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ಅವರು ಮುಷ್ಕರ ಹೂಡಬೇಕಾದರೆ ತಮ್ಮ ಜೀವವನ್ನೇ ಪಣವಾಗಿ ಇಟ್ಟು ಮುಷ್ಕರ ಹೂಡಬೇಕೆಂದು ಪರಿಸ್ಥಿತಿಯಲ್ಲಿದ್ದಾರೆ. ಆ ಒಂದು ಪರಿಸ್ಥಿತಿಗೆ ಸರ್ಕಾರದವರು ಅವರನ್ನು ಬಿಡಬಾರದು. ಅವರ ಬೇಡಿಕೆ ಏನು ಇರುತ್ತದೋ ಅದನ್ನು ತಕ್ಷಣವೇ ಈಡೇರಿಸತಕ್ಕಂಥ ಒಂದು ಧೈರ್ಯವನ್ನು ಸರ್ಕಾರದವರು ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ ಈವತ್ತಿನ ದಿವಸ ಎಲ್ಲಿ ನೋಡಿದರೂ ರಾಜ್ಯದಲ್ಲಿ ಕುರಿ ಸಾಕಾಣಿಕೆ ಕೇಂದ್ರಗಳನ್ನು ತೆಗೆದು ಉತ್ತಮ ತಳಿಗಳನ್ನು ಅಭಿವೃದ್ಧಿ ಪಡಿಸುಂಥ ಕಾರ್ಯ ನಡೆದಿದೆ. ಇದರಲ್ಲಿ ನಮ್ಮ ಮಂಡ್ಯಾ ಡಿಸ್ಟ್ರಿಕ್ಟ್ ಬನ್ನೂರಿನಲ್ಲಿ ಉತ್ತಮವಾದ ಕುರಿ ತಳಿಗಳು ಇರುತ್ತದೆ. ಇದು ಸ್ಪೆಷಲ್ ಮಟನ್ ಬ್ರೀಡ್ ಆಗಿರುತ್ತದೆ. ಇದರ ಅಭಿವೃದ್ಧಿ ಕಾರ್ಯವು ನಾವು ನಿರೀಕ್ಷಿಸಿದ ಮಟ್ಟದಲ್ಲಿ ಆಗುತ್ತಿಲ್ಲ. ನಾನು ಬನ್ನೂರಿನವನೇ ಆಗಿರುವುದರಿಂದ ಒಂದು ಸಲಹೆಯನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಬನ್ನೂರು ಸುತ್ತಮುತ್ತಲೂ ಇರುವ ಮಟನ್ ಬ್ರೀಡ್ ಶೀಫ್ ಏನು ಇದೆ ಅದನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯತಕ್ಕಂಥ ಅವಕಾಶವನ್ನು ಮಾಡಿದರೆ ಎಲ್ಲ ರೈತರಿಗು ಒಂದು ಅನುಕೂಲವನ್ನು ಕಲ್ಪಿಸಿದಂತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ ನಮ್ಮಲ್ಲಿ ಹೈನುಗಾರಿಕೆ ಮಾಡತಕ್ಕಂಥದ್ದು ಏನು ಇದೆ ಇದು ನಿತ್ಯಜೀವನದಲ್ಲಿ ಒಂದು ಉಪಯುಕ್ತ ಕಸಬಾಗಿರುತ್ತದೆ. ಇದಕ್ಕೆ ರೋಗರುಜಿನಗಳು ಬಂದರೆ ಇದನ್ನು ನೋಡಿಕೊಳ್ಳಲು ಮತ್ತು ಔಷದೋಪಚಾರವನ್ನು ಮಾಡಲು ನಮ್ಮಲ್ಲಿ ಸಾಕಷ್ಟು ವೈದ್ಯರು ಇಲ್ಲ. ಬಹಳ ಕಡಿಮೆ ಪ್ರಮಾಣದಲ್ಲಿ ಇರುತ್ತಾರೆ. ನನ್ನ ಕಳಕಳಿ ಮನವಿ ಏನೆಂದರೆ ಅಲ್ಲಿ ಮೆಡಿಕಲ್ ಕಾಲೇಜ್ ತೆರೆಯಬೇಕು, ಇಲ್ಲಿ ಮೆಡಿಕಲ್ ಕಾಲೇಜ್ ತೆರೆಯಬೇಕೆಂದು ಹೇಳುತ್ತಿರುವಾಗ ಸಾಕಷ್ಟು ಪ್ರಮಾಣದಲ್ಲಿ ಡಾಕ್ಟರ್ಸ್‌ಗಳು ಬೇಕಾಗುತ್ತದೆ, ಆದ್ದರಿಂದ ನಾವು ಎಷ್ಟು ಡಾಕ್ಟರ್ಸ್‌ಗಳು ಬೇಕೆಂದು ಕಂಡುಬರುತ್ತದೋ ಅಷ್ಟು ಡಾಕ್ಟರ್ಸ್‌ಗಳನ್ನು ತಯಾರು ಮಾಡಿದರೆ ಸಾಮಾನ್ಯ ಜನತೆಗೆ ಒಳ್ಳೆಯದನ್ನು ಮಾಡಿದಂತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಡ್ಮಿನಿಸ್ಟ್ರೇಟಿವ್ ಜಡ್ಜಸ್ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ತಮ್ಮಲ್ಲಿ ನನ್ನ ಮುಖ್ಯವಾದ ಬೇಡಿಕೆ ಏನೆಂದರೆ, ನಮ್ಮ ರಾಜ್ಯದ ಜಡ್ಜರು ಹೈಕೋರ್ಟ್ ಮುಖ್ಯ ನ್ಯಾಯಾಧೀಶರಾಗಬಾರದು. ಆ ದೃಷ್ಟಿಯಿಂದ ಸರ್ಕಾರ ತ್ವರಿತ ಕ್ರಮ ತೆಗೆದುಕೊಳ್ಳುತ್ತದೆಂದು ನಾನು ಭಾವಿಸಿದ್ದೇನೆ.

ಛೇರ್ಮನ್.—ತಾವು ವಿಷಯದ ಬಗ್ಗೆ ಮಾತ್ರ ಮಾತನಾಡಬೇಕು.

ಶ್ರೀ ಕೆ. ಮಾದೇಗೌಡ.—ಮಾನ್ಯ ಕಾನೂನು ಸಚಿವರು ಇಲ್ಲಿರುವುದರಿಂದ ಒಂದು ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಳ್ಳಿಗಾಡಿನಲ್ಲಿ ಮನೆ ಇಲ್ಲದ ಬಡವರಿಂದ ಸೈಟುಗಳಿಗಾಗಿ ಸಾವಿರಾರು ಅರ್ಜಿಗಳು ಬಂದಿದ್ದು ಅವುಗಳು ಇತ್ಯರ್ಥವಾಗದೆ ಇನ್ನೂ ಹಾಗೆಯೇ ಉಳಿದಿದೆ, ಈ ಎಲ್ಲ ಕೇಸುಗಳನ್ನು ಆದಷ್ಟು ಬೇಗ ತೀರ್ಮಾನ ಮಾಡಲು ಸಾಧ್ಯವಾಗುವಂತೆ ಈ ಹೈಕೋರ್ಟ್ ಇದಕ್ಕಾಗಿ ಮೀಸಲಿಡುವಂತೆ ಮಾಡಬೇಕು. ಇದಕ್ಕೆ ಪ್ರತ್ಯೇಕ ವ್ಯವಸ್ಥೆಯನ್ನು ಮಾಡದೇ ಹೋದರೆ, ಇದೇ ವ್ಯವಸ್ಥೆ ಮುಂದುವರಿದುಕೊಂಡು ಹೋದರೆ ಇನ್ನು ೧೦ ವರ್ಷಗಳಾದರೂ ಈಗಿರತಕ್ಕ ಕೇಸುಗಳನ್ನು ಇತ್ಯರ್ಥಮಾಡಲು ಸಾಧ್ಯವಾಗುವುದಿಲ್ಲ ಮತ್ತು ಮನೆ ಇಲ್ಲದಿರುವವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ.

ಇನ್ನು ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನು ನೇಮಕ ಮಾಡುವಾಗ ಅವರನ್ನು ನೇರವಾಗಿ ಸರ್ಕಾರದವರೇ ನೇಮಕ ಮಾಡುತ್ತಾರೆ. ಇದು ಸರಿಯಲ್ಲ. ಕ್ರಿಮಿನಲ್ ಪ್ರೊಸೀಜರ್ ಕೋಡನ್ನು ತಿದ್ದುಪಡಿ ಮಾಡಿ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಎಂದು ಏನಿದ್ದಾರೆ ಅವರನ್ನೇ ಅವರ ಅನುಭವದ ಮೇಲೆ. ಸಲ್ಲಿಸಿರುವ ಸೇವೆಯ ಮೇಲೆ ಬಡ್ತಿ ಕೊಟ್ಟು ಪಬ್ಲಿಕ್ ಪ್ರಾಸಿಕ್ಯೂಟರ್‌ನ್ನು ಮಾಡಬೇಕು.

ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

CHAIRMAN.—I have just allowed 10 minntes for each member, Before 5 0'clock the debate is to be concluded and then the minister will reply. Please do not stretch beyond 10 minutes.

ಕುಮಾರಿ ಎಸ್. ಪ್ರಮೀಳಾ.—ಸ್ವಾಮಿ, ಈ ಸದನದ ಮುಂದೆ ೩ ಡಿಮ್ಯಾಂಡ್‌ಗಳನ್ನು ಇಡಲಾಗಿದೆ ಅದರೆ ಅವುಗಳನ್ನು ಇನಿಷಿಯೇಟ್ ಮಾಡಿಲ್ಲ.

ಅಧ್ಯಕ್ಷರು.—ಡಿಮ್ಯಾಂಡ್ಸ್ ಇನಿಷಿಯೇಟ್ ಆಗಿಲ್ಲ. ಅದನ್ನು ನೋಡೋಣ. ಆದರೆ ಪ್ರತಿಯೊಬ್ಬ ಸದಸ್ಯರೂ ಕೇವಲ ೧೦-೧೦ ನಿಮಿಷಗಳ ಕಾಲ ಮಾತ್ರ ಮಾತನಾಡಬೇಕು.

SRI A. LAKSHMI SAGAR.—Sir, first thing I whould like to mention is about the plight of of owners of cows in Banaglore City. My learned friend Sri Y. Ramakrishna replied to my call attention motion some weeks ago that this matter is being attended to and every possible help could be given to the owners of cows against the attack of rinderpest. But it has not subsidised. Today a reference was made by Sri Rame Gowda that in Civil area there are no hospital facilities and people have got to come from Doddigunte, Jayabharathinagar and other areas to Queen's Road and by the time the animal reaches the veternery hospital and service is rendered to it, the animal may be dead. Sri Rame Gowda has described the manner in which the things are dome. It has not helped them. Once again I draw the attention of the Government to a procession taken out sometime ago. You can see in the Indian Express the pieture showing how the dead animals are being carried in bullock-carks. The discuse has not subsided.

The second point in respect of this matter is that, the drugs that are being used have not heen effective and you yourself admitted in your statement. I will read only one sentence. " ಈ ರೋಗ ಔಷಧಿಗಳಿಂದ ಗುಣಮಾಡಲು ಸಾಧ್ಯವಿಲ್ಲದಿದ್ದರೂ ಕೆಲವು ಸ್ಥಳೀಯ ಪ್ರಾಣಿಗಳೂ ಮತ್ತು ಕೆಳಮಟ್ಟದ ಮಿಶ್ರ ತಳಿ ರಾಸುಗಳೂ ಚೇತರಿಸಿಕೊಳ್ಳುತ್ತವೆ". So this rinderpest disease has not been contained. It coutinues to attack the animals and the owndra of these cows are out to a great deal of loss. In fact, the families are being ruined and they have also published a pampnlet. I will send the pampblet to the Minister for his perosal. Look at their complaints. The pampllet is captiond as. "do not suck the blood of the cow; please suck the milk." These are some of the complaints. Spurious and sub-standare drugs are going used and these drugs are sold at exorbitant rates.

Drugs are not up-to the standard and are not available at reasonable prices. Visit any veterinary hospital or dispensary, store rooms, the situation will reveal the truth. Then no proper treatment is given to these animals in time.

The Minister made a statement last time that vehicles are being provided for the transportation of the dead animals. I should like to know from him whether his department has vehicles of its own ? You do not have vehicles of your own. Then you are depending upon the vehicles of the Muncipal corporation. Do you know the telephone unmber you have given ? You have given the telephone number of the hearse van, which is used to carry dead persons.

SRI Y. RAMAKRISHNA.—If you tell the same number, they will make arrangements.

SRI A. LAKSHMI SAGAR.— I am conversant with Corporation affairs. If you ring the hearse van how can the arrange for lorries and other vehicles for carrying dead animals

4-00 P. M.

This is the explanation which you are now giving. It does'nt find a place in your statement. You have given the information and I have come across that the telephone number provided in your statement pertains to the van which is meant for carrying dead persons and those vehicles are not fit for carrying dead animals. This is the position.

SRI Y. RAMAKRISHNA.—Why do you presume like this ?

SRI A. LAKSHMISAGAR —These vehicles are not fit for the purpose. Your Department has failed to provide help to these unfortunate cow-owners whose animals die every now and then. You said effetctive steps are taken, what is the report you have made ? The conclusion is that you have not been able to control this disease, let alone eleminate it. Large number of complaints are there about the manner in which your Department is dealing with this matter. There is no point in making a detailed account of it. Sri Ramegowda has done a good job in managing a statement about this. Therefore, your Department should wake up and see that assistance is rendered to these unfortunate cow-owners.

Then, in the Legislature Secretariat, there are 28 officials. Some of them are designated as Recording Officers and many of them are degree holders and some of them even otherwise better qualified. Their position is most miserable.

They join as Reporters and retire as such. There is no provision for this unfortunate section of the employees to get scope for further promotions inspite of putting in number of years of service in the Legislature Secretariat. To Solve this problem a way should be founout to provide for promotional opportunities. Regarding Stenogradphers, the Government have issued an amendment to the Karnataka Legislature Secretariat Recruitment and Conditions of Service Rules They are deemed to have been in existence on the First day of January 1977. These Rules have not been given effect to so far and accordingly promotions to the stenographers are not being given since 1977. This is the unfortunate situation as regards these Stenographers. When compared to the service conditions of similar employees of the State Government in the Secretariat itself, the con-

dition of employees of the Legislature Secretariat employees is much more miserable than what it appears to be, because similarly placed employees in the Secretariat have a number of promotional chances. But, these employees do not have. This is the position. I don't take much of the time because my time is very limited. This is the difficulty. Therefore, I request the Hon. Minister to go into this matter in detail and offers promotional opportunities to these categories of people, at least in confirmity with the rules which are now in force.

I do not know why the present and the previous Governments thought it fit to appoint retired judicial officers as leagal advisors to a number of Corporations and other Government Companies. My only concern is, practicing lawyer and young and bright Advocates must be given a chance to acquire both training and also knowledge of the working of these institutions. Why do you go in for only retired judicial officers to be appointed as leagal advisors only ? If you have done it. allright. Atleast hereafter declare that you will not take retire judicial officers as leagal advisors to a number of Government Corporations and Boards. It is from among the lawyers that the judiciary of the country is going to be manned, but not from the retired judicial officers.

Another thing, *i.e.*, separation of the Legislature Secretariat from the executive. This is an old matter and this has been raised oftenf when Sri K. H. Ranganath was the Minister forParliamentary Affairs. I think Sri Y. Ramakrishna would take the initiative and would take credit for taking necessary steps to correct and see that the Legislature Secretariat is separated from the Executive.

Then, about pendency of cases. Sir, your report doesn't mention about the pendency of cases. I would only mention the pendency of cases in Sub-ordinate, District and Sessions Courts. These figures relates to the year 1978.

Particulars	Cases		
	Institution	Disposal	Pending
Miscellaneous H. R. C. Revision	2.033	2,417	12,789
(In dist. Courts)	1,331	1,064	1,087
Acquisition (Land)	8,595	7.565	2,787

Sir, it is not only poorman's land that has been acquired, but even their cases are not being disposed of. For every piece of land which the Government has acquired adequate compensation must be paid to the owner and in time. It is to the disadvantage of this Government if these casese are not disposed of in time. Sri Bangarappa, when he was asked about this matter ; said he would look into the matter Something must be one as expeditiously as possible in this behalf. Then, sir, about miscellaneous cases. These are the miscellaneous cases which are pending in judicial and Magistrate Courts.

Particulars	Cases Institution	Disposal	Pending
Miscellaneous	8,829	8,372	11,693
CRPC and IPC	9,109	8,052	10,985
Orginal suits in Munsiff Courts	19,076	18,057	35,000

Then Sir,

Munsiff Courts

	Institution	*Disposal*	*Pending*
Original suits	19,076	18,527	35,650
H.R.C. cases with which large number of litigants are concerned	3,514	3,233	8,003
M. A. D R. cases	4	1,439	3,03,302
Munsiffs and J. M. F. C Courts			
Original suits	21,597	20,543	29,997
M. A. D. R, cases	Nill	Nill	2,33,018

Sir, this is the manner in which the pendency of cases you find in the subordinate judiciary. This is the onerous task you have to face. Sir, about the Court complex in Bangalore City. you were kind enough to look at the sanctioned plan, Only 1/4th of the building has come up The Court complex is now here near completion. I want you to look into this matter and I will avail the earliest opportunity of taking you, to the district court complex area and show to you so that you may be able to appreciate the difficulty of the litigants I am not very particular about the lawyers, but about the litigants of the district court. The district court compound does not have civic amenities to the litigant public that go there. This is

a very serious matter, pressing matter, that the Government should address itself to and come to the aid of the litigants by completing the court complex. Sir, about grants to the Bar association, last year. a sum of lakh Rupees was sanctioned for this purpose, which is a meagre amount. You must come to the help of the Bar-association to build up their libraries. Sir, we do not ask anything from the Government. The lawyers community has said that they have not asked for any kind of allocation under the five year plans for the last 30 years. And this was the small mercy, they were asking for, from the Government and my hon. friend would understand the difficulty and come to the help of these Bar associations. Sir, about the training of the lawyers. some provision has been made and unmber of candidates have been selected and the list has been furnished. The money set apart for the year is not sufficient. A large number of trainees must be taken from among the groups you have indicated in the report and they must be given sufficient training facilities so that they may be enabled to take the examinations for Munsiffs and other competitive examinations, Sir, my learned friend would recall that on the other day, only 13 Scheduled Caste candidates had applied for the examination for recruitment of Munsiffs Posts. You do not have sufficient number of trained and otherwise qualified people to take up these examinations. Therefore I insist that a large outlay must be made towards this task of training advocates so that they may be able to get themselves selected to man the judiciary. Sir, about the pendency of cases in the High Court, there is a loud complaint from the public that cases are not disposed of as quickly as possible. As members of the public we have every right to bring it to the notice of the Government about the delay in the disposal of these cases and something must be done to see that these cases are disposed of as early as possible.

† ಶ್ರೀ ಬಿ. ಎನ್. ಬಚ್ಚೇಗೌಡ (ಹೊಸಕೋಟೆ).— ಸನ್ಮಾನ್ಯ ಅಧ್ಯಕ್ಷರೇ, ನ್ಯಾಯಾಂಗ, ಸಂಸದೀಯ ವ್ಯವಹಾರಗಳ ಹಾಗೂ ಪಶುಸಂಗೋಪನಾ ಶಾಖೆಯ ಮಂತ್ರಿಗಳು ಈ ಸಭೆಯ ಮುಂದೆ ತಂದಿರತಕ್ಕಂಥಾ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲ ಮಾಡಿ ಕೆಲವು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಪ್ರಥಮವಾಗಿ ಹೇಳುವುದಾದರೆ ಮಾನ್ಯ ಮಂತ್ರಿಗಳು ಹಿರಿಯರು ಹಾಗೂ ದಕ್ಷರು. ಅವರು ಈ ಒಂದು ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ನಾನು ಈಗ ಮೊಟ್ಟಮೊದಲು ನ್ಯಾಯಾಂಗ ಇಲಾಖೆಯ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಈಗಾಗಲೇ ಮಾತನಾಡಿದ ಶ್ರೀಮಾನ್ ಲಕ್ಷ್ಮೀಸಾಗರ್ ಅವರು ಹೇಳಿದಹಾಗೆ ಸಾವಿರಾರು ಮೊಕದ್ದಮೆಗಳು ಮುನ್ಸೀಫ್ ಕೋರ್ಟ್ನಲ್ಲಿ, ಸಿವಿಲ್ ಜಡ್ಜ್ ಕೋರ್ಟ್‌ನಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಕೋರ್ಟ್‌ನಲ್ಲಿ ಮತ್ತು ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇವೆ ಇದರಿಂದಾಗಿ ಕಕ್ಷಿದಾರರಿಗೆ ಸಿಕ್ಕಬಹುದಾದಂತಹ ನ್ಯಾಯ ತಡವಾಗಿ ಸಿಕ್ಕುತ್ತದೆ. ಬಹಳ ವಿಳಂಬವಾಗುತ್ತಿದೆ. ಆದ್ದರಿಂದ ಈಗಾಗಲೇ ಸರ್ಕಾರದವರು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿಯೂ ಸಹ ಮುನ್ಸೀಫ್ ಮ್ಯಾಜಿಸ್ಟ್ರೇಟರ್ ಕೋರ್ಟುಗಳನ್ನು ತೆರೆಯಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು ಗೊತ್ತಾಗಿದೆ, ಎಲ್ಲಾ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿಯೂ ಒಂದೊಂದು ಮುನ್ಸೀಫ್ ಮ್ಯಾಜಿಸ್ಟ್ರೇಟರ್ ಕೋರ್ಟು ಅನ್ನು ತೆಗೆಯುವುದರ ಮೂಲಕ ಜಿಲ್ಲಾ ಕೇಂದ್ರಗಳಲ್ಲಿ ಹೀನಸ್ ಕೇಸುಗಳು ದಾಖಲಾತಿ

ಗಳು ಕಡಿಮೆಯಾಗುತ್ತವೆ. ಜನಗಳಿಗೆ ಕಾನೂನಿನ ರಕ್ಷಣೆ ಸಿಗುತ್ತದೆ. ಕೇಸುಗಳು ಕೋರ್ಟಿನಲ್ಲಿ ಬೇಗ ತೀರ್ಮಾನವಾಗುತ್ತವೆ. ಮುನ್ಸೀಫ್ ಕೋರ್ಟ್‌ನಲ್ಲಿ ಹತ್ತಾರು ವರ್ಷಗಳಿಂದ ತೀರ್ಮಾನವಾಗದೆ ಇರತಕ್ಕ ಕೇಸುಗಳನ್ನು ಅತಿಜಾಗ್ರತೆಯಾಗಿ ತೀರ್ಮಾನವಾಗುವಂತೆ ಮಾಡಬೇಕು. ಮುನ್ಸೀಫ್ ಕೋರ್ಟಿನಲ್ಲಿ ಕೇಸು ದಾಖಲಾದ ೬ ತಿಂಗಳೊಳಗೆ ಅದು ಮುಗಿಯುವ ವ್ಯವಸ್ಥೆ ಮಾಡಬೇಕು. ಈಗಾಗಲೇ ಮುನ್ಸೀಫ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ, ಡಿಸ್ಟ್ರಿಕ್ ಕೋರ್ಟಿನಲ್ಲಿ ಎರಡು ಮೂರು ವರ್ಷಗಳಿಂದ ಕೇಸುಗಳು ಇತ್ಯರ್ಥವಾಗದೆ ಅನೇಕ ಕೇಸುಗಳು ಬಾಕಿ ಇವೆ. ಇದರಿಂದಾಗಿ ಅನೇಕ ಮರ್ಡರ್ ಕೇಸುಗಳು, ಹೀನಸ್ ಕೇಸುಗಳಿಗೆ ಒಳಗಾದ ಅಪರಾಧಿಗಳು ಮೂರು ನಾಲ್ಕು ವರ್ಷಗಳ ಕಾಲ ಜೈಲಿನಲ್ಲಿ ಇರಬೇಕಾದ ಪರಿಸ್ಥಿತಿಯಲ್ಲಿದೆ. ಬೆಂಗಳೂರು ಜಿಲ್ಲೆಯಲ್ಲಿ ಸೆಷನ್ ಕೋರ್ಟಿನಲ್ಲಿ ಬೇಕಾದಷ್ಟು ಕೇಸುಗಳು ಸುಮಾರು ೨-೩ ವರ್ಷಗಳಾದರೂ ಮುಗಿಯದೇ ಇರುವ ಸನ್ನಿವೇಶ ಇದೆ. ಆದ್ದರಿಂದ ಈ ಮುನ್ಸೀಫ್ ಕೋರ್ಟುಗಳನ್ನು ಎಲ್ಲಾ ತಾಲ್ಲೂಕುಗಳಲ್ಲಿಯೂ ತೆರೆಯುವುದಕ್ಕೆ ಸಂಬಂಧಪಟ್ಟ ಕಾನೂನು ವಿಳಂಬವಾಗಿದೆ. ಆದ್ದರಿಂದ ಈ ಕಾನೂನನ್ನು ಜಾಗ್ರತೆ ಈ ಸಭೆಯಲ್ಲಿ ತಂದು ಅದನ್ನು ಪಾಸು ಮಾಡಿದರೆ ಅನುಕೂಲವಾಗುತ್ತದೆ. ಜಾಗ್ರತೆಯಾಗಿ ಕೇಸುಗಳನ್ನು ಇತ್ಯರ್ಥ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈಗ ನನಗೆ ತಿಳಿದು ಬಂದಿರುವ ವರ್ತಮಾನದ ಪ್ರಕಾರ ಹೈಕೋರ್ಟಿನಲ್ಲಿ ಭೂಸುಧಾರಣೆಗೆ ಸಂಬಂಧಪಟ್ಟ ಸುಮಾರು ೨೦-೨೫ ಸಾವಿರ ಕೇಸುಗಳು ಬಾಕಿ ಇವೆಯೆಂದು ಗೊತ್ತಾಗಿದೆ. ಅವುಗಳನ್ನು ಬೇಗ ತೀರ್ಮಾನ ಮಾಡುವಂತೆ ಮಾಡಬೇಕು. ಇದರ ಬಗ್ಗೆ ಮಾನ್ಯ ಸದಸ್ಯರಾದ ಮಾದೇಗೌಡರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಈ ಇಲಾಖೆಯಲ್ಲಿ ಡೈರೆಕ್ಟೋರೇಟ್ ಆಫ್ ಪ್ರಾಸಿಕ್ಯೂಟರ್ಸ್ ಎಂದು ಈಗ ನೇಮಕ ಮಾಡಿದ್ದಾರೆ. ಇದರಲ್ಲಿ ಒಬ್ಬರು ಡೈರೆಕ್ಟರು ೫ಜನ ಡೆಪ್ಯುಟಿ ಡೈರೆಕ್ಟರು ೫೦ ಜನ ಸೀನಿಯರ್ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ೧೫೦ ಜನ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಕೆಲಸ ಮಾಡುತ್ತಿದ್ದಾರೆ. ಪ್ರಾಸಿಕ್ಯೂಟರುಗಳನ್ನು ನೇಮಕ ಮಾಡುವಾಗ ಸೀನಿಯರ್ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರುಗಳಾಗಿ ಕೆಲಸ ಮಾಡಿರತಕ್ಕವರನ್ನು ನೇಮಕ ಮಾಡಿಕೊಳ್ಳಬೇಕು. ಈ ರೀತಿ ಈಗಾಗಲೇ ಡೈರೆಕ್ಟೋರೇಟ್ ಆಫ್ ಪ್ರಾಸಿಕ್ಯೂಟರ್ ಅವರು ರೆಕಮೆಂಡ್ ಮಾಡಿದ್ದಾರೆ. ಇದು ಸರ್ಕಾರದ ಕಡೆ ಇದೆಯೆಂದು ನಾನು ಕೇಳಿದ್ದೇನೆ. ಮತ್ತು ಕ್ರಿಮಿನಲ್ ಪ್ರೊಸೀಜರ್ ಸೆಕ್ಷನ್ ೨೪ ಅನ್ನು ಅಮೆಂಡ್ ಮಾಡಿ ಅದನ್ನು ಜಾರಿಗೆ ಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಪ್ರಾಸಿಕ್ಯೂಟರುಗಳನ್ನು ನೇಮಕ ಮಾಡುವಾಗ ೫೦ಪರ್ಸೆಂಟ್ ಅಪಾಯಿಂಟ್‌ಮೆಂಟ್‌ಗಳನ್ನು ಸೀನಿಯರ್ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಲ್ಲಿ ಆಯ್ಕೆ ಮಾಡಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಇನ್ನೊಂದು ವಿಷಯ ಏನೆಂದರೆ ಲೀಗಲ್ ಏಡ್ ಸೊಸೈಟಿಯಲ್ಲಿ ನಾನ್ ಅಫಿಷಿಯಲ್ಸ್‌ನಲ್ಲಿ ಯಾರಾದರೂ ಛೇರ್ಮನ್ ಮಾಡಬೇಕು ಎಂದು ಕೇಳುತ್ತೇನೆ. ಅದರಲ್ಲಿ ರಿಟೈರ್ಡ್ ಆದವರನ್ನು ಯಾರನ್ನೂ ಕೂಡ ನೇಮಕ ಮಾಡಿಕೊಳ್ಳಬಾರದು, ಎಲ್ಲಾ ಯುವಕರಿಗೇನೇ ಅವಕಾಶ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಪಶುಪಾಲನೆ ಮತ್ತು ಹೈನುಗಾರಿಕೆಗೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ಹೇಳುತ್ತೇನೆ ಈ ಮನೆಯ ಹಿರಿಯ ಸದಸ್ಯರಾದ ಶ್ರೀ ಜಿ. ರಾಮೇಗೌಡರು, ಈ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ನಾನು ಹೇಳುವುದೇನೆಂದರೆ ಕೋಳಿ ಸಾಕಣಿಕೆಗೆ, ಹಂದಿ ಸಾಕಣಿಕೆಗೆ ಮತ್ತು ಮಿಶ್ರ ತಳಿಗೆ ಸಂಬಂಧಪಟ್ಟಂತೆ ಕೆಲವು ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಈ ಇಲಾಖೆಗೆ ಏನು ಹಣ ಒದಗಿಸಿದ್ದೀರೋ ಅದು ಬಹಳ ಕಡಿಮೆ, ಇನ್ನೂ ಹೆಚ್ಚು ಹೆಚ್ಚಾಗಿ ಒದಗಿಸಬೇಕು ಎಂದು ಹೇಳುತ್ತೇನೆ.

ಇನ್ನು ಪಶುಸಂಗೋಪನಾ ವಿಚಾರದ ಬಗ್ಗೆ ಹೇಳುವುದಾದರೆ ಇದು ರೈತರಿಗೆ ಬಹಳ ಮುಖ್ಯವಾದಂಥಾ ಒಂದು ಕಸಬಾಗಿರುವುದರಿಂದ ಮತ್ತು ಹಸುಗಳಿಗೆ ಬೇಕಾದಂಥಾ ಹೈನುಗಾರಿಕೆ ಅಭಿವೃದ್ಧಿಗಾಗಿ ಹೆಚ್ಚು ಹೆಚ್ಚು ಆಸ್ಪತ್ರೆಗಳನ್ನು ತೆರೆದು ಮತ್ತು ಅವರಿಗೆ ಬೇಕಾದಂಥಾ ಡೈರಿ ಎಕ್ವಿಪ್‌ಮೆಂಟ್ಸ್ ಮತ್ತು ವ್ಯವಸಾಯಕ್ಕೆ ಬೇಕಾದಂಥಾ ಉಪಕರಣ ವಗೈರೆಗಳಿಗೆ ಕೆಲವು ಕೇಂದ್ರಗಳನ್ನು ಹೆಚ್ಚಾಗಿ ಸ್ಥಾಪನೆ ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಮಿಶ್ರ ತಳಿ ಹಸುಗಳನ್ನು ಹೆಚ್ಚಿಸಬೇಕು. ಮಾನ್ಯ ಮಂತ್ರಿಗಳು ಬೆಳಿಗ್ಗೆ ಈ ಸಭೆಯಲ್ಲಿ ಒಂದು ಹೇಳಿಕೆ ಕೊಡುವಾಗ ನಮ್ಮ ರಾಜ್ಯದಲ್ಲಿ ಸುಮಾರು ಒಂದು ಕೋಟಿ ಚಿಲ್ಲರೆ ಹಸುಗಳು ಇವೆ ಎಂದು ಹೇಳಿದರು. ಇದರ ಬಗ್ಗೆ ಈ ಮನೆಯ ಹಿರಿಯ ಸದಸ್ಯರಾದ ಶ್ರೀ ಜಿ. ರಾಮೇಗೌಡರು ಸಲಹೆಯನ್ನು ಕೊಟ್ಟಿದ್ದಾರೆ, ಈಗಾಗಲೇ ಇದರ ಬಗ್ಗೆ ೧೦ ಸಾವಿರ ದನಗಳಿಗೊಂದು ಆಸ್ಪತ್ರೆಯನ್ನು ಕೊಡಬೇಕೆಂದು ಏನು ತೀರ್ಮಾನ ಮಾಡಿದ್ದೀರೋ ಅದನ್ನು ೫ ಸಾವಿರ ದನಗಳಿಗೊಂದು

ಆಸ್ಪತ್ರೆ ಇರುವಂತೆ ತೆರೆಯಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ಮುಖ್ಯವಾದವಿಷಯ ಏನೆಂದರೆ ಸಾಮಾನ್ಯವಾಗಿ ದನಗಳಿಗೆ ಮುಖ್ಯವಾಗಿ ಬರುವಂಥಾ ರೋಗ ದೊಡ್ಡ ರೋಗ ಮತ್ತು ಕಾಲುಬಾಯಿ ಜ್ವರ. ಇಲಾಖೆಯವರು ಈ ರೋಗಕ್ಕೆ ಚುಚ್ಚು ಮದ್ದು ಕೊಡುವುದರ ಮೂಲಕ ಹೆಚ್ಚು ಆಸಕ್ತಿಯಿಂದ ಕೆಲಸ ಮಾಡಬೇಕಾಗಿದೆ. ಕಳೆದ ಸಾರಿ ಈ ಖಾಯಿಲೆಗೆ ೧೦೦ ದನಗಳು ತುತ್ತಾಗಿವೆ ಎಂದು ಮಾನ್ಯಮಂತ್ರಿಗಳು ಹೇಳಿದರು. ಇದಕ್ಕೆ ಇಂಜಕ್ಷನ್ ಕೊಡುವುದರ ಮೂಲಕಈ ಖಾಯಿಲೆಯನ್ನು ತಡೆಗಟ್ಟಬಹುದು. ಮಂತ್ರಿಗಳು ಒಂದು ಅಂಕಿ ಅಂಶದ ಪ್ರಕಾರ ಈ ಒಂದು ರೋಗಕ್ಕೆ ೧೦೦ ದನಗಳು ತುತ್ತಾಗಿವೆ, ನನಗೆ ಬಂದಿರುವ ಮಾಹಿತಿ ಪ್ರಕಾರ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಸತ್ತಿವೆ. ಆದುದರಿಂದ ಇಲಾಖೆಯವರು ಇದರ ಬಗ್ಗೆ ತೀವ್ರವಾದ ಕ್ರಮ ಕೈಗೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ ನಿನ್ನೆ ದಿವಸ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲೂ ಕೂಡ ಈ ವಿಷಯ ಬಂದಿದೆ ಏನೆಂದರೆ ಅಲಸೂರು ಭಾಗದಲ್ಲಿ ಈ ಒಂದು ದೊಡ್ಡ ರೋಗದ ಖಾಯಿಲೆಗೆ ೨–೩ ಹಸುಗಳು ಸತ್ತಿವೆ ಎಂದು. ಆದುದರಿಂದ ನಾನು ಹೇಳುವುದು ಬೆಂಗಳೂರಿಗೆ ಹೊರಗಿನಿಂದ ಏನು ಹಸುಗಳು ಬರುತ್ತದೆ ಅದನ್ನು ಕಡಿಮೆ ಮಾಡಬೇಕು. ಸರ್ಕಾರದವರು ಈಗ ೧೦೦–೧೫೦ ಆಸ್ಪತ್ರೆಗಳನ್ನು ತೆರೆಯಬೇಕೆಂದು ಇದ್ದಾರೆ. ಇದು ಸಾಕಾಗುವುದಿಲ್ಲ. ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಈ ಆಸ್ಪತ್ರೆಗಳನ್ನು ತೆರೆಯಬೇಕು ಜೊತೆಗೆ ಎಲ್ಲಿ ಜನರಲ್ ಆಗಿ ಈ ಆಸ್ಪತ್ರೆಗಳು ಇವೆ ಅಲ್ಲಿ ಅದನ್ನು ಅಪ್‌ಗ್ರೇಡ್ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಹಾಲು ಉತ್ಪಾದಕರ ಬಗ್ಗೆ ಹೇಳುವುದಾದರೆ ಈ ವಿಷಯದಲ್ಲಿ ಮಾನ್ಯ ಶ್ರೀ ಜಿ. ರಾಮೇಗೌಡರು ಚೆನ್ನಾಗಿ ಹೇಳಿದ್ದಾರೆ. ಇನ್ನೂ ಕೆಲವು ಸದಸ್ಯರು ಈ ಬಗ್ಗೆ ಹೇಳಿದ್ದಾರೆ. ೧೯೭೫ರಿಂದಲೂ ಕೂಡ ಈ ಹಾಲು ಉತ್ಪಾದಕರಿಗೆ ಏನು ದರವನ್ನು ಕೊಡುತ್ತಿದ್ದೀರಿ ಅದನ್ನೇ ಈಗಲೂ ಮುಂದುವರಿಸಿಕೊಂಡು ಬಂದಿದ್ದೀರಿ. ೧೯೭೯-೮೦ರಲ್ಲಿ ಈ ದನಗಳಿಗೆ ಬೇಕಾದಂಥಾ ಹಿಂಡಿ, ಹುಲ್ಲು ಬೆಲೆಗಳನ್ನು ನೋಡಿದರೆ ಬಹಳ ಜಾಸ್ತಿಯಾಗಿದೆ, ಇದಲದೆ ಇನ್ನೂ ಅನೇಕ ವಸ್ತುಗಳ ಬೆಲೆಗಳು ಜಾಸ್ತಿಯಾಗಿದೆ. ತಮಗೆ ಹೇಳಬೇಕಾದರೆ ಮೊದಲು ೨೨ ರೂಪಾಯಿಗೆ ಸಿಗುತ್ತಿದ್ದ ಹಿಂಡಿ ೫೦ ರೂಪಾಯಿ ಆಯಿತು, ಈವೊತ್ತಿನ ದಿವಸ ಅದರ ಬೆಲೆ ೮೦ ರೂಪಾಯಿ ಆಗಿದೆ. ಹೀಗೆ ಅವರು ಕೊಂಡುಕೊಳ್ಳುವ ಸಾಮಾನಿನ ಬೆಲೆಗಳು ಇಷ್ಟರಮಟ್ಟಿಗೆ ಜಾಸ್ತಿಯಾಗಿರುವಾಗ ಅವರಿಗೆ ಕೊಡತಕ್ಕಂಥಾ ದರವನ್ನು ನೋಡಿದರೆ ಬಹಳ ಅನ್ಯಾಯವಾಗಿದೆ. ಆದುದರಿಂದ ಮಾನ್ಯ ಸಚಿವರಿಗೆ ಹೇಳುವುದೇನೆಂದರೆ ಈ ಹಾಲು ಉತ್ಪಾದಕರು ಮತ್ತು ಗ್ರಾಹಕರು ಏನು ಇದ್ದಾರೆ ಅವರು ದರದ ಬಗ್ಗೆ ಏನು ಚಿಂತನೆ ಮಾಡುತ್ತಿದ್ದಾರೆ ಅದರ ಬಗ್ಗೆ ಗಮನ ಕೊಟ್ಟು ಅವರಿಗೆ ಹೆಚ್ಚಿನ ದರವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಈ ಬಗ್ಗೆ ಒಂದು ಸ್ಲಾಬ್ ಕಾಂಪೊನೆಂಟ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಶುವೈದ್ಯರ ಬಗ್ಗೆ ಹೇಳಬೇಕಾದರೆ ಅವರಿಗೆ ಮೆಡಿಕಲ್ ವೈದ್ಯರುಗಳ ವೇತನ ಏನು ಇದೆ ಅದನ್ನು ಕೊಡಬೇಕೆಂದು ಹೇಳುತ್ತೇನೆ. ನನಗೆ ತಿಳಿದುಬಂದಿರುವ ರೀತ್ಯಾ ಈ ಇಲಾಖೆಯಲ್ಲಿ ಸುಮಾರು ಒಂದು ಸಾವಿರ ಜನರು ದಿನಗೂಲಿಯ ಮೇಲೆ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿದು ಬಂದಿದೆ. ಅವರಿಗೆ ತಿಂಗಳಿಗೆ ೧೦೦–೧೮೦ ರೂಪಾಯಿ ಮಾತ್ರ ಸಿಗುತ್ತದೆ. ಅವರು ೮–೧೦ ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದಾರೆ. ಅವರನ್ನು ಇನ್ನೂ ಖಾಯಂ ಮಾಡಿಲ್ಲಾ. ಆದುದರಿಂದ ಅವರ ಕೆಲಸಗಳನ್ನು ಖಾಯಂ ಮಾಡಿಕೊಡಬೇಕು ಎಂದು ನಾನು ತಮ್ಮನ್ನು ಕೇಳಿಕೊಂಡು. ತಾವು ನನಗೆ ಇಷ್ಟು ಮಾತನಾಡಲು ನನಗೆ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಟಿ. ಮ್ಲಾಯಣ್ಣ (ಹುಲಿಯೂರುದುರ್ಗ), — ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಸಚಿವರು ಈ ಸಭೆಯ ಮುಂದೆ ಅನಿಮಲ್ ಹಸೆಬಂಡರಿ ಅಂಡ್ ಡೈರಿ ಡೆವಲಪ್‌ಮೆಂಟ್ ಮತ್ತು ಸ್ಟೇಟ್ಸ್ ಲೆಜಿಸ್ಲೇಚರ್ ಮತ್ತು ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ಬಗ್ಗೆ ಏನು ಬೇಡಿಕೆಯನ್ನು ಮಂಡಿಸಿದ್ದಾರೋ ಅದನ್ನು ನಾನು ವಿರೋಧಿಸುತ್ತೇನೆ. ಇಲ್ಲಿಯವರೆಗೆ ಮಾತನಾಡಿದಂಥಾ ನಮ್ಮ ಹಿರಿಯ ಸದಸ್ಯರಾದ ಶ್ರೀ ಜಿ. ರಾಮೇಗೌಡರು ಅನಿಮಲ್ ಹಸೆಬಂಡರಿ ವಿಚಾರದಲ್ಲಿ, ಪಶುಸಂಗೋಪನಾ ವಿಚಾರದಲ್ಲಿ ಏನೇನು ವ್ಯವಹಾರಗಳು ನಡೆಯುತ್ತಿದೆ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಿದಾರೆ. ಆದರೆ ನಾನು ಈ ಬಗ್ಗೆ ಹೇಳುವುದು ಇಷ್ಟೆ. ಈ ಇಲಾಖೆ ಮೊದಲು ವ್ಯವಸಾಯ ಇಲಾಖೆಗೆ ಸೇರಿತ್ತು. ಅದನ್ನು ಈಗ ಭೈಫರ್‌ಕೇಟ್ ಮಾಡಿ ಇದನ್ನೇ ಒಂದು ಇಲಾಖೆಯನ್ನಾಗಿ ಮಾಡಿ ಆ ಮೂಲಕ ಇದರ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ಬಗ್ಗೆ ನಾನು ಹೇಳುವುದೇನೆಂದರೆ ಮಾನ್ಯ ಮಂತ್ರಿಗಳು

ಇದನ್ನು ಪುನ: ರೀಆರ್ಗನೈಸೇಷನ್ ಮಾಡಿ ಈ ಇಲಾಖೆ ಇದಕ್ಕೆ ಸಂಬಂಧಪಟ್ಟಂಥಾದ್ದು ಎಲ್ಲ ಕೆಲಸಗಳನ್ನೂ ಕೂಡ ಇನ್‌ಸ್ಪೆಕ್ಟರ್ಸ್ ಮತ್ತು ಡೈರೆಕ್ಟರ್ಸ್‌ರವರು ರಚನಾತ್ಮಕವಾದ ರೀತಿಯಲ್ಲಿ ಕೆಲಸ ಮಾಡಿಕೊಂಡು ಹೋಗುವ ಹಾಗೆ ಮಾಡಿಕೊಡಬೇಕು ಎಂದು ಹೇಳುತ್ತೇನೆ, ಈ ಸಮಸ್ಯೆ ಬಹಳ ದಿನಗಳಿಂದಲೂ ಕೂಡ ಇದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈ ಇಲಾಖೆ ದನಗಳ ಆರೋಗ್ಯಕ್ಕೆ ಸಂಬಂಧಪಟ್ಟಂಥಾದ್ದು ಮತ್ತು ದನಗಳನ್ನು ಉತ್ಪತ್ತಿ ಮಾಡತಕ್ಕಂಥಾದ್ದು ಆಗಿರುವುದರಿಂದ ಇವೆರಡನ್ನೂ ಒಟ್ಟಿಗೆ ಸೇರಿಸಿದರೆ ಅನುಕೂಲವಾಗುತ್ತದೆ ಎಂದು ಸಲಹೆ ಕೊಡುತ್ತೇನೆ. ಇದರ ಬಗ್ಗೆ ಇನ್ನು ಒಂದು ಹೆಜ್ಜೆ ಮುಂದೆ ಇಟ್ಟು ಹೇಳುವುದಾದರೆ ಈ ಒಂದು ಇಲಾಖೆ ಏನು ಇದೆ ಒಂದು ಕಡೆ ಹೈಬ್ರಿಡ್ಸ್ ಕಡೆ ಗಮನ ಕೊಡಬೇಕಾಗುತ್ತದೆ. ಇನ್ನೊಂದು ಕಡೆ ಕೋಳಿ ಕುರಿ ಸಾಕಣಿಕೆ ಕಡೆಗೆ ಇವುಗಳ ಉತ್ಪತ್ತಿ ಕಡೆಗೆ ಗಮನ ಕೊಡಬೇಕಾಗುತ್ತದೆ. ಆದುದರಿಂದ ಇದಕ್ಕೆ ಇಬ್ಬರು ಡೈರೆಕ್ಟರ್ಸ್ ಇದ್ದರೆ ಚೆನ್ನಾಗಿರುತ್ತದೆ. ಇದನ್ನು ಯಾವುದಕ್ಕೂ ಕೂಡ ಅಟ್ಯಾಚ್ ಮಾಡದೇ ಇದನ್ನೇ ಒಂದು ಪ್ರತ್ಯೇಕವಾದ ಇಲಾಖೆಯನ್ನಾಗಿ ಮಾಡಿದರೆ ಒಳ್ಳೆಯದು. ಏತಕ್ಕೆಂದರೆ ಮುಂದೆ ಘಟಪ್ರಭಾ ಮತ್ತು ಮಲಪ್ರಭಾ ಯೋಜನೆ ಪೂರ್ತಿಗೊಂಡಾಗ ಆ ಭಾಗದಲ್ಲಿ ಹೆಚ್ಚು ಹೆಚ್ಚು ಹಾಲು ಉತ್ಪತ್ತಿಯಾಗುವ ಸಂಭವ ಆಗುವುದು ಉಂಟು, ಆವಾಗ ಒಳ್ಳೊಳ್ಳೆಯ ತಳಿಗಳು ಬೇಕಾಗುತ್ತವೆ. ಆಗ ಅದಕ್ಕೆ ಒಬ್ಬ ಡೆಪ್ಯೂಟಿ ಡೈರೆಕ್ಟರಾಗಲಿ ಅಥವಾ ಒಬ್ಬ ಜಾಯಿಂಟ್ ಡೈರೆಕ್ಟರ್ ಆಗಲಿ ಇದ್ದರೆ ಈ ಇಲಾಖೆ ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ಒಂದು ಇಲಾಖೆಗೇನೇ ಒಂದು ಸಪರೇಟ್ ಡೈರೆಕ್ಟೊರೇಟ್ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ.

ಇನ್ನು ವೆಟರ್ನರಿ ಆಸ್ಪತ್ರೆಯಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ಸ್ ಅಂತ ಏನು ಇದ್ದಾರೆ ಅವರಲ್ಲಿ ೨-೩ ತರಹ ಗ್ರೇಡ್ ಇದೆ. ಬಿ. ವಿ. ಎಸ್. ಸಿ. ಮಾಡಿಕೊಂಡಿದ್ದರೆ ಅದಕ್ಕೆ ಗೆಜೆಟೆಡ್ ಹುದ್ದೆ ಕೊಡುತ್ತಾರೆ. ಅದನ್ನು ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಹಾಕುತ್ತಾರೆ. ಆದರೆ ಪ್ರತಿಯೊಂದು ಆಸ್ಪತ್ರೆಯಲ್ಲೂ ನೋಡಿದರೆ ೨-೩ ಜನ ಲೀವ್ ಸ್ಟಾಕ್ ಇನ್‌ಸ್ಪೆಕ್ಟರ್ಸ್ ಇರುತ್ತಾರೆ. ಅವರು ಮಾಡುವ ಕೆಲಸ ನೋಡಿದರೆ ಸ್ವಲ್ಪ ದಿವಸ ಕಳೆದ ಮೇಲೆ ಡಾಕ್ಟರ್‌ಗಿಂತ ಹೆಚ್ಚಾಗಿ ಸಂಬಳ ತೆಗೆದುಕೊಳ್ಳುತ್ತಾರೆ. ಆದುದರಿಂದ ಈ ಡಾಕ್ಟರ್‌ಗಳು ಅಲ್ಲಿ ಕೆಲಸ ಮಾಡುವುದಕ್ಕೆ ತೊಂದರೆಯಾಗುತ್ತದೆ. ಮಾನ್ಯ ಸಚಿವರು ಈಗ ೧೩೦೦ ಆಸ್ಪತ್ರೆಗಳು ಇವೆ ಎಂದು ಹೇಳಿದರು. ಎಲ್ಲಾ ಆಸ್ಪತ್ರೆಗಳಲ್ಲೂ ಕೂಡ ಒಂದೇ ರೀತಿಯಾಗಿ ಇರುವುದಿಲ್ಲ. ಬೇರೆ ಬೇರೆ ರೀತಿಯಾದ ವ್ಯವಸ್ಥೆ ಇರುತ್ತವೆ. ವಿಲೇಜ್‌ನಲ್ಲಿ ತೆಗೆದುಕೊಂಡರೆ ರೂರಲ್ ಡಿಸ್ಪೆನ್ಸರಿ ಆಸ್ಪತ್ರೆಗಳು ಇರುತ್ತದೆ. ಅಲ್ಲಿ ದನಗಳಿಗೆ ಯಾವುದಾದರೂ ಕೆಟ್ಟ ರೋಗ ಬಂದರೆ ಅದನ್ನು ಅವರೇ ನೋಡಿಕೊಳ್ಳುತ್ತಾರೆ. ಇನ್ನು ಕೆಲವು ತಾಲ್ಲೂಕುಗಳಲ್ಲಿ ದೊಡ್ಡ ದೊಡ್ಡ ಕಡೆಗಳಲ್ಲಿ ಜನರಲ್ ಆಸ್ಪತ್ರೆ ಅಂತ ಇರುತ್ತದೆ. ಅಂದರೆ ಒಂದು ರೂರಲ್ ಡಿಸ್ಪೆನ್ಸರಿ ಇನ್ನೊಂದು ಜನರಲ್ ಆಸ್ಪತ್ರೆ ಈ ರೀತಿ ಎರಡು ತರಹ ಆಸ್ಪತ್ರೆಗಳು ಇವೆ. ಜನರಲ್ ಆಸ್ಪತ್ರೆಗಳಲ್ಲಿ ಸರಿಯಾದ ಒಂದು ವ್ಯವಸ್ಥೆ ಇರುತ್ತದೆ. ರೂರಲ್ ಡಿಸ್ಪೆನ್ಸರಿಯಲ್ಲಿ ಸರಿಯಾದ ಡಾಕ್ಟರ್ ಇರುವುದಿಲ್ಲ. ಅಂಥಾ ಕಡೆ ವಿದ್ಯಾವಂತರಾದ ಬಿ. ವಿ ಎಸ್. ಸಿ. ಪಾಸ್ ಮಾಡಿಕೊಂಡಂಥಾ ಡಾಕ್ಟರುಗಳನ್ನು ಅಲ್ಲಿಗೆ ನೇಮಕ ಮಾಡಿದರೆ ಅಲ್ಲಿನ ಜನಗಳಿಗೆ ಅನುಕೂಲವಾಗುತ್ತದೆ. ಅಲ್ಲದೆ ಆ ಗ್ರಾಮಾಂತರ ಪ್ರದೇಶದಲ್ಲಿರುವ ದನಗಳಿಗೆ ಯಾವುದಾದರೂ ಖಾಯಿಲೆ ಬಂದರೆ ಚೆನ್ನಾಗಿ ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಈಗ ರೂರಲ್ ಡಿಸ್ಪೆನ್ಸರಿಯಲ್ಲಿ ಯಾರು ಇದ್ದಾರೋ ಅವರಿಗೆ ಸರಿಯಾಗಿ ನೋಡಿಕೊಳ್ಳುವುದಕ್ಕೆ ಬರುವುದಿಲ್ಲ. ರೂರಲ್ ಡಿಸ್ಪೆನ್ಸರಿಯಲ್ಲಿ ಕೆಲವು ಇನ್‌ಸ್ಪೆಕ್ಟರ್ ಇದ್ದರೂ ಸಹ ಅವರಿಗೆ ಎಸ್. ಎಸ್. ಎಲ್. ಸಿ. ಪಾಸಾಗಿ ಒಂದು ವರ್ಷ ಟ್ರೈನಿಂಗ್ ಕೊಟ್ಟಿದ್ದರೂ ಸಹ ಅವನಿಗೆ ಪೂರ್ತಿಯಾಗಿ ಆ ದಿನಗಳ ರೋಗಗಳನ್ನಾಗಲಿ ಅಥವಾ ಔಷಧಿ ಕೊಡುವುದರಲ್ಲಾಗಲಿ ಡಾಕ್ಟರ್ ಹಾಗೆ ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ.

೪.೩೦ ಪಿ. ಎಂ.

ಆದ್ದರಿಂದ ಮಾನ್ಯ ಮಂತ್ರಿಗಳು ಈ ಆಸ್ಪತ್ರೆಗಳ ಯೂನಿಟ್‌ಗಳಿಗೆ ಡಾಕ್ಟರ್‌ಗಳನ್ನು ನೇಮಕ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಮತ್ತು ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಇರುವಂತೆ ಇಲ್ಲಿಯೂ ಸಹ ಇಬ್ಬರು ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ, ಅವರುಗಳು ಹಳ್ಳಿಗಳಿಗೆ ಹೋಗಿ ಪ್ರಾಣಿಗಳನ್ನು ಸೈಂಟಿಫಿಕ್ ಆಗಿ ಸಾಕುವ ವಿಚಾರದಲ್ಲಿ ಗೈಡ್‌ಲೈನನ್ನು ಕೊಡಬೇಕಾಗುತ್ತದೆ.

ಒಂದೊಂದು ಜೊತೆ ಎತ್ತುಗಳ ಬೆಲೆ ೫-೬ ಸಾವಿರ ರೂಪಾಯಿಗಳಾಗುವುದರಿಂದ, ರೈತರ ಜೀವಮಾನವೆಲ್ಲಾ ಆ ಪ್ರಾಣಿಗಳ ಮೇಲಿರುತ್ತದೆ. ಆದಕಾರಣ ಅವುಗಳನ್ನು ಸರಿಯಾಗಿ ನೋಡಿಕೊಳ್ಳಲು ಗೈಡ್‌ಲೈನ್ ಕೊಡಬೇಕಾಗುತ್ತದೆ. ಒಂದು ವೇಳೆ ಅವರು ಸರಿಯಾಗಿ ನೋಡಿಕೊಳ್ಳದೆ, ಅವು ಸತ್ತು ಹೋದರೆ ಆ ರೈತರ ಸಂಸಾರವೇ ಹಾಳಾಗುತ್ತದೆ ಆದಕಾರಣ ಇದರ ಕಡೆಗೆ ಸರ್ಕಾರ ಗಮನ ಕೊಡಬೇಕು. ಈಗ ಸರ್ಕಾರದವರು ರೈತರು ಸುಖವಾಗಿ ಜೀವನ ಮಾಡಲು ಅನುಕೂಲವಾಗಲಿ ಎಂದು ಹಸುಗಳನ್ನು ಹಾಗೂ ಎಮ್ಮೆಗಳನ್ನು ಸರಬರಾಜುಮಾಡುತ್ತಿದ್ದಾರೆ. ಇವುಗಳ ಬೆಲೆ೪-೫ಸಾವಿರ ರೂಪಾಯಿಗಳಾಗುತ್ತವೆ. ಒಂದು ವೇಳೆ ಇವುಗಳು ಏನಾದರೂ ಸತ್ತು ಹೋದರೆ, ಆ ರೈತರ ಜೀವಮಾನವೇ ಹಾಳಾಗುತ್ತದೆ. ಆದಕಾರಣ ಇದಕ್ಕೆ ಅವಕಾಶವಾಗದಂತೆ ಡಾಕ್ಟರ್‌ಗಳು ರೈತರ ಹತ್ತಿರ ಹೋಗಿ ಅವುಗಳನ್ನು ಸಾಕುವ ವಿಚಾರದಲ್ಲಿ ಸೂಕ್ತ ಗೈಡ್‌ಲೈನ್ಸ್‌ಗಳನ್ನು ಕೊಡುತ್ತಿರಬೇಕು. ರೈತರ ಜೀವಮಾನವೆಲ್ಲಾ ಈ ಆಸ್ಪತ್ರೆಗಳ ಮೇಲೆ ನಿಂತಿರುವುದರಿಂದ, ಡಾಕ್ಟರ್‌ಗಳು ರೈತರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಅದೇ ರೀತಿ ರೈತರು ರೋಗರಹಿತವಾದಂಥ ಕೋಳಿ ಮತ್ತು ಕುರಿಗಳನ್ನು ಸಾಕಲು ಮಾರ್ಗದರ್ಶನ ನೀಡಬೇಕು. ಏಕೆಂದರೆ, ರೋಗವಿರುವ ಕೋಳಿ ಇಲ್ಲವೆ ಕುರಿ ಮಾಂಸವನ್ನು ಮಾರಾಟ ಮಾಡಿದರೆ, ಅದರ ಒಂದು ಖಾಯಿಲೆ ಮನುಷ್ಯರಿಗೂ ಹರಡುವ ಸಂಭವವಿರುತ್ತದೆ. ಆದಕಾರಣ ಈ ಪ್ರಾಣಿಗಳಿಗೆ ರೋಗ ಬರದಂತೆ ನೋಡಿಕೊಳ್ಳಲು ಸೂಕ್ತ ತಿಳುವಳಿಕೆಯನ್ನು ಕೊಡಬೇಕು. ಕೋಳಿಗಳಿಗೆ ಒಂದು ತರಹ ರೋಗ ಬರುತ್ತದೆ. ಅದು ಬಂದಾಗ ಗುಂಪಿನಲ್ಲಿರುವ ಎಲ್ಲ ಕೋಳಿಗಳೂ ಸತ್ತುಹೋಗುತ್ತವೆ. ಇದನ್ನು ತಪ್ಪಿಸಲು ವರ್ಷಕ್ಕೆ ಒಂದು ಸಲ ಕೋಳಿಗಳಿಗೆ ಇಂಜಕ್ಷನ್ ಕೊಡುವ ವ್ಯವಸ್ಥೆ ಮಾಡಬೇಕು,

(ಶ್ರೀ ಎಂ, ಸಿ, ಬಸಪ್ಪನವರು ಪೀಠವನ್ನು ಅಲಂಕರಿಸಿದರು)

ಇನ್ನು ದನಗಳ ಮೇವವನ್ನು ಬೆಳೆಸಲು ರೈತರಿಗೆ ಅವಕಾಶ ಮಾಡಿಕೊಡಬೇಕು, ಈ ಮೊದಲು ಹುಲ್ಲನ್ನು ಬೆಳೆಸುವ ಸಲುವಾಗಿ ಬಾವಿ ತೆಗೆಸಲು ಸರ್ಕಾರದವರು ಸಹಾಯ ಮಾಡುತ್ತಿದ್ದರು. ಆದರೆ ಈಗ ಆ ಸ್ಕೀಮು ಜಾರಿಯಲ್ಲಿ ಇಲ್ಲ. ಇನ್ನು ಮುಂದೆಯಾದರೂ ರೈತರಿಗೆ ಬಾವಿ ತೆಗೆಸಲು ಅವಕಾಶ ಮಾಡಿಕೊಟ್ಟರೆ, ಅವರು ಹೆಚ್ಚಿನ ಪ್ರಮಾಣದಲ್ಲಿ ಹುಲ್ಲು ಬೆಳೆಸಲು ಅನುಕೂಲವಾಗುತ್ತದೆಂದ ಹೇಳುತ್ತೇನೆ.

ಇನ್ನು ಮಾನ ರಾಮೇಗೌಡರು ಹೇಳಿದಂತೆ ಹಳ್ಳಿಕಾರ್ ತಳಿಗಳು ಹಾಗೂ ಅಮೃತಮಹಲ್ ತಳಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಈ ತಳಿಗಳ ಸಂಖ್ಯೆಯನ್ನು ಹೆಚ್ಚು ಮಾಡಿದರೆ ರೈತರಿಗೆ ಅನುಕೂಲವಾಗುವುದರಿಂದ. ಇವುಗಳ ಸೆಂಟರ್‌ಗಳನ್ನು ನಾಗಮಂಗಲದಲ್ಲಿ ಹಾಗೂ ಬೇರೆ ಕಡೆಗಳಲ್ಲಿ ತೆರೆಯಬೇಕು. ಈಗ ಅಜ್ಜಂಪುರದಲ್ಲಿ ಈ ಒಂದು ಕೇಂದ್ರವಿದ್ದರೂ ಸಹ ಅಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ಆದ್ದರಿಂದ ಈ ತಳಿಗಳನ್ನು ಬೆಳೆಸಲು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ,

ಇನ್ನು ಸರ್ಕಾರದ ವಶದಲ್ಲಿ ಬೇಕಾದಷ್ಟು ಅಮೃತಮಹಲ್ ಕಾವಲ್ ಇತ್ತು. ಇದರಲ್ಲಿ ಸ್ವಲ್ಪ ಭಾಗವನ್ನು ಜನರಿಗೆ ಕೊಡಲಾಗಿದೆ. ಉಳಿದಿರುವ ಜಾಗದ ವಿಚಾರದಲ್ಲಿಯೂ ಭ್ರಷ್ಟಾಚಾರ ನಡೆಯುತ್ತಿದೆ. ಇದಕ್ಕೆ ಅವಕಾಶ ಮಾಡಿಕೊಡದೆ, ಆ ಜಾಗವನ್ನು ಹಾಗೆಯೇ ಉಳಿಸಿಕೊಂಡು ಪ್ರಾಣಿಗಳ ಮೇವಿಗೆ ಅನುಕೂಲ ಮಾಡಿಕೊಟ್ಟರೆ ರೈತರಿಗೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ.

ಇನ್ನು ವ್ಯವಸಾಯ ವಿಶ್ವವಿದ್ಯಾನಿಲಯದಲ್ಲಿ ಪ್ರಾಣಿಗಳಿಗೆ ಸಂಬಂಧಪಟ್ಟಂತೆ ಹಾಗೂ ಸಸ್ಯಗಳಿಗೆ ಸಂಬಂಧಪಟ್ಟಂತೆ ಬೇರೆಬೇರೆ ಸೆಕ್ಷನ್‌ಗಳನ್ನು ತೆರೆಯಬೇಕು. ಉಪಕುಲಪತಿಗಳು ಒಬ್ಬರೇ ಇದ್ದರೂ ಸಹ ಸೆಕ್ಷನ್‌ಗಳು ಮಾತ್ರ ಪ್ರತ್ಯೇಕವಾಗಿರಬೇಕು. ಒಂದೇ ಸೆಕ್ಷನ್ ಇದ್ದರೆ ಕೆಲಸಗಳು ಸರಿಯಾಗಿ ನಡೆಯುವುದಿಲ್ಲ. ಆದ್ದರಿಂದ ಎಜುಕೇಷನ್ ರೀಸರ್ಚ್, ಎಕ್ಸ್‌ಟೆನ್‌ಷನ್ ಸ್ಕೀಮುಗಳು ಬೇರೆ ಬೇರೆಯಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಬೇಕು.

ಇನ್ನು ಪ್ರತಿ ಆಸ್ಪತ್ರೆಯ ಯೂನಿಟ್‌ಗಳಲ್ಲಿಯೂ ರೆಫ್ರಿಜೆರೇಟರ್ ಇಡುವಂತಹ ವ್ಯವಸ್ಥೆ ಮಾಡಬೇಕು. ಏಕೆಂದರೆ ಇಲ್ಲಿಂದ ಔಷಧಗಳನ್ನು ತೆಗೆದುಕೊಂಡು ಹೋದಮೇಲೆ ಅವುಗಳನ್ನು ಇಡಲು ಸರಿಯಾದ ಸ್ಥಳ ಅಲ್ಲಿರುವುದಿಲ್ಲ. ಎಲ್ಲಿಯೋ ಇಟ್ಟರೆ ಅವು ಕೆಟ್ಟು ಹೋಗುತ್ತವೆ. ಆದ ಕಾರಣ ಔಷಧಗಳು ಕೆಡದಂತೆ ನೋಡಿಕೊಳ್ಳಲು ಎಲ್ಲ ಕಡೆಗಳಿಗೂ ರೆಫ್ರಿಜೆರೇಟರ್‌ಗಳನ್ನು ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಮಹಾರಾಜರ ಕಾಲದಲ್ಲಿ ಪ್ರಾರಂಭವಾದಂಥ ವ್ಯಾಕ್ಸಿನ್ ಇನ್ಸ್‌ಟಿಟ್ಯೂಟ್ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಂದರೆ ನಮ್ಮ ರಾಜ್ಯಕ್ಕೆ ಬೇಕಾಗುವಷ್ಟು ಔಷಧಗಳನ್ನು ಅಲ್ಲಿ ತಯಾರು ಮಾಡುತ್ತಿಲ್ಲ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಆದಕಾರಣ ಅದನ್ನು ಇನ್ನೂ ವಿಸ್ತಾರ ಮಾಡಿ, ಎಲ್ಲ ರೀತಿಯ ಔಷಧಗಳನ್ನು ತಯಾರು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಜಿಲ್ಲಾ ಆಸ್ಪತ್ರೆಗಳಲ್ಲಿ ಎಕ್ಸರೇ ಯೂನಿಟ್‌ಗಳನ್ನು ಸ್ಥಾಪಿಸಬೇಕು ಮತ್ತು ಅವುಗಳನ್ನು ನೋಡಿಕೊಳ್ಳಲು ಡಾಕ್ಟರ್‌ಗಳನ್ನು ನೇಮಕ ಮಾಡಬೇಕು. ಇಲ್ಲದಿದ್ದರೆ ರೈತರಿಗೆ ಕಷ್ಟವಾಗುತ್ತದೆ. ಇದರ ಜೊತೆಗೆ ಸಾಕಷ್ಟು ಔಷಧಗಳನ್ನು ಸರಬರಾಜು ಮಾಡಬೇಕು, ಈಗ ಔಷಧಗಳು ಇಲ್ಲವೆಂದು ಬರೆದುಕೊಡುತ್ತಾರೆ. ಅದರೆ ಅವುಗಳನ್ನು ಕೊಂಡುಕೊಳ್ಳಲು ರೈತರ ಹತ್ತಿರ ಹಣವಿರುವುದಿಲ್ಲ. ಆದ್ದರಿಂದ ಉಚಿತವಾಗಿ ಔಷಧಗಳನ್ನು ವಿತರಣೆ ಮಾಡಲು ವ್ಯವಸ್ಥೆ ಮಾಡಬೇಕು. ಹಸುಗಳಿಗೆ ಕಾಲು ಮತ್ತು ಬಾಯಿ ರೋಗ ಬಂದರೆ ರೈತರಿಂದ ಹಣ ಪಡೆಯದೆ ಚಿಕಿತ್ಸೆ ನೀಡಬೇಕು. ಅದೇರೀತಿ ಹೆಚ್ಚು ಮಾಂಸ ಸಿಗುವಂತಹ ಕೋಳಿ ಮತ್ತು ಕುರಿಗಳನ್ನು ಬೆಳೆಸಲು ಅಭಿವೃದ್ಧಿ ಕೇಂದ್ರಗಳನ್ನು ತೆರೆಯಬೇಕು. ಇದರಿಂದ ಬಡ ರೈತರಿಗೆ ಆರ್ಥಿಕಾಭಿವೃದ್ಧಿಗೆ ಸಹಾಯ ಮಾಡಿದಂತೆ ಆಗುತ್ತದೆ. ಈಗ ಹುಲ್ಲುಗಾವಲಿನಲ್ಲಿ ಹುಲ್ಲನ್ನು ತೆಗೆದುಕೊಳ್ಳಲು ಹಣ ಕೊಡಬೇಕಾಗಿದೆ. ಇದು ಸರಿಯಲ್ಲ, ಇದನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ರೈತರ ಒಂದು ಏಳಿಗೆಗಾಗಿ ಈ ಇಲಾಖೆ ಕೆಲಸ ಮಾಡಬೇಕೆಂದು ಸಲಹೆ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬದಾಮಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ನಾನಾ ಇಲಾಖೆಗಳ ಬೇಡಿಕೆಗಳನ್ನು ಬೆಂಬಲಿಸಿ ನಾನು ಮುಖ್ಯವಾಗಿ ಪಶುಸಂಗೋಪನಾ ಇಲಾಖೆಯ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರ್ಕಾರದವರು ಪಶುಸಂಗೋಪನಾ ವಿಚಾರದಲ್ಲಿ ಮತ್ತು ಹಳ್ಳಿಯಲ್ಲಿರುವಂತಹ ಬಡ ರೈತರ ಬಗ್ಗೆ ಹಾಗೂ ಅವರ ಆರ್ಥಿಕ ಸ್ಥಿತಿಯನ್ನು ಹೆಚ್ಚು ಮಾಡುವುದಕ್ಕಾಗಿ ಹೆಚ್ಚಿನ ಒಂದು ಲಕ್ಷ್ಯ ವಹಿಸಿದೆ ಎಂದುಸ್ಪಷ್ಟವಾಗಿ ಹೇಳಬಹುದು. ನಮ್ಮ ಕರ್ನಾಟಕ ರಾಜ್ಯ ಇಡೀ ದೇಶದಲ್ಲಿಯೇ ಪಶುಸಂಗೋಪನಾ ಇಲಾಖೆಯ ಮೇಲೆ ಹೆಚ್ಚಿನ ಒಂದು ಕಾಳಜಿ ವಹಿಸಿದೆ. ಪಶುಪಾಲನೆ ಬಗ್ಗೆ ಒಂದು ಹೆಜ್ಜೆ ಮುಂದೆ ಇಟ್ಟಿದೆ ಎಂದರೆ ತಪ್ಪಾಗಲಾರದು. ಅಂತಹ ಒಂದು ಸಾಹಸವನ್ನು ನಮ್ಮ ಸರ್ಕಾರದವರು ಮಾಡಿದ್ದಾರೆ. ಶೇಕಡಾ ೮೦ ರಷ್ಟು ಜನರು ಏನು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ, ಅವರ ಒಂದು ಭವಿಷ್ಯವನ್ನು ಹೆಚ್ಚು ಮಾಡುವುದರಲ್ಲಿ ನಮ್ಮ ಸರ್ಕಾರದವರು ಪ್ರಯತ್ನ ಮಾಡಿದ್ದಾರೆಂಬುದನ್ನು ಧಾರಾಳವಾಗಿ ಒಪ್ಪಿಕೊಳ್ಳಬಹುದು. ಪಶು ಸಂಪತ್ತನ್ನು ಹೆಚ್ಚು ಮಾಡುವ ಬಗ್ಗೆ ನಮ್ಮ ಸರ್ಕಾರದವರು ಹೆಚ್ಚಿನ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆಂದು ಹೇಳಬಹುದು. ಈ ಕಾರ್ಯಕ್ರಮಗಳ ಮೂಲಕ ರೈತರ ಕುಟುಂಬಗಳು ಏಳಿಗೆ ಪಡೆಯುತ್ತಿವೆ. ಸರ್ಕಾರದವರು ಈ ಕೆಳಕಂಡ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. Drought prone areas ; Establishment of Bull Centre ; Establishment of Calves Centre ; Mobile Clinics ; Establishment of Service Centres ; Command Area Development Authority and Livestock Production Programme.

ಹೀಗೆ ನಮ್ಮ ರೈತರಿಗೆ ಅನುಕೂಲವಾಗುವಂತಹ ಮತ್ತು ಸಹಾಯವಾಗುವಂತಹ ಯೋಜನೆಗಳನ್ನು ನಮ್ಮ ಸರ್ಕಾರದವರು ಹಾಕಿಕೊಂಡಿದ್ದಾರೆ. ಈ ಯೋಜನೆಗಳನ್ನು ಹಾಕಿಕೊಂಡಂಥ ವಿಷಯದಲ್ಲಿ ಅನುಮಾನ ಬಂದು ಒಂದು ಮಾತನ್ನು ಪ್ರಸ್ತಾಪ ಮಾಡಬೇಕಾಗಿದೆ. ಏಕೆಂದರೆ, ಪಶುಸಂಗೋಪನಾ ವಿಷಯದಲ್ಲಿ ಪಶುಗಳ ಆರೋಗ್ಯದ ಬಗ್ಗೆಯಾಗಲಿ ಅಥವಾ ಪಶುಗಳ ಆಹಾರದ ಬಗ್ಗೆಯಾಗಲಿ ಹೆಚ್ಚಿನ ಕಾಳಜಿ ವಹಿಸಬೇಕು ಎನ್ನುವುದು ನನ್ನ ಭಾವನೆ. ಪಶುಗಳಿಂದ ನಾವು ಸಾಕಷ್ಟು ಸಂಪಾದನೆ ತೆಗೆದುಕೊಳ್ಳತಕ್ಕ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ನಿಜ. ಪಶುಗಳ ಆಹಾರದ ವಿಚಾರದಲ್ಲಿ ನಾವು ಸಾಕಷ್ಟು ಗಮನಹರಿಸಿಲ್ಲ. ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ರೈತರಿಗೆ ಪಶುಗಳನ್ನು ಸಾಕುವುದಕ್ಕೆ ಸರ್ಕಾರ ಅನೇಕ ಸವಲತ್ತುಗಳನ್ನು ಕೊಟ್ಟಾಗ, ಸರ್ಕಾರದಿಂದ ಸವಲತ್ತುಗಳನ್ನು ತೆಗೆದುಕೊಂಡರು ರೈತರು ಪಶುಗಳಿಗೆ ಆಹಾರಕ್ಕಾಗಿ ಏನು ಅನುಕೂಲತೆ ಮಾಡಿಕೊಟ್ಟಿದ್ದಾರೆ ಎಂಬ ಸ್ಪಷ್ಟವಾದ ಚಿತ್ರವನ್ನು ನೋಡಿದಾಗ ಉತ್ತರ ಸಿಕ್ಕುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಕುರಿಗಳನ್ನು ಸಾಕುವುದಕ್ಕೆ ಅನೇಕ ಸೊಸೈಟಿಗಳನ್ನು ಮಾಡುತ್ತಾ ಇದ್ದಾರೆ. ಸರ್ಕಾರದ ಯೋಜನೆಗಳಲ್ಲಿ

ಅನೇಕ ಕಾರ್ಯಕ್ರಮಗಳಿವೆ. ಇಂತಹ ಕಾರ್ಯಕ್ರಮಗಳಲ್ಲಿ ರೈತರು ಕುರಿಗಳನ್ನು ಸಾಕುವುದಕ್ಕೆ ಮುಂದೆ ಬಂದಾಗ ಅವರಿಗೆ ಅನುಕೂಲತೆಗಳನ್ನು ಮಾಡಿಕೊಡಬೇಕು. ಒಬ್ಬ ರೈತನಿಗೆ ೧೦೦ ಕುರಿಗಳನ್ನು ಪಡೆಯುವುದಕ್ಕೆ ಆಸ್ಪದ ಮಾಡಿಕೊಟ್ಟರೆ, ಹಣ ಒದಗಿಸಿಕೊಡತಕ್ಕ ಕುರಿಗಳನ್ನು ಸಾಕುವುದಕ್ಕೂ ಅನುಕೂಲತೆ ಮಾಡಿಕೊಡದೇ ಹೋದರೇ ಸಾಲವನ್ನು ಕೊಟ್ಟಿದ್ದರೂ ಸಹಿತ ಅದು ಸದುಪಯೋಗವಾಗಲಿಕ್ಕಿಲ್ಲ. ಇಂತಹದ್ದರಲ್ಲಿ ನಾವು ಸರ್ಕಾರದಲ್ಲಿ ನ್ಯೂನತೆಗಳನ್ನು ನೋಡುತ್ತಾ ಇದ್ದೇವೆ. ಅಧಿಕಾರಿಗಳು ಯಾವುದೇ ಸಹಾಯ ಸೌಲತ್ತನ್ನು ಕೊಡುವುದಕ್ಕೆ ಮುಂದಾಗುತ್ತಾರೆ. ಆದರೆ ಕೊಟ್ಟ ಸಹಾಯ ಸೌಲತ್ತನ್ನು ಎಷ್ಟರಮಟ್ಟಿಗೆ ಉಪಯೋಗಿಸಿದ್ದಾರೆ ಎನ್ನುವುದರ ಕಡೆ ಸರ್ಕಾರವಾಗಲೀ, ಅಧಿಕಾರಿಗಳಾಗಲೀ ಮುಂದಾಲೋಚನೆ ಮಾಡತಕ್ಕಂಥ ಭಾವನೆ ಇನ್ನೂ ಬಂದಿಲ್ಲ. ಇದರ ಬಗ್ಗೆ ಸರ್ಕಾರದವರು, ಮಾನ್ಯ ಮಂತ್ರಿಗಳು ಹೆಚ್ಚಿನ ಗಮನವನ್ನು ಹರಿಸುವುದಕ್ಕೆ ಪ್ರಯತ್ನಪಡಬೇಕು. ಮೇಲಾಗಿ ಪಶುಗಳ ಅಭಿವೃದ್ಧಿ ಬಗ್ಗೆ ಮಾತನಾಡುವಾಗ ನಾನು ನೋಡಿದೆ. ಪಶುಗಳ ಸಂಪತ್ತನ್ನು ತುಲನೆಮಾಡಿ ನೋಡಿದಾಗ ಸಮಾಧಾನವಾಯಿತು. ಆದರೆ ಪಶುಗಳ ಸಂಖ್ಯೆಯನ್ನು ಹೆಚ್ಚಿಸಿದ್ದೇವೆಯೇ ಎಂಬುದರ ಬಗ್ಗೆ ಗಮನ ಹರಿಸಿದಾಗ ೧೯೭೨ನೇ ಇಸವಿಯಿಂದ ಇಲ್ಲಿಯವರೆಗೆ ಪಶುಗಳ ಸಂಖ್ಯೆಯನ್ನು ಹೆಚ್ಚಿಸಿದ್ದೇವೆಯೇ ಎಂದು ನೋಡಿದಾಗ ಸಮಾಧಾನಕರವಾದಂಥ ಉತ್ತರ ಸಿಕ್ಕಿಲ್ಲ. ಉದಾಹರಣೆಗೆ ಕುರಿಗಳ ಸಂಖ್ಯೆಯನ್ನು ತೆಗೆದುಕೊಂಡರೆ ೧೯೭೨ ರಿಂದ ೧೯೭೮ರ ವರೆಗೆ ಇರತಕ್ಕ ಅಂಕಿಸಂಖ್ಯೆಗಳನ್ನು ನೋಡಿದಾಗ ೨.೭೦ ಪರ್ಸೆಂಟ್ ಕಡಿಮೆಯಾಗಿದೆ. ೧೯೭೨ ರಿಂದ ೧೯೭೮ರ ವರೆಗೆ ಆಡುಗಳ ಸಂಖ್ಯೆಯನ್ನು ತೆಗೆದುಕೊಂಡರೆ ೯.೭೦ರಷ್ಟು ಸಾಕಣಿಕೆಯಲ್ಲಿ ಕಡಿಮೆಯಾಗಿದೆ. ಇದಕ್ಕೆ ಕಾರಣ ವೈದ್ಯಕೀಯ ಸೌಲತ್ತುಗಳನ್ನು ಎಷ್ಟು ಕೊಡಬೇಕೊ ಅಷ್ಟು ಕೊಟ್ಟಿಲ್ಲ. ಕುರಿ ಸಂಪತ್ತಿನ ಬಗ್ಗೆ ಕಾಳಜಿ ವಹಿಸಿಲ್ಲ. ನಾನು ಒಂದು ಪ್ರಮುಖವಾದ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಕುರಿಗಳ ಸಂಪತ್ತಿನ ಬಗ್ಗೆ ನಮ್ಮ ಸರ್ಕಾರ ಬಹಳ ಆಸಕ್ತಿ ವಹಿಸಿದೆ. ಇಡೀ ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಕುರಿಗಳ ಅಭಿವೃದ್ಧಿಗೋಸ್ಕರ ಸ್ಟ್ಯಾಚುಟರಿ ಬೋರ್ಡನ್ನು ಸ್ಥಾಪನೆ ಮಾಡಿದ್ದಾರೆ. ಇದರ ಉದ್ದೇಶವೇನೆಂದರೆ, ರಾಜ್ಯದಲ್ಲಿರತಕ್ಕ ಕುರಿ ಸಾಕಣಿಕೆದಾರರಿಗೆ ಹೆಚ್ಚಿನ ಲಾಭ ಸಿಕ್ಕಿಲ್ಲ. ಇದರಿಂದ ಅವರ ಜೀವನಮಟ್ಟ ಅಭಿವೃದ್ಧಿಯಾಗಲಿ ಎಂದು ಬೋರ್ಡನ್ನು ಸ್ಥಾಪನೆ ಮಾಡಿದರು. ೧೯೭೫ನೇ ಇಸವಿಯಲ್ಲಿ ಈ ಬೋರ್ಡ್ ಸ್ಥಾಪನೆಯಾಯಿತು. ಆ ಬೋರ್ಡ್‌ಗೆ ಕೆಲವು ಡೈರೆಕ್ಟರುಗಳನ್ನು, ಛೇರ್ಮನನ್ನು ನೇಮಕ ಮಾಡಿದರು. ಈ ಬೋರ್ಡ್‌ನಿಂದ ಇಲ್ಲಿಯವರೆಗೆ ಕುರಿ ಸಾಕುವುದಕ್ಕೆ ರೈತನಿಗೆ ಸಾಲ ದೊರಕಲಿಲ್ಲ. ಇದು ನಿಜಕ್ಕೂ ದುರದೃಷ್ಟಕರ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಅಮೂಲಾಗ್ರವಾಗಿ ವಿಚಾರಮಾಡಬೇಕು. ೧೯೭೫ನೇ ಇಸವಿಯಿಂದ ಇವತ್ತಿನವರೆಗೆ ಬೋರ್ಡಿನಿಂದ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಬಡ ರೈತನಿಗೆ ಮುಟ್ಟಿಲ್ಲ. ಕುರಿಗಳ ಅಭಿವೃದ್ಧಿ ಬಗ್ಗೆ ಅಸೋಸಿಯೇಷನ್‌ಗಳಿದ್ದರೂ ಕೂಡ ಯಾವ ಅಸೋಸಿಯೇಷನ್ನೂ ಸರಿಯಾಗಿ ಕಾರ್ಯಗತ ಮಾಡುತ್ತಾ ಇಲ್ಲ. ಆದ್ದರಿಂದ ಅಮೂಲಾಗ್ರವಾಗಿ ಇದರ ಬಗ್ಗೆ ವಿಚಾರ ಮಾಡಬೇಕು. ಕುರಿ ಸಂಗೋಪನೆಯನ್ನು ಹೆಚ್ಚು ಮಾಡಬೇಕು ಅಂದರೆ ನಮ್ಮ ರಾಜ್ಯದಲ್ಲಿ ಕುರಿ ಸಂಗೋಪನೆಯನ್ನು ಅಭಿವೃದ್ಧಿಪಡಿಸಬೇಕು. ಅಭಿವೃದ್ಧಿ ಪಡಿಸಿದರೆ ಇದರಿಂದ ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ಉತ್ಪನ್ನ ಕೊಡುವುದರಲ್ಲಿ ಸಂದೇಹವಿಲ್ಲ. ಇದರಲ್ಲಿ ಕರ್ನಾಟಕ ರಾಜ್ಯ ೪ನೇ ರಾಜ್ಯ. ಉಣ್ಣೆ ಉತ್ಪಾದನೆಯಲ್ಲೂ ನಮ್ಮ ರಾಜ್ಯ ೪ನೇ ಸ್ಥಾನದಲ್ಲಿದೆ. ಕರ್ನಾಟಕ ರಾಜ್ಯ ಸರ್ಕಾರದವರು ಇದರ ಬಗ್ಗೆ ಹೆಚ್ಚಿಗೆ ಕಾಳಜಿವಹಿಸಿ ಕುರಿ ಸಾಕತಕ್ಕವರಿಗೆ ಕುರಿಗಳನ್ನು ಮೇಯಿಸುವುದಕ್ಕೆ ಪ್ರದೇಶಗಳನ್ನು ನಿರ್ಮಿಸಿ ಹೆಚ್ಚಿನ ರೀತಿಯಲ್ಲಿ ಸಹಾಯ ಸೌಕರ್ಯಗಳನ್ನು ಒದಗಿಸಿಕೊಡುವುದಾದರೆ, ಇದು ರಾಜ್ಯಕ್ಕೆ ಉತ್ಪನ್ನ ಕೊಡತಕ್ಕ ದೊಡ್ಡ ಉದ್ಯಮವಾಗುವುದರಲ್ಲಿ ಸಂದೇಹವಿಲ್ಲ. ಅದಕ್ಕೋಸ್ಕರ ಮಾನ್ಯ ಮಂತ್ರಿಗಳು ಇದರ ಬಗ್ಗೆ ಕಾಳಜಿವಹಿಸಿ ಈ ಬೋರ್ಡ್‌ನಿಂದ ಇದುವರೆಗೆ ಏನು ಅನುಕೂಲತೆಗಳು ಸಿಕ್ಕಿಲ್ಲ ಅವುಗಳು ಸಿಕ್ಕುವಂತೆ ಮಾಡಬೇಕು ಎಂದು ನಾನು ಕಳಕಳಿಯಿಂದ ಬಿನ್ನವಿಸಿಕೊಳ್ಳುತ್ತೇನೆ. ಪಶುಸಂಗೋಪನೆಯಿಂದ ಹಳ್ಳಿಗರಿಗೆ ಇನ್ನೂ ಅನೇಕ ಸೌಲತ್ತುಗಳು ಸಿಕ್ಕುತ್ತಾ ಇಲ್ಲವೆನ್ನುವುದನ್ನು ಕೇಳುತ್ತಿದ್ದೇವೆ. ಇವತ್ತು ದನಗಳನ್ನು ಸಾಲದಿಂದ ತಂದಾಗ ಅವು ರೋಗಬಂದು ಸತ್ತಾಗ ಇಡೀ ಕುಟುಂಬವೇ ಕಣ್ಣೀರಿಡಬೇಕಾದ ಪರಿಸ್ಥಿತಿ ಬಂದಿದೆ. ಆದ್ದರಿಂದ ಪಶುಸಂಪತ್ತಿನ ಬಗ್ಗೆ ಹೆಚ್ಚಿನ ಕಾಳಜಿವಹಿಸಿ ವೈದ್ಯಕೀಯ ಸೌಲತ್ತುಗಳನ್ನು ಒದಗಿಸಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೆ, ಈ ಪಶುಸಂಗೋಪನಾ ವಿಚಾರದಲ್ಲಿ ಒಂದು ವಿಷಯವನ್ನು ಮಾತ್ರ ಹೇಳುತ್ತೇನೆ, ಹೆಚ್ಚಿಗೆ ಹೇಳುವುದಿಲ್ಲ. ಈ ವಿಚಾರದಲ್ಲಿ ಸಾಮಾನ್ಯವಾಗಿ ಹೆಚ್ಚಿಗೆ ಪ್ರೋತ್ಸಾಹ ಕೊಡತಕ್ಕ ಮಾತನಾಡುತ್ತೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಪಶುಸಮೃದ್ಧಿಗೆ ಮೂಲ ಕೊರತೆ ಏನೆಂದರೆ, ಜಾನುವಾರಗಳನ್ನು ಸಾಕಲು ಹಿಂದೆ ನಿಗದಿ ಮಾಡಿದ ಗೋಮಾಳ ಮುಂತಾದ ಜಾಗಗಳನ್ನು ಈಗ ಉಳುಮೆ ಜಾಗವನ್ನಾಗಿ ಮಾಡಿರುವುದರಿಂದ ಬಹಳಷ್ಟು ತೊಂದರೆಯಾಗಿದೆ. ಹಿಂದೆ ಒಂದು ನಿಯಮವನ್ನಿಟ್ಟುಕೊಂಡೂ ಪ್ರತಿಯೊಂದು ಗ್ರಾಮದಲ್ಲೂ ಜಾನುವಾರು ಸಂಖ್ಯೆಗನುಗುಣವಾಗಿ ಜಮೀನನ್ನು ಮೀಸಲಾಗಿಟ್ಟಿದ್ದರು, ಇವತ್ತು ಅದು ಇಲ್ಲದೇ ಹೋದ ಕಾರಣ ಬಹಳಷ್ಟು ತೊಂದರೆಯಾಗಿದೆ. ಇದು ಪಶುಸಂಪತ್ತಿನ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕಾದ ವಿಚಾರ. ಎರಡನೆಯದು, ನಾವು ಪಶುಸಮೃದ್ಧಿ ಬಗ್ಗೆ ಗೋಸಂಪತ್ತಿನ ಬಗ್ಗೆ ಬಹಳ ಮಾತನಾಡುತ್ತೇವೆ. ಮೈಸೂರು ಜಿಲ್ಲೆಯೊಳಗೆ ಇನ್ನೂ ೪ ವರ್ಷ ಉಳುಮೆ ಮಾಡತಕ್ಕ ಎತ್ತುಗಳನ್ನು ನಾಲ್ಕಾರು ವರ್ಷ ಕರೆಯತಕ್ಕ ಹಸುಕರುಗಳನ್ನು ಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಸಾವಿರಾರು ದನಕರುಗಳು ಪ್ರತಿ ವಾರ ಮೈಸೂರು ಜಿಲ್ಲೆಯ ಎಲ್ಲೆಯಿಂದ ಕೇರಳದ ಕಟುಕರಿಗಾಗಿ ಹೋಗುತ್ತಾ ಇರುವುದನ್ನು ನೋಡುತ್ತಾ ಇದ್ದೇವೆ, ಗೋವೆಗೂ ಹೋಗುತ್ತಿದೆಯೆಂದು ಕೇಳಿದ್ದೇನೆ ಆದ್ದರಿಂದ ಕರ್ನಾಟಕದಿಂದ ಸಾವಿರಾರು ಪಶುಗಳು ಹೊರಗಡೆ ಹೋಗುವುದನ್ನು ತಡೆಗಟ್ಟುವುದಕ್ಕೆ ಏನಾದರೂ ಸೂಕ್ತ ಕ್ರಮ ತೆಗೆದುಕೊಳ್ಳದೇ ಹೋದರೆ ನಿಜವಾಗಿಯೂ ಗೋಸಂಪತ್ತು ಕಡಿಮೆಯಾಗುವುದಕ್ಕೆ ಕಾರಣವಾಗುತ್ತದೆ. ಮೂರನೆಯದು, ಹಾಲು ಕರೆಯತಕ್ಕ ಹಸುಗಳ ಬಗ್ಗೆ ಎಲ್ಲಾ ವ್ಯವಸ್ಥೆಯನ್ನು ಮಾಡುತ್ತಾ ಇದ್ದೀರಿ. ಹಸುಗಳನ್ನು ಸಾಕತಕ್ಕವರಿಗೆ ನಷ್ಟ ಸಂಭವಿಸಿದರೆ ಕಂಪಲ್ಸರಿ ಇನ್‌ಷ್ಯೂರೆನ್ಸ್ ಮಾಡತಕ್ಕ ಯೋಜನೆಯನ್ನು ಜಾರಿಗೆ ತರಬೇಕು. ಎತ್ತುಗಳಿಗೆ ಹಸುಗಳಿಗೆ ಕಂಪಲರ್ಸಿಯಾಗಿ ಇನ್‌ಷ್ಯೂರೆನ್ಸ್ ಮಾಡತಕ್ಕ ವ್ಯವಸ್ಥೆ ದೇಶದಲ್ಲಿ ಆಗಬೇಕು. ಅಲ್ಲದೆ ಹಾಲು ಉತ್ಪಾದನೆ ಮಾಡತಕ್ಕ ಡೈರಿಯೊಳಗೆ ಹಾಲಿನ ವಿವಿಧ ಸ್ವರೂಪ ಕೊಡತಕ್ಕ ಕಾರ್ಮಿಕರಿಗೆ ಇಂಡಸ್ಟ್ರಿಯಲ್ ಲಾ ಅಪ್ಲೈ ಮಾಡಿ ಬೋನಸ್ ಕೊಡುತ್ತೀರಿ, ಫ್ಯಾಕ್ಟರಿ ಕಾರ್ಮಿಕರಿಗೆ ಬೋನಸ್ ಕೊಡುತ್ತೀರಿ. ಅದೇ ರೀತಿ ಹಸುಗಳನ್ನು ಸಾಕಿ ಹಾಲು ಸರಬರಾಜು ಮಾಡತಕ್ಕವರಿಗೆ, ಹಾಲು ಮಾರಾಟ ಮಾಡತಕ್ಕವರಿಗೆ ಬೋನಸ್ ಕೊಡತಕ್ಕ ವ್ಯವಸ್ಥೆ ದೇಶದೊಳಗೆ ಆಗಬೇಕು. ಇಲ್ಲದೇ ಹೋದರೆ ಜನತೆ ಕ್ರಾಂತಿ ಮಾಡಬೇಕಾದ ಕಾಲ ಬಂದೀತು ಎಂದು ಸರಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದು ಕೋ ಆಪರೇಟೀವ್ ಸೊಸೈಟಿಗಳಿಗೆ ಹಾಲು ಕೊಟ್ಟಮೇಲೆ ವರ್ಷಕ್ಕೊಂದು ಸಾರಿ ಬೋನಸ್ ಕೊಡುವಂಥಾ ಸಿಸ್ಟಂ ಜಾರಿಯಲ್ಲಿದೆ. ಅದೇ ರೀತಿ ಹಾಲು ಕೊಡುವವರಿಗೂ ಸಹ ಈ ಸೌಲಭ್ಯ ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ಇನ್ನು ಡೈರಿ ಡೆವಲಪ್‌ಮೆಂಟ್ ವಿಚಾರದಲ್ಲಿ ಹಾಲು ಉತ್ಪಾದನೆ ಮಾಡುವವರಿಗೆ ಸಾಕಷ್ಟು ಹೆಚ್ಚಿನಬೆಲೆ ಸಿಗುತ್ತಿಲ್ಲ ಎನ್ನುವ ಮಾತನ್ನು ಸಾಕಷ್ಟು ಜನ ಹೇಳಿದ್ದಾರೆ. ಆದುದರಿಂದ ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ ಬಹಳ ಮುಖ್ಯವಾಗಿ ಗಮನಿಸಬೇಕಾದ ವಿಷಯ ಎಂದರೆ, ನಮ್ಮ ದೇಶಕ್ಕೆ ಡೈರಿ ಡೆವಲಪ್‌ಮೆಂಟ್‌ಗೋಸ್ಕರವಾಗಿ ವರ್ಲ್ಡ್ ಬ್ಯಾಂಕ್‌ನವರು ಕೋಟ್ಯಾಂತರ ರೂಪಾಯಿಗಳ ಹಣವನ್ನು ಕೊಡುತ್ತಿದ್ದಾರೆ. ಆ ರೀತಿ ಕೊಡುವಾಗ ಇಲ್ಲಿ ವ್ಯವಸ್ಥಿತವಾಗಿಲ್ಲ, ಆಡಳಿತ ವ್ಯವಸ್ಥೆಯನ್ನು ಸರಿಪಡಿಸದೇ ಹೋಗಿರುವ ಕಾರಣ, ಯಾವುದೋ ಒಂದು ತೊಡಕನ್ನು ಅಧಿಕಾರಿಗಳು ತಂದಿಟ್ಟಿರುವುದರಿಂದ ಕೋಟ್ಯಾಂತರ ರೂಪಾಯಿಗಳು ನಮ್ಮ ಕೈ ಬಿಟ್ಟು ಹೋಗತಕ್ಕ ಪರಿಸ್ಥಿತಿ ಇದೆ ಎಂದು ಕೇಳಿದ್ದೇನೆ. ಯಾವುದೋ ಫೆಡರೇಷನೋ. ಯಾವುದೋ ಸಂಸ್ಥೆ ಮಾಡಿ ಎಂದು ಹೇಳಿದ್ದಾರೆ ಆದರೆ ನಿಮ್ಮ ಅಧಿಕಾರಿಗಳು ಅದಕ್ಕೆ ಒಪ್ಪುತ್ತಿಲ್ಲ ಎನ್ನುವ ಮಾತನ್ನು ಕೇಳಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಈ ಸಭೆಗೆ ಸರಿಯಾದ ಮಾಹಿತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ಡೈರಿಯಲ್ಲಿ ಕೆಲಸ ಮಾಡತಕ್ಕ ನೌಕರರು ಯಾರಿದ್ದಾರೆ, ಅವರನ್ನು ಬಹಳ ತಾತ್ಸಾರ ಮನೋಭಾವನೆಯಿಂದ ನೋಡುತ್ತಿದ್ದಾರೆ ಯಾವುದೇ ಶಿಕ್ಷೆಯನ್ನು ಕೊಡುವುದಕ್ಕೆ ಮಾತ್ರ ಕೆಸಿಎಸ್‌ಆರ್ ರೂಲ್ಸ್‌ನ್ನು ಅಪ್ಲೈಮಾಡುತ್ತಾರೆ, ಬಾಕಿ ವ್ಯವಸ್ಥೆಯನ್ನು ಮಾಡಿಕೊಡಿ ಎಂದು ಕೇಳಿದಾಗ ನೀವು ಕೆಸಿಎಸ್‌ಆರ್ ರೂಲ್ಸ್ ಕೆಳಗೆ ಬರುವುದಿಲ್ಲ. ಅದು ನಿಮಗೆ ಒಳಪಡುವುದಿಲ್ಲವೆಂದು ಹೇಳುತ್ತಿದ್ದಾರೆ. But, for punishment and other purpose you apply the K.C.S R. That is the difficulty, you are facing. That is the problem You must make a definate thing whether they come under the K.C.S.R. or company rule. ಇಷ್ಟು ಡೈರಿ ಡೆವಲಪ್‌ಮೆಂಟ್‌ನ ವಿಚಾರವಾಯಿತು.

ಇನ್ನು ಸ್ಟೇಟ್ ಲೆಜಿಸ್ಲೇಚರ್ ಇಂಡಿಪೆಂಡೆಂಟ್ ಆಗಿರಬೇಕೆಂಬುದನ್ನು ತಾವು ಒಪ್ಪಿದ್ದೀರೆಂದು ಕಾಣುತ್ತದೆ. ಮತ್ತೆ ಶಾಸಕರಿಗೆ ಈ ಶಾಸನಸಭೆ ನಡೆಯುವಂಥಾ ಕಾಲದಲ್ಲಿ ನಾವು ಇರತಕ್ಕ ಲೆಜಿಸ್ಲೇಚರ್ ಹೋಂನಲ್ಲಿ ಸಾಕಷ್ಟು ಜನ ಸ್ಟೆನೋಗ್ರಾಫರ್ಸ್ ಮತ್ತು ಟೈಪಿಸ್ಟ್‌ಗಳು ಇಲ್ಲ. ಬರವಣಿಗೆಯಲ್ಲಿ ಮಾಡಬೇಕಾದ್ದು ಬಹಳಷ್ಟು ಇರುತ್ತದೆ. ಬರವಣಿಗೆ ಮಾಡುವುದಕ್ಕೆ ಕಾಲ ಇಲ್ಲದೇ ಇರುವುವುದರಿಂದ, ಸಾಕಷ್ಟು ಕೆಲಸವನ್ನು ಸದನದಲ್ಲಿ ಮಾಡುವುದಕ್ಕೆ ತೊಂದರೆಯಾಗುತ್ತದೆ. ಆದುದರಿಂದ ಕೂಡಲೇ ಅಲ್ಲಿ ಅವರ ಸೇವೆಯನ್ನು ನಾವು ಪಡೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಶಾಸಕರಿಗೆ ಅನುಕೂಲವಾಗಲಿ ಎಂದು ಲೈಬ್ರರಿ ಇದೆ. ಆದರೆ ಅದು ೪ ಬಿಲ್ಡಿಂಗ್‌ಗಳಲ್ಲಿ ಇದೆ. ಯಾವುದಾದರೂ ಒಂದು ಪುಸ್ತಕ ಬೇಕು ಎಂದರೆ ನಾವು ಎಲ್ಲಿಗೆ ಹೋಗಬೇಕು ಎಂಬುದೇ ಗೊತ್ತಾಗುವುದಿಲ್ಲ. ಆದುದರಿಂದ ನಿರ್ದಿಷ್ಟವಾಗಿ ವಿಧಾನ ಸೌಧದ ಯಾವುದಾದರೂ ಒಂದು ರೂಮಿನಲ್ಲಿಯೇ, ಒಂದೇ ಕಡೆ ಲೈಬ್ರರಿ ಇರುವಂತೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತೆ ಇನ್ನೊಂದು ರಿಸರ್ಚ್ ವಿಂಗ್ ಎಂದು ಅಲ್ಲಿ ಹೆಚ್ಚಿನ ಸ್ಟಾಫ್ ಕಡಿಮೆ ಇದ್ದಾರೆ. ಸದಸ್ಯರಿಗೆ ಏನಾದರೂ ಅಂಕಿ ಸಂಖ್ಯೆಗಳನ್ನು ಒದಗಿಸಿಕೊಡಬೇಕೆಂದು ಅಲ್ಲಿ ಹೆಚ್ಚಿನ ಸ್ಟಾಫ್ ಇಲ್ಲ ಆದುದರಿಂದ ಅಲ್ಲಿಗೆ ಹೆಚ್ಚಿನ ಸ್ಟಾಫ್‌ನ್ನು ಒದಗಿಸಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ, ಇನ್ನು ಆಡಳಿತದ ದೃಷ್ಟಿಯಿಂದ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದರೆ ನಮ್ಮಲ್ಲಿ ಕೆಲವು ತಾರತಮ್ಯಗಳು ಬಹಳ ಅನುಚಿತವಾಗಿ ನಡೆದುಕೊಂಡು ಬಂದಿದೆ. ಇಲ್ಲಿ ಒಬ್ಬ ಗುಮಾಸ್ತರಾಗಿ ಸೇರಿದವನು ವಿಧಾನ ಸೌಧದಲ್ಲಿ ಅವರು ಸೆಕ್ರೆಟರಿಯಾಗಬಹುದು, ಇಲ್ಲವೇ ಡೆಪ್ಯೂಟಿ ಸೆಕ್ರೆಟರಿಯಾಗಬಹುದು ಚೀಫ್ ಸೆಕ್ರೆಟರಿಯಾಗಿ ರಿಟೈರ್ಡ್ ಆಗಬಹುದು. ಆದರೆ ಅದೇ ಪದವಿ ಪಡೆದಿರತಕ್ಕ, ಎಂ.ಎ., ಬಿ.ಎಲ್. ಮಾಡಿರತಕ್ಕ ರಿಪೋರ್ಟರ್ಸ್‌ಗಳೇನಿದ್ದಾರೆ, ಅವರು ೩೦ ವರ್ಷಗಳ ಕಾಲ ಯಾವುದೇ ಪ್ರಮೋಷನ್ ಇಲ್ಲದೇ ಅದರಲ್ಲಿಯೇ ಸಾಯುತಕ್ಕ ಪರಿಸ್ಥಿತಿ ಇದೆ. ಇದೇ ರೀತಿ ಸ್ಟೆನೋಗ್ರಾಫರ್ಸ್‌ಗೂ ಆಗಿದೆ. ಆದುದರಿಂದ ಕ್ಲರ್ಕ್‌ಗಳಿಗೆ ಪ್ರಮೋಷನ್ ಕೊಡುವ ರೀತಿಯಲ್ಲಿ ಇವರಿಗೂ ಸಹ ರಿಟೈರ್ಡ್ ಆಗುವಂಥ ಸಮಯದಲ್ಲಿಯಾದರೂ ಅಧಿಕಾರಿಗಳಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾದದ್ದು ತಮ್ಮ ಕರ್ತವ್ಯವಾಗಿದೆ. ಆದುದರಿಂದ ಈ ರಿಪೋರ್ಟರ್ಸ್ ಮತ್ತು ಸ್ಟೆನೋಗ್ರಾಫರ್ಸ್‌ಗಳ ಪ್ರಮೋಷನ ಬಗ್ಗೆ ಸರ್ಕಾರದವರು ತೀವ್ರ ಗಮನವನ್ನು ಕೊಡಬೇಕು ಎಂದು ಸರ್ಕಾರದವರ ಗಮನ ಸೆಳೆಯ ಬಯಸುತ್ತಿದ್ದೇನೆ.

ಇನ್ನು ಅಡ್ಮಿನಿಸ್ಟ್ರೇಷನ್ ಅಫ್ ಜಸ್ಟೀಸ್. ಲಿಟಿಗೇಷನ್‌ಗೆ ಬಂದಾಗ, ಇದು ಸರಿಯಾಗಿ ಕೆಲಸ ಮಾಡುತ್ತಿಲ್ಲ ಇದಕ್ಕೆ ಕಾರಣವೇನೋ ಗೊತ್ತಾಗಲಿಲ್ಲ, ಲಿಟಿಗೇಷನ್‌ನಲ್ಲಿ ಎಷ್ಟು ಪೆಂಡಿಂಗ್ ಇದೆ ಎಂದು ಲೆಕ್ಕ ಹಾಕಿದಾಗ ೧೯೭೪ರ ತಮ್ಮ ವರದಿಯ ಪ್ರಕಾರವೇ ೧೪,೩೦೨ ರೂ. ರಿಟ್ಸ್‌ಗಳಿವೆ,ಆದರ ಮೇಲೆ ೨೯೮ ರಿಟ್ ಅಪೀಲ್ಸ್‌ಗಳು ಇವೆ. ೭೨ ಕಂಟೆಂಪ್ಟ್ ಆಫ್ ಕೇಸುಗಳು ಇವೆ, ಸರ್ಕಾರದ ಮೇಲೆ ಇಷ್ಟು ಮೊಕದ್ದಮೆಗಳು ಖಾಸಗಿಯವರದು ಇರಬೇಕಾಗಿದ್ದರೆ ಸರ್ಕಾರದ ಎಷ್ಟು ಹಣ ಇದಕ್ಕೆ ತರಬೇಕಾಗುತ್ತದೆ? ಇದರಿಂದ ಕಾಲ ಎಷ್ಟು ವ್ಯಯವಾಗುತ್ತದೆ? ಇಷ್ಟು ಲಿಟಿಗೇಷನ್ ಇರುವುದಕ್ಕೆ ಕಾರಣವೇನು? ಈ ಇಲಾಖೆಗಳಲ್ಲಿರತಕ್ಕಂಥವರು ಜವಾಬ್ದಾರಿಯುತವಾಗಿ ವರ್ತನೆ ಮಾಡದೇ ಇರುವುದರಿಂದ, ಸ್ವೇಚ್ಛೆಗೆ ಅನುಗುಣವಾಗಿ ಆಜ್ಞೆಗಳನ್ನು ಮಾಡುತ್ತಿರುವುದರಿಂದ, ಅದರ ಪರಿಣಾಮವಾಗಿ ಇಷ್ಟು ಅವ್ಯವಸ್ಥೆಯಾಗುತ್ತಿದೆ, ಈ ರೀತಿ ಆಜ್ಞೆಗಳನ್ನು ಮಾಡತಕ್ಕ ಕಾಲದಲ್ಲಿ ನಿಷ್ಪಕ್ಷಪಾತವಾಗಿ, ನಿರ್ದಿಷ್ಟವಾಗಿ ವ್ಯವಹಾರ ಮಾಡಿದರೆ ಇಷ್ಟೊಂದು ಸಮಸ್ಯೆಗಳು ಉದ್ಭವಿಸುತ್ತಿರಲಿಲ್ಲ, ಸರ್ಕಾರದ ಮೇಲೆ ಇಷ್ಟೊಂದು ರಿಟ್ ಮತ್ತು ರಿಟ್ ಅಪೀಲ್ಸ್‌ಗಳು ಬರುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಆದುದರಿಂದ ಈ ರೀತಿ ಆಜ್ಞೆಗಳನ್ನು ಮಾಡುವುದರಿಂದ ಸಾರ್ವಜನಿಕರಿಗೆ ಏನು ಅನಾನುಕೂಲವಾಗುತ್ತಿದೆ ಮತ್ತು ಸರ್ಕಾರಕ್ಕೆ ಖರ್ಚು ಬೀಳುತ್ತಿದೆ ಅದನ್ನು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಹಾಕುವುದರಿಂದ ಈ ರೀತಿಯ ಅವ್ಯವಸ್ಥೆಯಾಗುವುದನ್ನು ತಪ್ಪಿಸಬಹುದೆಂದು ಸೂಚನೆ ಕೊಡಬಯಸುತ್ತೇನೆ ಆಗ ಬಹುಶಃ ಸರ್ಕಾರದ ಮೇಲೆ ಬರತಕ್ಕ ಮೊಕದ್ದಮೆಗಳ ಸಂಖ್ಯೆಯೂ ಕಡಿಮೆಯಾಗಬಹುದು. ಇನ್ನು ಮುನ್ಸೀಫ್ ಕೋರ್ಟ್‌ಗಳಲ್ಲಿ ೨ ೧೭೨೦ ಕೇಸ್‌ಗಳು ಇದ್ದಾವೆ. ೪,೨೮೪ ಅಪೀಲ್ಸ್‌ಗಳು ಇದ್ದಾವೆ. ಇಷ್ಟು ಮೊಕದ್ದಮೆಗಳು ಇದರಲ್ಲಿ ಹೆಚ್ಚು ಬೆಳೆದುಕೊಂಡು ಹೋಗುವಂಥಾ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಇದಕ್ಕೆ ಅವರು ನಿರ್ದಿಷ್ಟವಾಗಿ, ನಿಷ್ಪಕ್ಷಪಾತವಾಗಿ, ಜವಾಬ್ದಾರಿಯುತವಾಗಿ ವರ್ತನೆ ಮಾಡದೇ ಇರುವುದೇ ಆಗಿದೆ. ಇದರಿಂದ ಸರ್ಕಾರಕ್ಕೂ ಸಹ ಸಾಕಷ್ಟು ಹಣ ವ್ಯಯ ಮಾಡಬೇಕಾದ ಪರಿಸ್ಥಿತಿ ಬಂದಿದೆ,

ಇನ್ನು ಡ್ರಾಫ್ಟಿಂಗ್ ವಿಂಗ್ ಬಗ್ಗೆ ಹೇಳುವುದಾದರೆ, ಇಲ್ಲಿ ಏನಾಗಿದೆ ಎಂದರೆ ರಾತ್ರೋ ರಾತ್ರಿ ಮಂತ್ರಿಗಳಿಗೆ ಒಂದು ಬಿಲ್ ಪಾಸ್ ಆಗಬೇಕಾಗಿದೆ ಎಂದರೆ, ಮೂರು ದಿವಸಗಳಲ್ಲಿ ಒಂದು ಬಿಲ್ಲನ್ನು ತಯಾರುಮಾಡಿ ಕೊಟ್ಟು ಬಿಡುತ್ತಾರೆ. ಅದನ್ನು ಈ ಸಭೆಯ ಮುಂದೆ ಮಂಡಿಸಿ ಮತ್ತೆ ಪುನ: ವಿತ್‌ಡ್ರಾ ಮಾಡಿ ಅದಕ್ಕೆ ಪುನಃ ಅಮೆಂಡ್‌ಮೆಂಟ್‌ಗಳನ್ನು ತಂದಿರತಕ್ಕ ಘಟನೆಗಳು ಸಾಕಷ್ಟು ಈ ಸಭೆಯಲ್ಲಿ ನಡೆದಿದೆ. ಅದೇನು ಹೊಸದಲ್ಲ, ಲ್ಯಾಂಡ್ ರಿಫಾರಂಸ್ ಅಂಥಾ ಮಸೂದೆಯನ್ನೇ ೩ ದಿವಸಗಳಲ್ಲಿ ತಯಾರು ಮಾಡಿದರು ಎಂದು ಕೇಳಿದ್ದೇನೆ. ಯಾವುದೇ ಒಂದು ಬಿಲ್ಲನ್ನು ತರುವುದಕ್ಕಿಂತ ಮುಂಚಿತವಾಗಿ ಅದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ತರಬೇಕು, ಅದರ ಬಗ್ಗೆ ನನ್ನ ಸಲಹೆ ಏನೆಂದರೆ, ಇದನ್ನು ಡ್ರಾಫ್ಟ್ ಮಾಡುವುದಕ್ಕಿಂತ ಮುಂಚಿತವಾಗಿ ಈ ಸದನದ ಸದಸ್ಯರಲ್ಲಿ ಯಾರು ಈ ಬಿಲ್‌ಗಳ ಬಗ್ಗೆ ಚೆನ್ನಾಗಿ ತಿಳಿದು ಕೊಂಡಿದ್ದಾರೋ, ಮತ್ತು ಇಷ್ಟಪಟ್ಟಿರುತ್ತಾರೋ ಅಂಥವರ ಒಂದು ಲೆಜಿಸ್ಲೇಚರ್ ಕಮಿಟಿಯನ್ನು ಮಾಡಿ ಅವರ ಸಹಾಯ ಮತ್ತು ಸಹಕಾರದೊಡನೆ ಯಾವುದೇ ಒಂದು ಬಿಲ್ಲನ್ನು ಡ್ರಾಫ್ಟ್ ಮಾಡತಕ್ಕ ವ್ಯವಸ್ಥೆ ಮಾಡಿದರೆ, ಈ ಒಂದು ಗೊಂದಲ ತಪ್ಪಬಹುದು. ಮತ್ತು ಕೊನೆಯದಾಗಿ ಅಧ್ಯಕ್ಷರೇ, ಬಾರ್ ಅಸೋಶಿಯೇಷನ್‌ಗೆ ಸರ್ಕಾರದವರು ಕೊಡತಕ್ಕ ಹಣವೇನಿದೆ ಇದು ಬಹಳ ಕಡಿಮೆ ಇದೆ. ಪ್ರೊಫೆಷನಲ್ ಟ್ಯಾಕ್ಸ್ ಏನು ತೆಗೆದುಕೊಳ್ಳುತ್ತೀರಿ, ಅದನ್ನು ಬಾರ್ ಅಸೋಶಿಯೇಷನ್‌ನವರಿಗೆ ಕೊಟ್ಟರೆ ಅಲ್ಲಿ ಸಾಕಷ್ಟು ಕಾರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಕೊನೆಯದಾಗಿ ಸರ್ಕಾರದ ದೃಷ್ಟಿಯಿಂದ ನಮ್ಮಗಳ ದೃಷ್ಟಿಯಿಂದ ಬಹಳ ಪ್ರಾಮುಖ್ಯವಾದ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ, ಅದನ್ನು ಹೇಳಿದರೆ ತಾವು ಕೂಡಲೇ ಆಜ್ಞೆ ಮಾಡಿ ಬಿಡುತ್ತೀರಿ; ಇವತ್ತು ಇದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟವಾಗತಕ್ಕ ಪರಿಸ್ಥಿತಿ ಇದೆ. ಅದು ಏನೆಂದರೆ ಶ್ರೀ ವೀರೇಂದ್ರ ಪಾಟೀಲರು ಮಂತ್ರಿಗಳಾಗಿದ್ದ ಕಾಲದಲ್ಲಿ ಎಂ.ಎ.ಡಿ ಆರ್ ಆ್ಯಕ್ಟ್ ಎಂದು ಮಾಡಿದರು ಅದರಲ್ಲಿ ರಿಟರ್ನ್ ಡಿಕ್ಲರೇಷನ್ ಕೊಡಬೇಕೆಂದು ಹೇಳಿದ್ದರು ಅದು ಹೈಕೋರ್ಟಿನಲ್ಲಿ ರದ್ದು ಆಯಿತು. ಸುಪ್ರಿಂ ಕೋರ್ಟಿನಲ್ಲೂ ಅದನ್ನು ವಿತ್‌ಹೆಲ್ಡ್ ಮಾಡಿದ್ದಾರೆ. ಅದರ ಪರಿಣಾಮವಾಗಿ ಏನು ಆಯಿತು ಎಂದರೆ ಒಟ್ಟು ೫,೩೭,೨೫೮ ಮೊಕದ್ದಮೆಗಳು ಇಡೀ ರಾಜ್ಯದಲ್ಲಿವೆ.

೫.೦೦ ಪಿ. ಎಂ.

ಶ್ರೀ ಹೆಚ್. ಗಂಗಾಧರನ್ .— ೫,೩೭,೨೫೮ ಮೊಕದ್ದಮೆಗಳು. ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಅದಾದದ್ದು ೧೯೬೭ನೇ ಇಸವಿಯಲ್ಲಿ. ಅದನ್ನು ನೀವು ಈಗ ತೆಗೆದುಕೊಳ್ಳಬೇಕಾಗಿದೆ. ಒಂದೊಂದಕ್ಕೆ ವಾದಿ ಪ್ರತಿವಾದಿ ಇಬ್ಬರಿಗೂ ನೋಟೀಸ್ ಬರೆಯಬೇಕು. ಹಾಗೆ ಮಾಡಿದರೆ ೧೨ ಲಕ್ಷ ನೋಟೀಸ್ ಬರೆಯಬೇಕಾಗುತ್ತದೆ. ೧೦ ವರ್ಷದಲ್ಲಿ ಎಷ್ಟೋ ಜನ ಕಕ್ಷಿದಾರರುಗಳು ಸತ್ತುಹೋಗಿದ್ದಾರೆ. ಲೀಗಲ್ ಹೆಡ್ಸ್ ೧೦ ಜನ ಬಂದರೆ ನೀವು ೨೦ ಲಕ್ಷ ನೋಟೀಸ್‌ಗಳನ್ನು ಬರೆಯಬೇಕಾಗುತ್ತದೆ. ಇದಕ್ಕೆ ಎಷ್ಟು ಜನ ಬೇಕಾಗಬಹುದು ಎಂಬುದನ್ನು ಗಮನಿಸಬೇಕಾಗುತ್ತದೆ. ಈ ಹೊರೆಯನ್ನು ಕಡಿಮೆ ಮಾಡಬೇಕಾದರೆ ಏನಾದರೂ ಉಪಾಯ ಮಾಡಲೇಬೇಕು. ಒಂದು ಮೂಲ ಅಂಶ ಎಂದರೆ ಡೆಟ್ಟಾರ್ಸ್ ರಿಲೀಫ್ ಆಕ್ಟ್ ಅನ್ವಯದಲ್ಲಿ ಮೂರು ನಾಲ್ಕು ಲಕ್ಷ ಮೊಕದಮೆಗಳು ತೀರ್ಮಾನವಾಗಿಹೋಗಿದೆ. ಕಾನೂನು ತಿದ್ದುಪಡಿ ಮಾಡದೇಹೋದರೆ ಇಷ್ಟಕ್ಕೂ ನೋಟಿಸ್ ಕೊಡಬೇಕಾದದ್ದು ಅನಿವಾರ್ಯವಾಗುತ್ತದೆ, ಹೊಸದಾಗಿ ಆಜ್ಞೆಯನ್ನು ಹೊರಡಿಸಿ ಮೊಕದ್ದಮೆ ಯಾವುದು ತೀರ್ಮಾನ ಆಗಿಲ್ಲವೋ ಅಂಥವರು ಒಂದು ರೂಪಾಯಿ ಸ್ಟಾಂಪ್ ಹಚ್ಚಿ ಅರ್ಜಿಯನ್ನು ಕೋರ್ಟಿಗೆ ಕೊಟ್ಟರೆ ಅಂಥಾ ಮೊಕದ್ದಮೆಗಳನ್ನು ಮಾತ್ರ ತೆಗೆದುಕೊಳ್ಳುವಂತೆ ಮಾಡಿದರೆ ಕೋರ್ಟಿನ ಮೇಲಿರುವ ಹೊರೆ ಕಡಿಮೆಯಾದಂತಾಗುತ್ತದೆ. ಲಕ್ಷಾಂತರ ರೂಪಾಯಿ ಉಳಿಸುವುದಕ್ಕೆ ಇದರಿಂದ ಅವಕಾಶವಾಗುತ್ತದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಷಫಿ ಅಹಮದ್ (ತುಮಕೂರು).—ಮಾನ್ಯ ಅಧ್ಯಕ್ಷರೇ, ಪಶುಸಂಗೋಪನಾ ಖಾತೆಗೆ ೧.೯ ಕೋಟಿ ರೂಪಾಯಿಯನ್ನು ಇಟ್ಟಿರುವುದಕ್ಕಾಗಿ ಮಾನ್ಯ ಮಂತ್ರಿಗಳಿಗೆ ಮೊಟ್ಟಮೊದಲನೆಯದಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೂ ಈಗ ಇಟ್ಟಿರುವ ಹಣ ಬಹಳ ಕಡಿಮೆ ಎಂದು ಹೇಳಬೇಕಾಗಿದೆ ಏಕೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಶೇಕಡ ೭೫ ರಷ್ಟು ಜನರೆಲ್ಲಾ ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡುತ್ತಿದ್ದಾರೆ ಇವರ ಮುಖ್ಯ ಕಸುಬು ಹಸುಗಳನ್ನು ಸಾಕಿ ಜೀವನ ನಡೆಸುವುದು. ಈ ಜನರಿಗೆ

ಅನುಕೂಲವಾಗಬೇಕಾದರೆ ಈ ಪಶುಸಂಗೋಪನಾ ಇಲಾಖೆಯನ್ನು ಮಾಡ್ರನೈಸ್ ಮಾಡಿ ಅಭಿವೃದ್ಧಿ ಮಾಡಬೇಕು, ಆ ರೀತಿ ಮಾಡಿದರೆ ಮಾತ್ರ ರೈತರಿಗೆ ಅನುಕೂಲವಾಗುತ್ತದೆ. ಎಸ್. ಎಫ್. ಡಿ. ಎ. ಮತ್ತು ಡಿ. ಪಿ. ಎ. ಸಿ.

(ಅಧ್ಯಕ್ಷ ಪಿ. ವೆಂಕಟರಮಣ ಅವರು ಪೀಠವನ್ನು ಅಲಂಕರಿಸಿದರು)

ಪ್ರೋಗ್ರಾಂನಲ್ಲಿ ಬಹಳ ತಾಲ್ಲೂಕುಗಳನ್ನು ಸೇರಿಸಿದ್ದೀರಿ. ಆದರೆ ತಾವು ಸೇರಿಸಿರುವ ತಾಲ್ಲೂಕುಗಳು ಸಾಕಾಗಿಲ್ಲ. ಇನ್ನೂ ಹೆಚ್ಚು ಎಲ್ಲಾ ತಾಲ್ಲೂಕುಗಳನ್ನೂ ಈ ಕಾರ್ಯಕ್ರಮದಲ್ಲಿ ಸೇರಿಸಿದರೆ ಒಳ್ಳೆಯದು. ತುಮಕೂರು ಜಿಲ್ಲೆಯಲ್ಲಿ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರು ಚಿಲ್ಲಿಂಗ್ ಪ್ಲಾಂಟ್ ಸ್ಥಾಪನೆ ಮಾಡಿ ಅದರಿಂದ ಎರಡು ಲಕ್ಷ ಲೀಟರ್ ಹಾಲು ಉತ್ಪಾದನೆ ಮಾಡಬಹುದೆಂಬ ನಿರೀಕ್ಷೆಯನ್ನು ಹೊಂದಿದ್ದಾರೆ. ಈಗ ಅಲ್ಲಿ ರೂಟ್ಸ್ ಏನು ಕೊಟ್ಟಿದ್ದಾರೆ ಅದರಿಂದ ರೈತರಿಗೆ ಅನುಕೂಲವಿಲ್ಲ. ಆದ್ದರಿಂದ ರೂಟ್ಸ್ ಜಾಸ್ತಿ ಮಾಡಿ ರೈತರಿಗೆ ಅನುಕೂಲ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮತ್ತು ಈಗ ನಮ್ಮ ಜಿಲ್ಲೆಯಲ್ಲಿ ಚಿಲ್ಲಿಂಗ್ ಪ್ಲಾಟ್ ಕೆಪಾಸಿಟಿ ಜಾಸ್ತಿ ಮಾಡಿದರೆ ರೈತರಿಗೆ ಅನುಕೂಲ ವಾಗುತ್ತದೆ. ರಾಜ್ಯದಲ್ಲಿ ಒಟ್ಟು ೧೨೧೪ ವೆಟರ್ನರಿ ಇನ್‌ಸ್ಟಿಟ್ಯೂಷನ್‌ಗಳಿದ್ದು, ೩೩ ವೆಟರ್ನರಿ ಹಾಸ್ಪಿಟಲ್‌ಗಳು, ೪೫೩ ವೆಟರ್ನರಿ ಡಿಸ್ಪೆನ್ಸರಿಗಳು, ೬೭೭ ರೂರಲ್ ವೆಟರ್ನರಿ ಏಡ್ ಸೆಂಟರ್ಸ್ ಡಿಸ್ಪೆನ್ಸರಿ ಗಳು, ೫೬ ವೆಟರ್ನರಿ ಏಡ್ ಸೆಂಟರ್ಸ್ ಇದೆ ಎಂದು ವರದಿಯಲ್ಲಿ ಕೊಟ್ಟಿದ್ದಾರೆ. ಪಶುವೈದ್ಯಶಾಲೆ ಗಳನ್ನು ಸ್ಥಾಪನೆ ಮಾಡಿದಾಗ ಅಲ್ಲಿ ಏನು ಸಲಕರಣೆಗಳನ್ನು ಕೊಟ್ಟಿದ್ದರೋ ಅದು ಈಗ ನಿರುಪಯುಕ್ತವಾಗಿವೆ. ಮತ್ತೆ ಕೌ ಬ್ರೀಡಿಂಗ್ ಸೆಂಟರ್ಸ್‌ಗೆ ವೀರ್ಯ ಹೋಗುವುದರೊಳಗಾಗಿ ಅದು ನಾಶವಾಗುತ್ತಿದ್ದು ಈ ಯೋಜನೆಯ ಮಹತ್ವ ಕಳೆದು ಕೊಳ್ಳುತ್ತಿದೆ. ಆದ್ದರಿಂದ ಅಲ್ಲಿ ರೆಫ್ರಿಜಿರೇಟರ್ ಅಥವಾ ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಮಾಡಬೇಕು. ವೀರ್ಯವನ್ನು ರಕ್ಷಣೆ ಮಾಡಿ ಕೌ ಬ್ರೀಡಿಂಗ್ ಸೆಂಟರನ್ನು ಮಾಡ್ರ-ನೈಸ್ ಮಾಡುವ ಕೆಲಸ ಮಾಡಬೇಕು. ಪಂಜಾಬಿನಲ್ಲಿ ಹಾಲಿನ ಪುಡಿಯನ್ನು ಮಾಡಿ ಹೇಗೆ ಉಪಯೋಗ ಮಾಡುತ್ತಿದ್ದಾರೋ ಅದೇ ರೀತಿ ನಮ್ಮಲ್ಲೂ ಹಾಲಿನ ಪುಡಿಯನ್ನು ಮಾಡುವ ವ್ಯವಸ್ಥೆ ಮಾಡಬೇಕು.

ಇನ್ನು ಕಾನೂನು ಇಲಾಖೆ ಬಗ್ಗೆ ಹೇಳುವುದಾದರೆ ಹೈಕೋರ್ಟಿನಲ್ಲಿ ಅಲ್ಪಸಂಖ್ಯಾತರೊಬ್ಬರಿಗೆ ನ್ಯಾಯಾಧೀಶರ ಸ್ಥಾನ ಕೊಡಬೇಕೆಂದು ನಾಲ್ಕು ವರ್ಷದಿಂದಲೂ ಅವಕಾಶ ಕೊಟ್ಟಿದ್ದರೂ ಮಾಡಿಲ್ಲ. ಆದ್ದರಿಂದ ಈ ಸಲವಾದರೂ ಅಲ್ಪಸಂಖ್ಯಾತ ಕೋಮಿನವರಿಗೆ ನ್ಯಾಯಾಧೀಶರ ಸ್ಥಾನವನ್ನು ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಸತಿ ಮತ್ತು ನಿವೇಶನಗಳ ಬಗ್ಗೆ ಹೇಳಬೇಕೆಂದರೆ ನಿವೇಶನಗಳಿಲ್ಲದೆ ಮನೆ ಕಟ್ಟುವುದಕ್ಕೆ ತೊಂದರೆಯಾಗಿದೆ ಮನೆ ಇಲ್ಲದೇ ಇರುವವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಸಾಕಷ್ಟು ನಿವೇಶನ ಸಿಗುತ್ತಿಲ್ಲ. ಅರ್ಬನ್ ಏರಿಯಾದಲ್ಲಿ ಲ್ಯಾಂಡ್ ಆಕ್ವಿಸಿಷನ್ ಪ್ರೋಸೆಸ್ ಪ್ರಾರಂಭ ಮಾಡಿದರೂ ಕೂಡ ಬಂಡವಾಳಶಾಹಿಗಳು ತೊಂದರೆ ಕೊಟ್ಟು ಅದಕ್ಕೆ ಅಡಚಣೆ ಒಡ್ಡುತ್ತಾರೆ. ಆದ್ದರಿಂದ ಎಮರ್ಜನ್ಸಿ ಅಕ್ವಿಸಿಷನ್ ಕಾರ್ಯವನ್ನು ಕೈಗೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು .— ಇನ್ನೂ ೫ ಜನ ಮಾತನಾಡುವವರಿದ್ದಾರೆ. ಆ ಕಡೆ ಮತ್ತು ಈ ಕಡೆಯಿಂದ ತೆಗೆದುಕೊಂಡರೆ......

(ಹಲವಾರು ಸದಸ್ಯರು ತಮಗೆ ಅವಕಾಶ ಕೊಡಬೇಕೆಂದು ಕೇಳಿಕೊಂಡರು)

ಅಧ್ಯಕ್ಷರು .— ಎಲ್ಲರೂ ಮಾತನಾಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಈಗಾಗಲೇ ಒಂದು ಮಸೂದೆ ಬಾಕಿ ಇದೆ.

ಶ್ರೀ ರಾಮಭಟ್ .— ನನಗೆ ೫ ನಿಮಿಷ ಕೊಟ್ಟರೆ ಸಾಕು.

ಅಧ್ಯಕ್ಷರು .— ಕೆಲವು ಮುಖ್ಯ ಮುಖ್ಯವಾದ ಬೇಡಿಕೆಗಳು ಬಂದಾಗ ಎಲ್ಲರೂ ಮಾತನಾಡಬೇಕು ಎಂದು ಹೇಳುತ್ತಾರೆ. ಆಗ ಅವಕಾಶ ಸಿಗುವುದಿಲ್ಲ ಎಂದು ಪಶ್ಚಾತ್ತಾಪ ಪಡುತ್ತಾರೆ. ಆದ್ದರಿಂದ ಈಗ ಸ್ವಲ್ಪ ಜನರು ಮಾತನಾಡುವುದನ್ನು ಕಡಿಮೆ ಮಾಡಿದರೆ ಮುಂದೆ ಭಾಗವಹಿಸುವುದಕ್ಕೆ ಅವಕಾಶ ವಾಗುತ್ತದೆ.

ಶ್ರೀಮತಿ ಪ್ರಮಿಳ .— ನಾನು ಮಾತನಾಡುತ್ತೇನೆ.

ಅಧ್ಯಕ್ಷರು .—೫ ನಿಮಿಷದಲ್ಲಿ ಮುಗಿಸುತ್ತೀರಾ?

ಶ್ರೀಮತಿ ಪ್ರಮಿಳ .— ನನ್ನ ಹೆಸರನ್ನು ಕೊಟ್ಟಿದೆ. ನಾವು ವಕೀಲರು. ನಾವೇ ನ್ಯಾಯಾಂಗ ಇಲಾಖೆ ಬಗ್ಗೆ ಮಾತನಾಡದಿದ್ದರೆ ಹೇಗೆ? ಅದರ ಕಷ್ಟಸುಖವನ್ನು ಅರಿತುಕೊಂಡಿರುವವರು ನಾವು.

ಶ್ರೀ ಬಿ. ಬಸವಲಿಂಗಪ್ಪ. - ನ್ಯಾಯಾಂಗದ ವಿಷಯವಾಗಿ ಕೆಲವು ಲಾಯರ್‌ಗಳು ಮಾತನಾಡಬೇಕಾಗುತ್ತದೆ. ಇದುವರೆಗೆ ಎಲ್ಲರೂ ಪಶುಸಂಗೋಪನೆ ಬಗ್ಗೆ ಮಾತನಾಡಿದ್ದಾರೆ. ಕೋರ್ಟು ವ್ಯವಹಾರಗಳ ಬಗ್ಗೆ ಯಾರೂ ಮಾತನಾಡಿಲ್ಲ.

ಶ್ರೀ ವೈ. ರಾಮಕೃಷ್ಣ .— ಮಾತನಾಡಿದ್ದಾರಲ್ಲ?

ಶ್ರೀ ಬಿ. ಬಸವಲಿಂಗಪ್ಪ .—ನ್ಯಾಯಾಂಗದ ಬಗ್ಗೆ ಒಬ್ಬರೋ ಇಬ್ಬರೋ ಮಾತನಾಡಲಿ. ಒಂದು ಗಂಟೆ ಹೆಚ್ಚಿಗೆ ಬೇಕಾದರೆ ಕುಳಿತುಕೊಳ್ಳೋಣ. ಅದರಿಂದ ಏನೂ ತೊಂದರೆಯಾಗುವುದಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಅಧ್ಯಕ್ಷರು ಒಂದಿಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ಚಂದ್ರಶೇಖರ್ .— ಶಾಸಕಾಂಗಕ್ಕೆ ಸಂಬಂಧಪಟ್ಟಿದ್ದೂ ಇದೆ.

ಶ್ರೀ ರಾಮಭಟ್ .— ನಾನು ಶಾಸಕಾಂಗಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡುತ್ತೇನೆಂದು ತಮಗೆ ತಿಳಿಸಿದ್ದೇನೆ.

ಅಧ್ಯಕ್ಷರು .— ೧೦ ನಿಮಿಷದಲ್ಲಿ ಮುಗಿಸುತ್ತೀರಾ?

ಅಧ್ಯಕ್ಷರು. —ಈಗ ಶ್ರೀಮತಿ ಪ್ರಮಿಳಾ ಅವರು ಮಾತನಾಡಬಹುದು.

† ಶ್ರೀಮತಿ ಎಸ್. ಪ್ರಮಿಳಾ (ಚಾಮರಾಜಪೇಟೆ).-ಮಾನ್ಯ ಅಧ್ಯಕ್ಷರೇ, Administration of Justice ಬೇಡಿಕೆ ಮೇಲೆ ನಾನು ಮಾತನಾಡುವುದಕ್ಕೆ ಮುನ್ನ ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಇಂದು ಬೆಳಿಗ್ಗೆ ೧೧-೪೦ಕ್ಕೆ ಸರಿಯಾಗಿ ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀ ನಾರಾಯಣಪೈ ಅವರು ದಿವಂಗತರಾಗಿದ್ದಾರೆ. ಶ್ರೀ ನಾರಾಯಣಪೈ ಅವರು ನೀಡಿದ ವೇತನ ವರದಿಯಿಂದ ನಮ್ಮ ರಾಜ್ಯದ ಸರ್ಕಾರಿ ನೌಕರರಿಗೆ ಬಹಳ ಅನುಕೂಲವಾಗಿದೆ. ನ್ಯಾಯ ಇಲಾಖೆಯ ಮೇಲೆ ಬೇಡಿಕೆಯ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾಗುತ್ತಿರುವ ದಿನದಂದೇ ಶ್ರೀಯುತರು ನಿಧನರಾಗಿರುವುದು ಅತ್ಯಂತ ದುಃಖದ ಸಂಗತಿಯಾಗಿದೆ.

ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಕೃಷ್ಣ ಅವರು ನ್ಯಾಯ ಖಾತೆಯ ಸಚಿವರಾಗಿ ಬಂದಮೇಲೆ ಕರ್ನಾಟಕ ರಾಜ್ಯದಲ್ಲಿ ಹೆಚ್ಚು ನ್ಯಾಯಾಲಯಗಳನ್ನು ತೆರೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ನನಗೆ ಬಹಳ ಸಂತೋಷವಾಗುತ್ತಿದೆ. ತರೀಕೆರೆ, ಬೈಲಹೊಂಗಲ ಮತ್ತು ಅಡಗಲಿಯಲ್ಲಿ ನ್ಯಾಯಾಲಯಗಳನ್ನು ತೆರೆದಿದ್ದಾರೆ ಮತ್ತು ಐದು ಕಡೆ ವಿಶೇಷ ನ್ಯಾಯಾಲಯಗಳನ್ನು ತೆರೆಯುವುದಕ್ಕೂ ವ್ಯವಸ್ಥೆ ಮಾಡಿದ್ದಾರೆ. ಅಲ್ಲದೆ, ಜ್ಯುಡಿಷಿಯಲ್ ಆಫೀಸರ್ಸ್ ಕ್ವಾರ್ಟರ್ಸ್‌ಗೆ ಹೆಚ್ಚು ಹಣವನ್ನು ಒದಗಿಸಿದ್ದಾರೆ. ಆದರೆ ಈ ರೀತಿ ಮಾಡುವಾಗ ವಿಜಾಪುರವನ್ನು ಮರೆತ್ತಿದ್ದಾರೆಂದು ನಾನು ಅಂದು ಕೊಂಡಿದ್ದೇನೆ. ೧೯೬೭ನೇ ಇಸವಿಯಲ್ಲಿ ಅಲ್ಲಿ ಜಿಲ್ಲಾ ನ್ಯಾಯಾಲಯವನ್ನು ಕಟ್ಟುವುದಕ್ಕಾಗಿ ಇಪ್ಪತ್ತೇಳು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿತ್ತು. ಪ್ರತಿ ವರ್ಷವೂ ಅದಕ್ಕಾಗಿ ಆಯವ್ಯಯದಲ್ಲಿ ಸೇರಿಸಿಕೊಂಡು ಬಂದರೂ, ಹಣವಿಲ್ಲವೆಂಬ ಕಾರಣದಿಂದಾಗಿ ಕಳೆದ ಹದಿಮೂರು ವರ್ಷಗಳಿಂದಲೂ ಅದನ್ನು ತೆಗೆದುಕೊಂಡಿಲ್ಲ ಇದರ ಪರಿಣಾಮವಾಗಿ ಆಗ ಮಾಡಿದ್ದ ಅಂದಾಜಿಗೆ ಇಂದು ಹತ್ತುಪಟ್ಟು ಹೆಚ್ಚು ವೆಚ್ಚ ಮಾಡಬೇಕಾಗಿ ಬಂದಿದೆ. ಆದುದರಿಂದ, ಈ ವರ್ಷವಾದರೂ ತಕ್ಷಣ ಅದನ್ನು ಕೈಗೆತ್ತು ಕೊಂಡು ಕಾರ್ಯಗತ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ

ಇದು ೧೯೮೦ನೇ ಇಸವಿ. ಇದು ನಮ್ಮ ಶ್ರೇಷ್ಠ ನ್ಯಾಯಾಲಯದ ಶತಮಾನೋತ್ಸವ ವರ್ಷ. ಇಂದಿಗೆ ನೂರು ವರ್ಷಗಳಾಯಿತು ಆ ಕಟ್ಟಡವನ್ನು ಕಟ್ಟಿ. ಶತಮಾನೋತ್ಸವಕ್ಕಾಗಿ ನಮ್ಮ ಘನ ಸರ್ಕಾರದವರು ಐದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಈ ಸಂದರ್ಭದಲ್ಲಿ ಪ್ರಸಿದ್ಧ ವಕೀಲರು ಮತ್ತು ಜ್ಯುಡಿಷಿಯಲ್ ಆಫೀಸರ್ಸ್‌ಗಳನ್ನು ಕರೆಸಿ, ಸಮ್ಮೇಳನ ನಡೆಸಿ, ಕರ್ನಾಟಕದ ಘನತೆಯನ್ನು ಎತ್ತಿಹಿಡಿಯಬೇಕೆಂದು ಹೇಳುತ್ತೇನೆ. Women Lawyers, Federationನವರು

ಸಮ್ಮೇಳನ ಮಾಡಲಿದ್ದಾರೆ. ಅವರು ಮಾನ್ಯ ಸಚಿವರ ಹತ್ತಿರ ಕೂಡ ಬಂದಿದ್ದಾರೆ. ಅವರಿಗೆ ಗ್ರ್ಯಾಂಟನ್ನು ಕೊಡುವುದರ ಮೂಲಕ ಅನುಕೂಲ ಮಾಡಿಕೊಟ್ಟು ಸಮ್ಮೇಳನವು ಯಶಸ್ವಿಯಾಗಿ ನಡೆಯಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಸಾಮಾನ್ಯವಾಗಿ ನ್ಯಾಯ ಇಲಾಖೆ ಬೇಡಿಕೆ ಮೇಲೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ಒಂದು ವಿಧವಾದ ಘರ್ಷಣೆ ಮತ್ತು ಕಾವುಗಳಿಗೆ ಅವಕಾಶವಿರುತ್ತಿತ್ತು. ಆ ಒಂದು ವಾತಾವರಣ ಮಾನ್ಯ ರಾಮಕೃಷ್ಣ ಅವರು ಕಾನೂನು ಸಚಿವರಾಗಿ ಬಂದಮೇಲೆ ತಿಳಿಯಾಗಿ, ಕಾರ್ಯಾಂಗ ಮತ್ತು ನ್ಯಾಯಾಂಗ ಇಲಾಖೆಗಳಲ್ಲಿ ಸೌಹಾರ್ದತೆ ಏರ್ಪಟ್ಟಿದೆ. ಆದಕ್ಕಾಗಿ ನಾವೆಲ್ಲರೂ ಕೂಡ ವಕೀಲರ ಪರವಾಗಿ ಚಿರಋಣಿಗಳಾಗಿದ್ದೇವೆ. ನಾನು ಮಾನ್ಯ ಸಚಿವರನ್ನು ಹೊಗಳುತ್ತಿದ್ದೇನೆ ಎಂದು ಯಾರೂ ಭಾವಿಸಬಾರದು. Independence of the Judiciary is supreme. ಎಲ್ಲಿಯವರೆಗೆ ನ್ಯಾಯಾಂಗ ಸ್ವತಂತ್ರವಾಗಿರುವುದಿಲ್ಲ ಅಲ್ಲಿಯವರೆಗೆ Administration of justice ಸುಗಮವಾಗುವುದಕ್ಕೆ ಸಾಧ್ಯವಿರುವುದಿಲ್ಲ. ಆದುದರಿಂದ, ತಮ್ಮ ಕಾಲದಲ್ಲಾದರೂ ತಾವು independence of judiciary ಎತ್ತಿಹಿಡಿಯುವುದಕ್ಕೆ ಸಾಧ್ಯವಾದಷ್ಟು ಪ್ರಯತ್ನಿಸಬೇಕೆಂದು ಹೇಳುತ್ತೇನೆ. ಕಾರ್ಯಾಂಗ ಮತ್ತು ನ್ಯಾಯಾಂಗ ಎರಡೂ ಸ್ವತಂತ್ರ ಅಂಗಗಳೇ. ಆದರೆ, ನ್ಯಾಯಾಂಗ ಖಾತೆಗೆ ಎಷ್ಟು ಹಣ ನೀಡಬೇಕು ಮುಂತಾದ ವಿಚಾರಗಳಲ್ಲಿ ಕಾರ್ಯಾಲಯದ ಮಂಜೂರಾತಿ ಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ತಮ್ಮ ಇಲಾಖೆಯವರು, ಇದೇಕೆ ಏತಕ್ಕೆ ? ಇದು ಹೇಗೆ ? ಎನ್ನುವ ಪ್ರಶ್ನೆಯನ್ನು ಮಾತ್ರ ಹಾಕದ ಹಾಗೆ ನೋಡಿಕೊಳ್ಳಿ. ನ್ಯಾಯಾಲಯದ ಅವಶ್ಯಕತೆ ಏನು ನ್ಯಾಯಾಲಯಕ್ಕೆ ಎಷ್ಟು ಸಿಬ್ಬಂದಿ ಬೇಕಾಗುತ್ತದೆ, ನ್ಯಾಯಾಲಯಕ್ಕೆ ಎಷ್ಟು ಹಣದ ಅವಶ್ಯಕತೆ ಇದೆ ಎನ್ನುವುದನ್ನೆಲ್ಲ ನ್ಯಾಯಾಂಗದವರು ತೀರ್ಮಾನ ಮಾಡಿರುತ್ತಾರೆ ಮತ್ತು ಅವರಿಗೆ ಆ ವಿಷಯಗಳೆಲ್ಲ ಗೊತ್ತಿರುತ್ತದೆ. ಆದುದರಿಂದ, ತಮ್ಮ ಇಲಾಖೆಯವರು ಈ ಬಗ್ಗೆ ಚಕಾರ ಎತ್ತಕೂಡದು.

ಈಗಿರುವ ಶ್ರೇಷ್ಠ ನ್ಯಾಯಾಲಯದ ಹಿಂಭಾಗದಲ್ಲಿರುವ ಖಾಲಿ ಜಾಗದಲ್ಲಿ ಹೊಸ ಕಟ್ಟಡವನ್ನು ಕಟ್ಟಲು ಅಸ್ತಿಭಾರ ಶಿಲೆಯನ್ನು ಹಾಕಲಾಗಿದೆ. ಆದರೆ, ಅಲ್ಲಿ ಕಟ್ಟಡ ಕಟ್ಟುವುದರಿಂದ ಈಗಿರುವ ಶ್ರೇಷ್ಠ ನ್ಯಾಯಾಲಯದ ಸೌಂದರ್ಯ ಹೋಗುತ್ತದೆ. ಕಬ್ಬನ್‌ಪಾರ್ಕಿನ ಸೌಂದರ್ಯ ಹೋಗುತ್ತದೆ ಮತ್ತು ವಿಧಾನಸೌಧದ ಸೌಂದರ್ಯವೂ ಹೋಗುತ್ತದೆ ಎಂದು ಕಾರಣ ಹೇಳಲಾಗುತ್ತಿದೆ. ಇದು ಸರಿಯಾದ ಕಾರಣವಲ್ಲ. ಏಕೆಂದರೆ ವಿಧಾನಸೌಧದ ಎದುರುಗಡೆ ಜೀವವಿಮಾ ಸಂಸ್ಥೆಯವರು ಕಟ್ಟಡ ಕಟ್ಟಿದ್ದು ಅದರಿಂದ ವಿಧಾನಸೌಧದ ಸೌಂದರ್ಯ ಹೋಗಿಲ್ಲವೆ ? ಶ್ರೇಷ್ಠ ನ್ಯಾಯಾಲಯದ ಹಿಂಭಾಗದಲ್ಲಿ ಕಟ್ಟಿದ್ದರೆ ಮಾತ್ರ ಸೌಂದರ್ಯಕ್ಕೆ ಧಕ್ಕೆ ಬರುತ್ತದೆಯೆ ? ಆದುದರಿಂದ, ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡು ಅಲ್ಲಿ ಕಟ್ಟಡ ಕಟ್ಟಿಸಬೇಕೆಂದು ಹೇಳುತ್ತೇನೆ. Section 9 and 11 of the CRPC ಪ್ರಕಾರ ಸೆಷನ್ ಕೋರ್ಟ್‌ನ ನ್ಯಾಯಾಧೀಶರು ರಜಾ ಹೋದರೆ ಅವರ ಕಾರ್ಯಕಲಾಪಗಳನ್ನು ಅಡಿಷನಲ್ ಜಡ್ಜ್ ಅವರು ನಿರ್ವಹಿಸಲು ನೋಟಿಫಿಕೇಷನ್ ಮಾಡುವ ಮುಖಾಂತರ ಅವಕಾಶ ಮಾಡಿಕೊಡಲಾಗಿದೆ. ಹಾಗೆಯೇ, ಒಂದು ತಾಲ್ಲೂಕಿನ ಮ್ಯಾಜಿಸ್ಟ್ರೇಟ್ ಅವರು ರಜಾ ಹೋದರೆ ಪಕ್ಕದ ತಾಲ್ಲೂಕಿನ ಮ್ಯಾಜಿಸ್ಟ್ರೇಟ್ ಅವರು ಇನ್‌ಚಾರ್ಜ್ ಆಗಿರುವುದಕ್ಕೆ ಅವಕಾಶವಿದೆ. ಆದರೆ, ಅವರಿಗೆ judicial powers ಕೊಟ್ಟಿಲ್ಲ administrative powers ಮಾತ್ರ ಕೊಡಲಾಗಿದೆ. ಇದರಿಂದಾಗಿ ಯಾರಾದರೂ ಬೇಲ್ ತೆಗೆದುಕೊಳ್ಳಬೇಕಾದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ, ಇನ್‌ಚಾರ್ಜ್ ಮ್ಯಾಜಿಸ್ಟ್ರೇಟ್‌ರಿಗೂ judicial powers ಕೊಡುವ ಹಾಗೆ ಕಾನೂನನ್ನು ತಿದ್ದುಪಡಿ ಮಾಡಿದರೆ ನ್ಯಾಯ ವಿತರಣೆ ಬಹಳ ಸುಲಭವಾಗುತ್ತದೆ ಮತ್ತು ಎಲ್ಲರಿಗೂ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಜಿ. ಕೆ ತೆಕ್ಕೆಡ್.—ಸಾಮಾನ್ಯವಾಗಿ ೧೨ ಗಂಟೆಗೆ ಮ್ಯಾಜಿಸ್ಟ್ರೇಟರುಗಳು ಮನೆಗೆ ಹೋಗಿ ಬಿಡುತ್ತಾರೆ. ಒಂದು ದಿವಸ ಪೂರ್ತಿ ಕೆಲಸ ಮಾಡಿದ ಮ್ಯಾಜಿಸ್ಟ್ರೇಟರುಗಳು ಇದ್ದರೆ, ದಯವಿಟ್ಟು ಹೇಳುತ್ತೀರಾ ?

ಶ್ರೀ ಪಿ. ರಾಮದೇವ್.—ಹೆಂಗಸರು ಮಾತನಾಡುವಾಗ ಮಾನ್ಯ ಸದಸ್ಯರೇತಕ್ಕೆ ಅಡ್ಡ ಬರುತ್ತಾರೆ?

ಶ್ರೀಮತಿ ಎಸ್. ಪ್ರಮಿಳಾ.—ರಾತ್ರಿ ಹೊತ್ತು ವೇಳೆ ಮೀರಿದ ಮೇಲೆ ಹೆಣ್ಣು ಮಕ್ಕಳನ್ನು ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಬಾರದೆಂದು ನಿಯಮವಿದೆ. ಆದರೆ, ಅದನ್ನು ಯಾರೂ ಅನುಸರಿಸುತ್ತಿಲ್ಲ ಈ ಬಗ್ಗೆ ದೇಶದಲ್ಲಿ ಆಂದೋಳನ ನಡೆಯುತ್ತಿದೆ. ಪೋಲಿಸ್ ಠಾಣೆಗಳಲ್ಲಿ ಮಹಿಳೆಯರ

ಮೇಲೆ ಅತ್ಯಾಚಾರಗಳು ನಡೆಯುತ್ತಿವೆ. ಆದುದರಿಂದ, ಆ ನಿಯಮವನ್ನು ಕಟ್ಟುನಿಟ್ಟಾಗಿ ಎಲ್ಲಾ ಪೋಲಿಸ್ ಠಾಣೆಗಳಲ್ಲೂ ಜಾರಿಗೆ ತರಬೇಕೆಂದು ಸೂಕ್ತ ನಿರ್ದೇಶನ ಕೊಡಬೇಕೆಂದು ಹೇಳುತ್ತೇನೆ.

ನ್ಯಾಯಾಲಯಗಳಲ್ಲಿ ಮೊದಲನೆ ದರ್ಜೆ ಮತ್ತು ಎರಡನೇ ದರ್ಜೆ ಗುಮಾಸ್ತರುಗಳು ಇರುವ ಹಾಗೆ staff pattern ಇದೆ. ನ್ಯಾಯಾಲಯಗಳಲ್ಲಿ ಮಾಡುವ ಕೆಲಸವೇ ಬೇರೆ ಸರ್ಕಾರದ ಇತರ ಇಲಾಖೆಗಳಲ್ಲಿ ಗುಮಾಸ್ತರು ಮಾಡುವ ಕೆಲಸಗಳೇ ಬೇರೆ. ವಿಧಾನ ಸೌಧದಲ್ಲಿ ಕೆಲಸ ಮಾಡುತ್ತಿರುವ ಮೊದಲನೆ ದರ್ಜೆ ಗುಮಾಸ್ತ ನ್ಯಾಯಾಲಯದಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಅಲ್ಲಿಕೆಲಸ ಮಾಡಲು special setup ಬೇಕಾಗುತ್ತದೆ. ಸಮನ್ಸ್, ವಾರೆಂಟ್ ಮತ್ತು ಅಟ್ಯಾಚ್‌ಮೆಂಟ್ಸ್ ಬರೆಯಬೇಕಾಗುತ್ತದೆ. ಆದುದರಿಂದ, ಅಲ್ಲಿಗೆ ಪ್ರತ್ಯೇಕ ನಿಯಮಗಳನ್ನು ಮಾಡಬೇಕಾಗುತ್ತದೆ. ನೇಮಕವಾದ ಮೇಲಾಗಲೀ ಅಥವಾ ಅದಕ್ಕಿಂತ ಮೊದಲಾಗಲೀ, ಪೋಲಿಸರಿಗೆ ತರಬೇತು ನೀಡುವಂತೆ ನ್ಯಾಯಾಲಯದಲ್ಲಿ ಕೆಲಸ ಮಾಡುವ ಗುಮಾಸ್ತರಿಗೂ ತರಬೇತಿ ಏರ್ಪಾಡು ಮಾಡಿ summons, warrants and attachments ಗಳನ್ನು ಯಾವ ರೀತಿ ಬರೆಯಬೇಕೆಂಬುದನ್ನು ತಿಳಿಸಬೇಕು. ಇಲ್ಲದಿದ್ದರೆ, ಅಟ್ಯಾಚ್‌ಮೆಂಟ್ ಬದಲು ಇನ್ನೇನೆನ್ನೂ ಬರೆದು ಕಳುಹಿಸುವುದರಿಂದ ಅನೇಕ ಅನಾಹುತಗಳಾಗುತ್ತವೆ.

ಶ್ರೀ ತಕ್ಕೇದ್.—ನಾನು ವಕೀಲನಾಗಿದ್ದೇನೆ ? ೧೨ ಗಂಟೆಯವರೆಗೆ ಯಾವ ಜಡ್ಜು ಇರುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಒಳ್ಳೆಯ ವಕೀಲರು ಇರುವ ಕಡೆ ೫ ಗಂಟೆಯವರೆವಿಗೂ ಜಡ್ಜು ಗಳು ಇರುತ್ತಾರೆ. ತಕ್ಕೇದರಂತ ವಕೀಲರು ಇರುವ ಕಡೆ ೧೨ ಗಂಟೆಗೆ ಹೋಗುತ್ತಾರೆ.

ಶ್ರೀಮತಿ ಎಸ್. ಪ್ರಮಿಳ.—ಸ್ವಾಮಿ ತಾವು ಡಿಸ್ಟ್ರಿಕ್ಟ್ ಜಡ್ಜಸುಗಳನ್ನು ಡೈರೆಕ್ಟಾಗಿ ರೆಕ್ರೂಟ್‌ಮೆಂಟ್ ಮಾಡುತ್ತೀರಿ ? ಅದರ ಪರಿಣಾಮ ಏನಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಡಿಸ್ಟ್ರಿಕ್ಟ್ ಜಡ್ಜ ಮಧ್ಯ ಸಿವಿಲ್ ಜಡ್ಜ್. ಅಸಿಸ್ಟೆಂಟ್ ಜಡ್ಜಗಳನ್ನು ರೆಕ್ರೂಟ್‌ಮೆಂಟ್ ಮಾಡಿ ೬೬-೧/೩ ಭಾಗ ಪ್ರೊಮೋಷನ್‌ಲ್ಲಿ ಕೊಡಬೇಕು. ೩೩-೧/೩ ಭಾಗ ರೆಕ್ರೂಟ್‌ಮೆಂಟ್ ಮಾಡಬೇಕು. ಇಂಥವ ರಿಗೆ ಡೆತ್ ಸೆನ್‌ಟೆನ್ಸ್ ಮತ್ತು ಲೈಫ್ ಸೆನ್‌ಟೆನ್ಸ್ ಮೊಕದ್ದಮ್ಮೆಗಳನ್ನು ಕೊಟ್ಟರೆ ಮುಂದೆ ಬರುವುದಕ್ಕೆ ಅವಕಾಶವಾಗುತ್ತವೆ. ಈ ರೀತಿ ಮಾಡಿದರೆ. streamlining to come to High Court..........ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ನ್ಯಾಯಾಂಗ ಇಲಾಖೆಯಲ್ಲಿ ಶೀಘ್ರಲಿಪಿಗಾರರನ್ನು ನೇಮಕ ಮಾಡುತ್ತೀರಿ. ಶಿಘ್ರಲಿಪಿ ಗಾರರನ್ನು ನೇಮಕ ಮಾಡಿದ ಮೇಲೆ ಕೋರ್ಟುಗಳ ವ್ಯವಹಾರಕ್ಕೆ ಸಂಬಂಧಪಟ್ಟಂತೆ ವಿಶೇಷವಾದ ತರ ಭೇತಿ ಕೊಡುವ ವ್ಯವಸ್ಥೆ ಮಾಡಬೇಕು. ತರಬೇತಿ ಇಲ್ಲದೆ ಬರತಕ್ಕ ಶೀಘ್ರಲಿಪಿಗಾರರಿಗೆ ಡಿಕ್ಟೇಷನ್ ಕೊಟ್ಟರೆ ಬಹಳ ಅನಾಹುತವಾಗುವುದನ್ನು ನಾವು ಕಂಡಿದ್ದೇವೆ. ಒಂದು ಸಂದರ್ಭದಲ್ಲಿ dismissed for default for non-prosecution ಎಂದು ಡಿಕ್ಟೇಷನ್ ಕೊಟ್ಟರೆ dissmissal for default for wrong prostitution ಎಂದು ತರ್ಜುಮೆ ಮಾಡಿರುತ್ತಾರೆ. ಇಂಥ ಅನಾಹುತ ಗಳು ಸಂಭವಿಸುತ್ತವೆ. ಆದುದ್ದರಿಂದ ಶಿಘ್ರಲಿಪಿಗಾರರಿಗೆ ಮತ್ತು ಗುಮಾಸ್ತರುಗಳಿಗೆ ವಿಶೇಷ ತರಭೇತಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಕೋರ್ಟುಗಳಲ್ಲಿ ಸಾವಿರಾರು ಕೇಸುಗಳು ಪೆಂಡಿಂಗ್ ಇವೆ. ಲ್ಯಾಂಡ್ ಅಕ್ವಿಜಿಷನ್‌ಗೆ ಸಂಬಂದಪಟ್ಟಂತೆ ಜಾಸ್ತಿ ಕೇಸುಗಳು ಪೆಂಡಿಂಗ್ ಇವೆ. ಅಡ್ಜರ್ನಮೆಂಟ್ ಕೊಡುತ್ತಿಲ್ಲ ? ನಿಮ್ಮ ಗೌರ್ನಮೆಂಟ್ ಪ್ಲೀಡರ್ಸ್ ರೇಕಾರ್ಡುಗಳನ್ನು ಪ್ರೊಡ್ಯೂಸ್ ಮಾಡುವುದಿಲ್ಲ. ಸುಮಾರು ೭೦ ಸಾವಿರ ಕೇಸಸ್ ಪೆಂಡಿಂಗ್ ಇದೆ. ಅದರಲ್ಲಿ ಅರ್ಧ ಭಾಗ ಗೌರ್ನ್‌ಮೆಂಟ್ ಅಪೀಲಿಗೆ ಸಂಬಂಧಪಟ್ಟದ್ದು ಇದೆ, ಗೌರ್ನ್‌ಮೆಂಟ್ ಪ್ಲೀಡರುಗಳನ್ನು ನೇಮಕ ಮಾಡುವಾಗ ಅವರ ಅನುಭವವನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ನಾವು ಕೊರ್ಟುಗಳಲ್ಲಿ ನೋಡುತ್ತಿದ್ದೇವೆ ? ಸರ್ಕಾರದವರು ಸರ್ಕಾರಿ ಪ್ಲೀಡರುಗಳನ್ನು ನೇಮಕ ಮಾಡುವಾಗ ಅವರ ಅನುಭವವನ್ನು ನೋಡಿ ಮಾಡಿದರೆ ಅನುಕೂಲವಾಗುತ್ತದೆಂದು ಸಲಹೆ ಕೊಡುತ್ತೇನೆ. ಅಸಾಲ್ಟ್ ಮತ್ತು ರೆಫ್ರೀ ಕೇಸುಗಳಿಗೆ ಸಂಬಂಧಪಟ್ಟಂತೆ ೩೨೩ ಕೇಸುಗಳು ಪೆಂಡಿಂಗ್ ಇವೆ. ಇದರಲ್ಲಿ ಕೂಡ ಸ್ಟೇಟ್ ಕೇಸ್‌ಗಳೇ ಪೆಂಡಿಂಗ್ ಜಾಸ್ತಿ ಇದೆ. ಬಹಳ ಮುಖ್ಯವಾದಂತ, ಚಿಕ ಮಗಳೂರು ಜ್ಯೋತಿ ಮರ್ಡರ್ ಕೇಸ್ ವಿಚಾರ ತೆಗೆದುಕೊಳ್ಳಿ. ಹಲವಾರು ದಿವಸಗಳಾದರೂ ಇನ್ನೂ ಕೂಡ ರಾಜ್ಯ ಸರ್ಕಾರ ಅಪೀಲು ಹಾಕುವುದಕ್ಕೆ ಹೋಗಿಲ್ಲ. ಡೇಲೈಟ್ ೩೦೨ ಮರ್ಡರ್ಸ್ ಕೇಸುಗಳಲ್ಲಿ ಅಪೀಲು ಹೋಗಿಲ್ಲ. ಸಣ್ಣ ಸಣ್ಣ ಕೇಸುಗಳಲ್ಲಿ ಅಪೀಲು ಹೋಗುವುದನ್ನು ಆದಷ್ಟು ತಪ್ಪಿಸಬೇಕೆಂದು ಹೇಳುತ್ತೇನೆ.

ಹೈಕೋರ್ಟಿನಲ್ಲಿ ದೊಡ್ಡ ದೊಡ್ಡ ಜಡ್ಜಮೆಂಟ್‌ಗಳು ಆಗುವಂತ ಸಂದರ್ಭದಲ್ಲಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಬೇಕಾದರೆ ? ಕಾನೂನು ಇಲಾಖೆಯವರ ಅಭಿಪ್ರಾಯ ತೆಗೆದುಕೊಳ್ಳುವುದು ಸರಿಯಲ್ಲ. ಕಾರಣ? ಕಾನೂನು ಇಲಾಖೆಯಲ್ಲಿ ಇರತಕ್ಕ ಅಧಿಕಾರಿಗಳು ಡಿಸ್ಟ್ರಿಕ್ಟ್ ಜಡ್ಜ ಕೇಡರ್‌ನಿಂದ ಬಂದಂತವರು ? ಇವರು ಹೈಕೋರ್ಟು ಜಡ್ಜಮೆಂಟ್ ಬಗ್ಗೆ ತಮ್ಮ ಅಭಿಪ್ರಾಯ ಕೊಡುವುದಕ್ಕೆ ಅಸಮರ್ಥರಾಗಿರುತ್ತಾರೆ ? ಅವರು ಪ್ರೈವೈಲ್ ಮಾಡುವುದಕ್ಕೆ ಸಾಧ್ಯವಿಲ್ಲ ಸರ್ಕಾರ ಅಡ್ವೋಕೇಟ್ ಜನರಲ್‌ರವರಿಂದ ಅಥವಾ ಸುಪ್ರೀಂ ಕೋರ್ಟುವಕೀಲರಿಂದ ಅಭಿಪ್ರಾಯವನ್ನು ಪಡೆಯಬಹುದು. ಇವರ ಅಭಿಪ್ರಾಯ ತೆಗೆದುಕೊಂಡರೆ ಸುಪ್ರೀಂಕೋರ್ಟಿನಲ್ಲಿ ಕೇಸುಗಳನ್ನು ಮುಂದು ವರಿಸುವುದಕ್ಕೆ ಅನುಕೂಲವಾಗುತ್ತದೆ, ಇವತ್ತು ಕೋರ್ಟಿನಲ್ಲಿ ಕೋಟ್ಯಾಂತರ ರೂಪಾಯಿಗಳು ನಾನಾ ರೀತಿಯ ಕೇಸುಗಳಿಗೆ ಸಂಬಂಧಪಟ್ಟದ್ದು ಕೊಳೆಯುತ್ತಾ ಬಿದ್ದಿದೆ, ಇದರ ಜೊತೆಗೆ ಸೆಕ್ಷನ್ ೮೬ ಕೇಸು ಗಳಲ್ಲಿ ಬಂದಿರುವ ಅವಾರ್ಡ್ ಅಮೌಂಟ್ ಎಲ್ಲವನ್ನೂ ಡಂಪ್ ಮಾಡಿದ್ದಾರೆ. ಈ ಹಣವನ್ನು ಬೇರೆ ಕಾರ್ಯಗಳಿಗೆ ಉಪಯೋಗಿಸಿ ಬಡ್ಡಿ ಬರುವಹಾಗೆ ಮಾಡಿ. ಈ ಹಣ ಯಾವ ಕೆಲಸಕ್ಕೂ ಉಪಯೋಗ ಇಲ್ಲದೆ ಹಾಳಾಗಿ ಹೋಗುವುದಕ್ಕೆ ಅವಕಾಶ ಕೊಡ ಬೇಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಭಾಷಾಂತರ ಇಲಾಖೆ ಏತಕ್ಕೆ ಇಟ್ಟುಕೊಂಡಿದ್ದೀರಿ ? ಆರಕ್ಷಕ ನೀರಿಕ್ಷಕ, ದಂಡಾಧಿಕಾರಿ ಇದಕ್ಕಿಂತ ಬೇರೆ ಭಾಷಾಂತರ ಪದಗಳು ಇಲ್ಲವೆ ? ಕನ್ನಡದಲ್ಲಿಯೇ ಮಸೂದೆಗಳನ್ನು, ಸುಗ್ರೀವಾಜ್ಞೆಗಳನ್ನು, ನೋಟಿಫಿಕೇಷನ್‌ಗಳನ್ನು ತಂದರೆ ಈ ಭಾಷಾಂತರ ಇಲಾಖೆಯ ಅವಶ್ಯಕತೆ ಇರುವುದಿಲ್ಲ,

ವಿಜಿಲೆನ್ಸ್ ಕಮೀಷನ್‌ಗೆ ಸಂಬಂದಪಟ್ಟ ಹಾಲಿ ಇರತಕ್ಕ ರೂಲ್ಸ್‌ಗಳನ್ನು ತೆಗೆದು ಹಾಕಿ ಆಕ್ಟ್ ಮಾಡಬೇಕು. ಹೈಕೋರ್ಟು ಸಿಟಿಂಗ್ ಜಡ್ಜಸ್ ಒಬ್ಬರನ್ನು ವಿಜಿಲೆನ್ಸ್ ಕಮೀಷನರ್ ಆಗಿ ನೇಮಕ ಮಾಡಬೇಕೆಂದು ಸಲಹೆ ಕೊಡುತ್ತೇನೆ, ಹಾಲಿ ಇರತಕ್ಕ ರೂಲ್ಸ್ ಪ್ರಕಾರ ಪೋಲೀಸ್ ಅಧಿಕಾರಿಗಳ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

೫-೩೦ ಪಿ. ಎಂ.

ಅಧ್ಯಕ್ಷರೆ, ಇವೊತ್ತು ಸಬಾರ್ಡಿನೇಟ್ ಲೆಜಿಸ್ಲೇಷನ್‌ನಲ್ಲಿ ೩೭೯ ರೂಲ್ಸ್ ನೋಟಿಫಿಕೇಷನ್ ನಮ್ಮ ಮುಂದೆ ಇಡಿ ಅಂತ ಕೇಳಿದ್ದೇವೆ. ಇದುವರೆಗೂ ಇಟ್ಟಿಲ್ಲ. ಲಾ ಡಿಪಾರ್ಟ್‌ಮೆಂಟ್ ಸೆಕ್ರೆಟರಿಯವರು ಏನು ಹೇಳಿದ್ದಾರೆ ಕಾನೂನು ಬಾಧಕವಾಗುತ್ತದೆ. ಅಂತ ಹೇಳುತ್ತಾರೆ. ಪಾರ್ಲಿಮೆಂಟಿನಲ್ಲಿ ೩೭೯ ನೋಟಿಫಿಕೇಷನ್ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಗೆ ಇಡುತ್ತಿದ್ದಾರೆ. ನಮ್ಮ ಕರ್ನಾಟಕ ರಾಜ್ಯ ದಲ್ಲಿ ಏತಕ್ಕೋಸ್ಕರ ೩೭೯ ನೋಟಿಫಿಕೇಷನ್ ಸಬಾರ್ಡಿನೇಟ್ ಲೆಜಿಸ್ಲೇಷನ್‌ಗೆ ಕೊಡುತ್ತಿಲ್ಲ. ಅಧ್ಯಕ್ಷರೆ, ತಾವು ಇದನ್ನು ಮುಖ್ಯವಾಗಿ ನೋಡಬೇಕು. ಕಾರಣ ಏನು ಎಂದರೆ ಎಕ್ಸಿಕ್ಯುಟೀವ್‌ನಲ್ಲಿರತಕ್ಕವರು ತಮಗೆ ಬೇಕಾದ ಹಾಗೆ ಮಾಡಿಕೊಳ್ಳಲಿಕ್ಕೆ ಅವಕಾಶವಾಗುತ್ತದೆ. ಶ್ರೀನಿವಾಸ್ ಅವರನ್ನು ಸಬಾರ್ಡಿ ನೇಟ್ ಲೆಜಿಸ್ಲೇಷನ್ ಕಮಿಟಿಗೆ ಪ್ರಮೋಷನ್ ಮಾಡಬೇಕಾದರೆ ರೂಲ್ಸ್ ಅಮೆಂಡ್‌ಮೆಂಟ್ ಮಾಡಿ ದ್ದಾರೆ. ಅದೇ ರೀತಿ ಜಾಯಿಂಟ್ ಸೆಕ್ರೆಟರಿ ಮಾಡಬೇಕಾದರೆ ತಕ್ಷಣ ಅಮೆಂಡ್‌ಮೆಂಟ್ ಮಾಡಿಕೊಂಡಿ ದ್ದಾರೆ. ಈ ರೀತಿ ಅಮೆಂಡ್‌ಮೆಂಟ್ ಮಾಡಿಕೊಳ್ಳಲಿಕ್ಕೆ ೩೭೯ ಆರ್ಟಿಕಲ್ ಸಿಕ್ಕುತ್ತದೆ. ಒಬ್ಬ ವ್ಯಕ್ತಿ ಗಾಗಿ ಅಮೆಂಡ್‌ಮೆಂಟ್ ಮಾಡತಕ್ಕದು. ತಪ್ಪು. ಅದೇ ೧೫ ವರ್ಷಗಳಿಂದ ಈಚೆಗೆ ಏತಕ್ಕೆ ಮಾಡಲಿಲ್ಲ. ಈಗಲಾದರೂ ಮಾಡಿ ಕಾಲ ಮಿಾರಿಲ್ಲ. ಇವೊತ್ತು ರಿಪೋರ್ಟರ್ಸ್ ಗ್ರ್ಯಾಜ್ಯುಯೇಟ್ಸ್ ಆಗಿದ್ದಾರೆ, ಪ್ರೊಫಿಷಿಯೆನ್ಸಿ ಪರೀಕ್ಷೆಗಳನ್ನು ಪಾಸ್ ಮಾಡಿದ್ದಾರೆ. ಇವರಿಗೆ ಸಬಾರ್ಡಿನೇಟ್ ಲೆಜಿಸ್ಲೇಷನ್ ಅಂಡರ್ ಸೆಕ್ರೆಟರಿ ಮಾಡಿ ಅಂತ ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಇವತ್ತು ಅಪ್‌ಗ್ರೇಡ್ ಮತ್ತು ಡೌನ್ ಗ್ರೇಡ್ ಮಾಡಿದ್ದಾರೆ ಏತಕ್ಕೋಸ್ಕರ ಈ ರೀತಿ ಮಾಡುತ್ತಿ ದ್ದಾರೆ. ಅಪ್‌ಗ್ರೇಡ್ ಏತಕ್ಕಾಗಿ ಮಾಡುತ್ತಿದ್ದಾರೆ ಬೇಕಾದಂತಹ ಆಫೀಸರ್‌ಗೆ ಬೇಕಾದ ಹಾಗೆ ಮಾಡು ತ್ತಿದ್ದಾರೆ. ದಯವಿಟ್ಟು ಇವೊತ್ತಿನಿಂದಾದರೂ ಅಪ್‌ಗ್ರೇಡ್ ಡೌನ್‌ಗ್ರೇಡ್ ಮಾಡತಕ್ಕದ್ದನ್ನು ಕಡಿಮೆ ಮಾಡಿ. ತಮ್ಮ ಇಲಾಖಾ ವರದಿ ಪೇಜ್ ೨ ರಲ್ಲಿ ಏನಿದೆ. '2. Special Secretary (very recently i. e. in March 1980 the post has been downgraded to that of Additional Secretary) ಇದನ್ನು ಏತಕ್ಕೋಸ್ಕರ ಮಾಡುತ್ತಿದ್ದಾರೆ. ಈ ರೀತಿ ಇನ್ನುಮೇಲಾ ದರೂ ಖಂಡಿತ ಮಾಡಬೇಡಿ. ಈ ರೀತಿ ಮಾಡಿದರೆ ಅನ್ಯಾಯವಾಗುತ್ತದೆ. ಇದನ್ನು ಸರಿಪಡಿಸಿ ಅಂತ ಹೇಳುತ್ತೇನೆ, ಇನ್ನು ಜುಡಿಷಿಯರಿ ಬಗ್ಗೆ ಮುನ್ಸೀಫ್ ೪೭ ಜನ ಅಪಾಯಿಂಟ್ ಮಾಡಿದ್ದಾರೆ

ಮೋರ್ಚಿಯಲ್ಲಿ ಲಿಸ್ಟ್ ಬಂದಿದೆ. ಇವೊತ್ತಿನವರೆಗೂ ಅಪಾಯಿಂಟ್ ಆಗಿಲ್ಲ. ಅದರಲ್ಲಿ ಇಬ್ಬರಿಗೆ ಡಿಸ್‌ಕ್ವಾಲಿಫೈಡ್ ಅಂತ ಹೇಳಿದ್ದಾರೆ.

ಶ್ರೀ ವೈ. ರಾಮಕೃಷ್ಣ.— ಡಿಸ್‌ಕ್ವಾಲಿಫೈಡ್ ಆಗಿರುವುದು ಮೆಡಿಕಲ್ ಗ್ರೌಂಡ್ಸ್‌ನಿಂದ,

ಶ್ರೀಮತಿ ಎಸ್. ಪ್ರಮಿಳ.—ಇವೊತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಮತ್ತು ಬ್ಯಾಕ್‌ವರ್ಡ್‌ಕ್ಲಾಸ್‌ನವರಿಗೆ ಜುಡಿಷಿಯರಿಗೆ ಬರಲಿಕ್ಕೆ ಏನು ಟ್ರೈನಿಂಗ್ ಕೊಡುತ್ತಿದ್ದೀರಿ ಇದರಲ್ಲಿ ಮಹಿಳೆಯರಿಗೂ ಕೂಡ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ ರಾಮಕೃಷ್ಣ.— ಮಹಿಳೆಯರಿಗೆ ಹುದ್ದೆಗಳನ್ನು ರಿಸರ್ವ್ ಮಾಡಬಹುದು.

ಶ್ರೀಮತಿ ಎಸ್. ಪ್ರಮಿಳ.—ಆರ್ಟಿಕಲ್ ೧೫. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಹೇಗೆ ಮಾಡುತ್ತೀರಾ ಹಾಗೆ ಮಾಡಬಹುದು ಇನ್ನು ಮಾನ್ಯ ರಾಮೇಗೌಡರು ಇತರೇ ಸದಸ್ಯರು ಅನಿಮಲ್ ಹಸ್‌ಬೆಂಡರಿ ವಿಚಾರದಲ್ಲಿ ಮಾತನಾಡಿದರು, ಈ ವಿಚಾರದಲ್ಲಿ ನಾನು ಒಂದೆರಡು ವಿಚಾರಗಳನ್ನು ತಿಳಿಸಬೇಕು ಎಂದರೆ ನಮ್ಮ ಮನೆಯ ಮುಂದೆ ದನಗಳ ಆಸ್ಪತ್ರೆ ಇದೆ ಅಲ್ಲಿಗೆ ಇದುವರೆಗೂ ಔಷಧಿಗಳು ಸರಬರಾಜು ಆಗಿಲ್ಲ. ದನಗಳಿಗೆ ಬೇಕಾದ ಸೌಲಭ್ಯಗಳು ಸಿಕ್ಕುತ್ತಿಲ್ಲ. ಸುಮಾರು ೩೭೨ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ. ನೀವು ಒಂದು ಕಾನೂನನ್ನು ತಂದು ೫ ವರ್ಷಗಳಾದರೂ ಕಡ್ಡಾಯವಾಗಿ ಆಸ್ಪತ್ರೆಗಳಲ್ಲಿ ಕೆಲಸಮಾಡಬೇಕು ಅಂತ ಮಾಡಬೇಕು ಇನ್ನು ಸ್ಲಾಟರ್ ಹೌಸಸ್ ಬೆಂಗಳೂರಿನ ಪ್ರತಿಯೊಂದು ಮೂಲೆ ಮೂಲೆಯಲ್ಲೂ ಕಾಣುತ್ತವೆ. ಈ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿ ಸರಿಯಾದ ಕಾನೂನು ಮಾಡದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಕಾರ್ಪೋರೇಷನ್ ಅಧಿಕಾರಿಗಳು ಇದರ ಬಗ್ಗೆ ಸರ್ಟಿಫಿಕೇಟ್ ಕೊಡಬೇಕು ಅಂತ ಹೇಳುತ್ತಾರೆ. ಆದರೆ ಇವೊತ್ತು ಎಲ್ಲಿ ನೋಡಿದರೂ ಸ್ಲಾಟರ್ ಹೌಸಸ್‌ಗಳಾಗಿವೆ. ಇದರ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಈ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ,

(ಗೊಂದಲ)

SRI B. B. SAYANAK.—Sir, if that is the case, we will stage a walk out.

ಶ್ರೀ ವೈ. ರಾಮಕೃಷ್ಣ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನಾ ಸಚಿವರು) —ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಮಂಡಿಸಿರತಕ್ಕಂತಹ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರುಗಳು ಮಾತನಾಡಿ ಬಹಳ ಉತ್ತಮವಾಗಿ ಸಲಹೆಗಳನ್ನು ಕೊಟ್ಟಿದ್ದಾರೆ. ತುಂಬ ಸಲಹೆಗಳು ಬಹಳ ಉಪಯುಕ್ತವಾದವುಗಳು ಮತ್ತು ಮುಂದೆ ಯಾವ ರೀತಿ ಇಲಾಖೆಯನ್ನು ಸ್ಟ್ರೀಮ್‌ಲೈನ್ ಮಾಡಬೇಕೆಂಬುದನ್ನು ಸೂಚಿಸಿದ್ದಾರೆ. ಇದಕ್ಕಾಗಿ ನಿಜವಾಗಿಯೂ ನಾನು ಅಭಿನಂದಿಸುತ್ತೇನೆ. ಮಾನ್ಯ ಸದಸ್ಯರುಗಳು ಕೊಟ್ಟಂತಹ ಎಲ್ಲ ಸಲಹೆಗಳ ಬಗ್ಗೆಯೂ ನಾನು ಉತ್ತರ ಕೊಡುವುದಕ್ಕೆ ಕಾಲಾವಕಾಶ ಇಲ್ಲದೇ ಇರುವುದರಿಂದ ಆಕಸ್ಮಿಕ ಉತ್ತರ ಕೊಡದಿದ್ದರೂ ಅಂದ ಮಾತ್ರಕ್ಕೆ ಮರೆಯುತ್ತೇನೆ ಎನ್ನುವ ಭಾವನೆ ತಮ್ಮಲ್ಲಿ ಬರಬಾರದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಶ್ರೀಮಾನ್ ರಾಮೇಗೌಡರು, ಈ ಬೇಡಿಕೆಯ ಬಗ್ಗೆ ಮಾತನಾಡುತ್ತಾ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವರು ಮಾಡಿರತಕ್ಕಂತಹದ್ದು ಬರೀ ಭಾಷಣ ಎಂಬುದಾಗಿ ನಾನು ಭಾವಿಸುವುದಿಲ್ಲ. ಅವರಿಗೆ ಸ್ವತಃ ಅನುಭವ ಇದೆ. ಅವರು ರೈತ ಮುಖಂಡರು ಜೊತೆಗೆ ಈ ಖಾತೆ ೪-೫ ತಿಂಗಳ ಹಿಂದೆ ಅವರ ಕೈಯ್ಯಲ್ಲೇ ಇತ್ತು. ಆ ಒಂದು ಅಪಾರವಾದ ಹಿನ್ನಲೆಯಲ್ಲಿ ಕೆಲವಾರು ಸಲಹೆಗಳನ್ನು ಸರ್ಕಾರಕ್ಕೆ ಮಾಡಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ ಯಾವ ಸಲಹೆಗಳೂ ಕೂಡ ತೆಗೆದುಹಾಕುವ ರೀತಿಯಲ್ಲಿಲ್ಲ ಎಂಬುದಾಗಿ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಬಹಳ ಅರ್ಥಗರ್ಭಿತವಾದವುಗಳಾಗಿವೆ. ಮತ್ತು ರೈತರಿಗೆ ಅಗಲೇ ಬೇಕಾದ ಕೆಲವು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಮೊದಲು ಈ ಇಲಾಖೆಯನ್ನು ರೀ-ಆರ್ಗನೈಜೇಷನ್ ಮಾಡಬೇಕು, ಇದು ಅವರಿಗೂ ಗೊತ್ತಿದೆ. ಇದು ಬಹಳ ಕಾಲದಿಂದಲೂ ಕೋಲ್ಡ್ ಸ್ಟೋರೇಜ್‌ನಲ್ಲಿದೆ ಇವತ್ತು ನಾನು ಬಂದ ಮೇಲೆ ಈ ಇಲಾಖೆಗೆ ಜೀವ ಕೊಟ್ಟಿದ್ದೇನೆ. ಜೀವ ತುಂಬಿದ್ದೇನೆ. ಆದರೆ ಅದನ್ನೆಲ್ಲಾ ಅನುಷ್ಠಾನಕ್ಕೆ ತರಲಿಕ್ಕೆ

ಸ್ವಲ್ಪ ಹಣ ಬೇಕಾಗುತ್ತದೆ. ಅವರು ಹೇಳಿದ್ದಾರೆ. ಎಷ್ಟು ಹಣವನ್ನು ಇಡಬೇಕಾಗಿತ್ತೋ ಅಷ್ಟು ಹಣವನ್ನು ಈ ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿಲ್ಲ ಈ ರೀತಿ ಮಾಡಿದರೆ ಅಧಿಕಾರಿಗಳು ಉತ್ಸಾಹದಿಂದ ಕೆಲಸ ಮಾಡುವುದಿಲ್ಲ, ಯಾವಾಗ ಉತ್ಸಾಹಕ್ಕೆ ಭಂಗ ಬರುತ್ತದೋ ಆಗ ಕೆಲಸ ನಡೆಯುವುದಿಲ್ಲ ಎಂಬ ತರ್ಕಂತಹದ್ದನ್ನು ಬಹಳ ಚನ್ನಾಗಿ ಹೇಳಿದ್ದಾರೆ. ಆ ವಾದವನ್ನು ನಾನು ಒಪ್ಪುತ್ತೇನೆ. ಮತ್ತೊಮ್ಮೆ ನಮ್ಮ ಹಣಕಾಸಿನ ಸಚಿವರ ಜೊತೆ ಮಾತನಾಡಿ, ನನ್ನ ಸಚಿವ ಸಂಪುಟದ ಸಹೋದ್ಯೋಗಿಗಳನ್ನು ಕೇಳಿ ಕೊಂಡು ಆದಷ್ಟು ಬೇಗ ಈ ಇಲಾಖೆಯನ್ನು ರೀ-ಆರ್ಗನೈಜೇಷನ್ ಪೈ ಮಾಡುತ್ತೇನೆ. ಎನ್ನುವ ಬರವಸೆಯನ್ನು ಮಾನ್ಯ ರಾಮೇಗೌಡರವರಿಗೆ ಕೊಡುವುದಕ್ಕೆ ಬಯಸುತ್ತೇನೆ ಮತ್ತೆ ಕವಿ.ಟಿಗೂ ಮತ್ತು ಅಫಿಸಿಯಲ್ಸ್ ಕಮಿಟಿ ಬಗ್ಗೆ ಕೆಲವು ಕ್ಲಾರಿಫಿಕೇಷನ್ ಕೊಟ್ಟರು. ಪೈ ಕಮೀಷನ್ ವರದಿಗೂ ಅಫಿಸಿಯಲ್ ಪೇ ಕಮೀಷನ್ ವರದಿಗೂ ಯಾವ ರೀತಿ ಬೇರೆಯಾಗುತ್ತದೆ ? ಸಂಬಳ ಸಾಲದು ಎಂಬುದು ಬೇರೆ ವಿಚಾರ. ಅದು ಇರಲಿ ಈ ಸಂಬಳ ವಿಚಾರ ತೆಗೆದುಕೊಂಡರೆ ನಮ್ಮ ದಕ್ಷಿಣ ಭಾರತದ ರಾಜ್ಯಗಳು ಯಾವುವು ಇವೆ, ಆ ಎಲ್ಲ ರಾಜ್ಯಗಳಲ್ಲಿರುವ ಸಂಬಳವನ್ನು ಗಣನೆಗೆ ತೆಗೆದುಕೊಂಡರೆ ನಮ್ಮ ರಾಜ್ಯದಲ್ಲೇ ಸ್ವಲ್ಪ ಹೆಚ್ಚಿಗೆ ಇವೆ. ಅಫಿಸಿಯಲ್ ಪೇ ಕಮಿಟಿಯವರು ಏನು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು ಆ ಶಿಫಾರಸ್ಸನ್ನು ನಾವು ಒಪ್ಪಿಕೊಂಡು ಅದನ್ನೂ ಜಾರಿಗೆ ತಂದಿದ್ದೇವೆ ಎಂಬುದಾಗಿ ಹೇಳುತ್ತಿದ್ದೇನೆ ಆದರೆ ಇದು ಏನಾಗಿದೆ ಎಂಬುದನ್ನು ನಾನು ಹೇಳಬಾರದು. ಇವತ್ತು ಬೆಳಗ್ಗೆ ನಮ್ಮ ಮನೆಯ ಮುಂದೆ ವೆಟರ್ನರಿ ಕಾಲೇಜಿನ ಸಿಬ್ಬಂದಿಯವರು ಬಂದು ಸುಮಾರು ೨೦೦ ಜನ ಅದರಲ್ಲಿ ಹೆಣ್ಣುಮಕ್ಕಳೂ ಇದ್ದಾರೆ ಅವರೆಲ್ಲಾ ಸೇರಿ ನಮ್ಮ ಮನೆಯ ಮುಂದೆ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತು ನನ್ನ ಇಲಾಖೆಯ ಬೇಡಿಕೆ ಬರುತ್ತದೆ ಎಂಬುದಾಗಿ ಅವರು ಹೇಗೋ ತಿಳಿದುಕೊಂಡಿದ್ದಾರೆ. ನಾನು ಮನಬಿಚ್ಚಿ ಮಾತನಾಡಬೇಕಾದರೆ ಕೆಲವು ರಾಜ್ಯಗಳಲ್ಲಿ ಜಾಸ್ತಿ ಇದೆ. ಉತ್ತರ ಪ್ರದೇಶ ಬಿಹಾರ್ ರಾಜ್ಯಗಳಲ್ಲಿ ಸ್ವಲ್ಪ ಜಾಸ್ತಿ ಇದೆ. ಆದರೆ ಕೇರಳ ಮತ್ತು ತಮಿಳುನಾಡಿನಲ್ಲಿ ನಮಗಿಂತ ಕಡಿಮೆ ಇದೆ. ನಾವು ಮಾಡಿರುವುದನ್ನು ತಿಳಿದುಕೊಂಡು ಅವರೂ ಕೂಡ ಪೇ ಸ್ಕೇಲನ್ನು ಕನ್‌ಸಾರಿಡೇಟ್ ಮಾಡಿ ಜಾಸ್ತಿ ಮಾಡಿದ್ದಾರೆ, ನಮ್ಮ ಸರ್ಕಾರ ಕೂಡ ಬಹಳ ಸಹಾನುಭೂತಿಯಿಂದ ಪರಿಶೀಲಿಸುತ್ತಿದೆ. ಏಕೆಂದರೆ ಇಂಜನೀಯರ್ಸ್, ಡಾಕ್ಟರ್ಸ್‌ಗೂ ಮತ್ತು ಇವರಿಗೂ ತಾಳೆ ಹಾಕಿ ನೋಡಿದಾಗ ಅನ್ಯಾಯವಾಗಿದೆ. ಆದಕಾರಣ ಅದನ್ನು ಸರಿ ಮಾಡುತ್ತೇನೆ ಎನ್ನುವ ಭರವಸೆಯನ್ನು ಇಲ್ಲಿ ಕೊಡುತ್ತಿದ್ದೇನೆ. ಎಲ್.ಐ.ಸಿ., ಬ್ಯಾಂಕುಗಳು ಮತ್ತು ಕೆ.ಡಿ.ಡಿ.ಸಿ ಯಲ್ಲಿರತಕ್ಕಂತಹ ಸಂಬಳ ಜಾಸ್ತಿ ಇದೆ, ಅದನ್ನೇ ನಮಗೂ ಕೊಡಿ ಎಂಬುದಾಗಿ ಕೇಳುತ್ತಿದ್ದಾರೆ. ಕೆ.ಡಿ.ಡಿ.ಸಿ. ಅದು ಕಂಪನಿ ಆಕ್ಟ್ ಕೆಳಗೆ ರಿಜಿಸ್ಟರ್ ಆಗಿದೆ, ಅವರು ಪ್ರತ್ಯೇಕವಾದ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಇಟ್ಟುಕೊಂಡಿದ್ದಾರೆ, ೬೦೦ ರೂ. ಗಳಿಂದ ಪ್ರಾರಂಭ ಮಾಡಿ ೨೬೫೦ ರೂ ಗಳ ವರೆಗೂ ಸಂಬಳ ಕೊಡುತ್ತಿದ್ದಾರೆ. ಯಾವ ರೀತಿಯಲ್ಲಿ ಕೊಡುತ್ತಿದ್ದಾರೆ ಅಂದರೆ, ಅವರ ಕಂಪನಿ ಕೊಡುತ್ತಿದೆ, ವರ್ಕಿಂಗ್ ಅವರ್ಸ್ ಜಾಸ್ತಿ ಇದೆ. ಮತ್ತೆ ಜವಾಬ್ದಾರಿ ಜಾಸ್ತಿ ಕೊಟ್ಟಿದ್ದೇವೆ. ಅದಕೋಸ್ಕರ ಜಾಸ್ತಿ ಸಂಬಳ ಕೊಡುತ್ತಿದ್ದೇವೆ. ಎಂಬುದಾಗಿ ಅವರು ಹೇಳುತ್ತಾರೆ. ಇರತಕ್ಕಂತಹ ವಿಚಾರವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಮತ್ತೆ ಭಾರತ್ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಹೆಚ್ಚಿಗೆ ಸಂಬಳ ಕೊಡುತ್ತಿದ್ದಾರೆ. ೮೮೦ ರೂ. ಗಳನ್ನು ಸಂಬಳವನ್ನಾಗಿ ಕೊಡುತ್ತಾರೆ, ಮತ್ತೆ ೧೦೦ ರೂ. ಗಳನ್ನು ಡಿ.ಎ ಎಂಬುದಾಗಿ ಕೊಡುತ್ತಿದ್ದಾರೆ. ಮತ್ತು ಸೈಕಲ್ ಮೋಟಾರನ್ನೂ ಕೂಡ ಕೊಟ್ಟು ಅದಕ್ಕೂ ಕೂಡ ಅಲೋಯನ್ಸ್‌ನ್ನು ಕೊಡುತ್ತಿದ್ದಾರೆ. ಏಕೆಂದರೆ ಅವರಿಗೆ ಹೆಚ್ಚು ಹಣ ಬರುತ್ತದೆ. ಫಾರಿನ್‌ನಿಂದ ಹಣ. ಬರುತ್ತದೆ. ಅವರಿಗೆ ವಿಶ್ವಬ್ಯಾಂಕಿನಿಂದ ಹಣ ಬರುತ್ತದೆ. ಜೊತೆಗೆ ಭಾರತ ಸರ್ಕಾರದವರು ಗ್ರಾಂಟ್ ಕೊಡುತ್ತಾರೆ. ಜೊತೆಗೆ ಅವರು ಸ್ವಲ್ಪ ತಮ್ಮದೇ ಆದಂತಹ ಹಣವನ್ನೂ ಕೂಡ ಇಟ್ಟುಕೊಂಡಿದ್ದಾರೆ ಅದೇ ರೀತಿ ಎಲ್.ಐ.ಸಿ. ಬಗ್ಗೆ ಹೇಳುವುದಾದರೆ ಅವರದೇ ಒಂದು ಪ್ರಪಂಚ. ಅವರದೇ ಪ್ರತ್ಯೇಕ ರೂಲ್ಸ್ ಅಂಡ್ ರೆಗ್ಯುಲೈಷನ್ನೇ ಬೇರೆ ಅದರ ಪ್ರಕಾರ ಹೆಚ್ಚಿಗೆ ಸಂಬಳ ಕೊಡುತ್ತಿದ್ದಾರೆ. ಇಲ್ಲ ಅಂತ ಹೇಳುವುದಿಲ್ಲ ಅದೇ ರೀತಿ ಬ್ಯಾಂಕ್‌ನಲ್ಲೂ ಕೂಡ ಹೆಚ್ಚು ಸಂಬಳ ಕೊಡುತ್ತಾರೆ. ಅದೇ ರೀತಿ ಬೆಂಗಳೂರಿನಲ್ಲಿರತಕ್ಕಂತಹ ಐ.ಟಿ.ಐ., ಮತ್ತು ಬಿ.ಇ. ಎಲ್‌ನಲ್ಲೂ ಹೆಚ್ಚಿಗೆ ಸಂಬಳ ಕೊಡುತ್ತಿದ್ದಾರೆ. ಕಾರಣ ಅದು ಕೈಗಾರಿಕೆಗೆ ಕೊಡುತ್ತಿದ್ದಾರೆ. ಆ ರೀತಿ ಕೊಡುವುದಕ್ಕೆ ಅವರಿಗೆ ಅವಕಾಶ ಇದೆ. ಆದರೆ ಇಲ್ಲಿ ನಮಗೆ ಬಡ್ಜೆಟ್ಟಿನಲ್ಲಿ ಆ ರೀತಿ ಕೊಡುವುದಕ್ಕೆ ಅವಕಾಶ ಇಲ್ಲ. ಆದರೂ ಬಹಳ ಸಹಾನುಭೂತಿಯಿಂದ ಪರಿಶೀಲಿಸುತ್ತಿದ್ದೇವೆ ಎನ್ನುವುದನ್ನು ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಹೆಚ್ಚಿಸದಿದ್ದರೆ ಸಹಾನುಭೂತಿ ಏನು ಬಂತು ?

ಶ್ರೀ ವೈ. ರಾಮಕೃಷ್ಣ—ನಿನ್ನೆ ಅಲ್ಲ ಮೊನ್ನೆ ರೆಪ್ರೆಂಟೇಷನ್ ಕೊಟ್ಟರು. ನಾನು ಕಾರ್ಯದರ್ಶಿಯವರ ಹತ್ತಿರ ಕಳುಹಿಸಿಕೊಟ್ಟಿದ್ದೇನೆ. ಆದರೆ ಅವರು ಇವತ್ತು ನಮ್ಮ ಮನೆಯ ಹತ್ತಿರ ಬಂದು ಸ್ಟ್ರೈಕ್ ಮಾಡಿದ್ದಾರೆ. ನಾನು ಏನು ಮಾಡಬೇಕು ? ಅದಕ್ಕೆ ರೂಲ್ಸ್ ಮತ್ತು ಪ್ರೊಸೀಜರ್ ಇಲ್ಲವೇ ? ಕ್ಯಾಬಿನೆಟ್ ಮುಂದೆ ಹೋಗಬೇಕಾಗುತ್ತದೆ. ದಯಮಾಡಿ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಮತ್ತೆ ಬಹಳ ಮುಖ್ಯವಾದ ವಿಚಾರವನ್ನು ಶ್ರೀಮಾನ್ ರಾಮೇಗೌಡರು ಎತ್ತಿದ್ದಾರೆ. ಪ್ರತಿ ೫೦೦ ದನಗಳಿಗೆ ಒಂದರಂತೆ ಕೃತಕ ಗರ್ಭಧಾರಣ ಕೇಂದ್ರವನ್ನು ಒದಗಿಸಿಕೊಡುವ ಏರ್ಪಾಡು ಮಾಡಬೇಕೆಂದು ಹೇಳಿದ್ದಾರೆ. ಇದು ಕೆ ಡಿ ಡಿ.ಸಿ. ಯಲ್ಲಿ ಈ ರೀತಿ ಈಗಾಗಲೇ ಇರಬೇಕು. ಇದರ ಅವಶ್ಯಕತೆ ಬಹಳ ಇದೆ ಎಂಬುದಾಗಿ ಹೇಳಿದರು. ಮತ್ತೆ ಕೆ ಡಿ.ಡಿ ಸಿ. ಯವರು ಈಗಾಗಲೇ ಎಲ್ಲೆಲ್ಲಿ ಸೊಸೈಟಿಗಳನ್ನು ಮಾಡಿದ್ದಾರೆ ಆ ಎಲ್ಲ ಸೊಸೈಟಿಗೆಲ್ಲಾ ಇದನ್ನು ಇಂಟರ್‌ಡ್ಯೂಸ್ ಮಾಡಬೇಕೆಂಬ ಉತ್ತಮವಾದ ಸಲಹೆಯನ್ನು ಅವರ ಹಿಂದಿನ ಅನುಭವದ ಮೇಲೆ ಕೊಟ್ಟಿದ್ದಾರೆ. ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ಇಷ್ಟೇ ಅಲ್ಲದೆ ತಮಗೆ ಗೊತ್ತಿದ್ದ ಪ್ರಕಾರ ಬಿ.ಎ.ಎಫ್. ಇಲ್ಲೂ ಕೂಡ ಬರುತ್ತಿದೆ. ೫೦ ಕೇಂದ್ರಗಳನ್ನು ಪ್ರಾರಂಭ ಮಾಡುವವರು ಇದ್ದಾರೆ. ಅವರು ಆ ಏರಿಯಾಗಳಲ್ಲಿ ಪ್ರತಿಯೊಂದು ಹಸುವಿಗೂ ೫೦೦ ರೂ. ಗಳವರೆಗೆ ಖರ್ಚು ಮಾಡುತ್ತಾರೆ. ಈ ಒಂದು ಸ್ಕೀಂನ್ನು ಜಾರಿಗೊಳಿಸಿದ್ದೇವೆ. ಈಗಾಗಲೇ ತಿಪಟೂರು ತಾಲ್ಲೂಕಿನ ಲಕ್ಕೀಹಳ್ಳಿಯಲ್ಲಿ ೫ ಕೋಟಿ ರೂಪಾಯಿಗಳ ಯೋಜನೆಯಲ್ಲಿ ಒಂದು ನೈಟ್ರೋಜನ್ ಪ್ಲಾಂಟೇಷನ್‌ನ್ನು ತಯಾರು ಮಾಡುತ್ತಿದ್ದಾರೆ. ಇವರೂ ಇನ್ನೂ ಹೆಚ್ಚು ಬ್ರಾಂಚಸ್‌ಗಳನ್ನು ಮಾಡುವುದಕ್ಕೆ ತಯಾರಾಗಿದ್ದಾರೆ. ಜೊತೆಗೆ ೫೦ ಸೆಂಟರ್‌ಗಳನ್ನು ತೆಗೆಯುವುದಕ್ಕೆ ಅವರು ತಯಾರಿದ್ದಾರೆ. ನಮ್ಮ ಪಾಲಿನ ಹಣವನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ ಇದು ೫೦ ಸೆಂಟರ್‌ಗೇ ಮೀಸಲಾಗುವುದಿಲ್ಲ. ಮುಂದೆ ಹೆಚ್ಚು ವಿಸ್ತಾರ ಮಾಡುತ್ತೇವೆಂದು ಹೇಳಿದ್ದಾರೆ ನಿಜವಾಗಿಯೂ ಕೂಡ ಇವರನ್ನು ನಾವು ಅಭಿನಂದಿಸಬೇಕಾಗುತ್ತದೆ. ಜೊತೆಗೆ ನಮ್ಮ ಪಶುಸಂಗೋಪನಾ ಇಲಾಖೆಯಲ್ಲಿ ಲೆಕ್ಕಾಚಾರ ಸಿಕ್ಕದಿರುವುದು ಲೋಪದೋಷಗಳಿಂದೇನೂ ಅಲ್ಲ. ೧೦೦ ಕೃತಕ ಗರ್ಭಧಾರಣೆಯನ್ನು ಮಾಡಿದರೆ ೭೦ ಕರುಗಳು ಜನಿಸಬಹುದು. ಆದರ ಬೆಲೆಯನ್ನು ನಾವು ತೆಗೆದುಕೊಳ್ಳುವುದಿಲ್ಲ. ನಾವು ಈ ಸೇವೆ ಮಾಡಿದರೂ ಕೂಡ ಆದರ ಆದಾಯವನ್ನು ನಾವು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಇಲ್ಲಿ ನಾವು ಸಾಧನೆಯ ಕಡೆಗೆ ಹೆಚ್ಚಿನ ಗಮನವನ್ನು ಕೊಡಲಾಗುತ್ತದೆ. ಮತ್ತು ಸಿ.ಅಂಡ್.ಆರ್.ರೂಲ್ಸ್ ಬಗ್ಗೆ ಹೇಳಿದರು ಹಾಗೂ ಇಲಾಖೆಯ ರೀಆರ್ಗನೈಸ್ ಆಗಿಲ್ಲ ಎಂದೂ ಸಹಾ ಸದಸ್ಯರು ಹೇಳಿದರು, ಇಲಾಖೆಯ ರೀಆರ್ಗನೈಸ್ ಮಾಡಬೇಕಾಗಿರುವುದರಿಂದ ಸಿ.ಆಂಡ್.ಆರ್.ರೂಲ್ಸ್‌ನ್ನೂ ಸಹಾ ಆ ಅನಂತರ ತಯಾರಿಸಬಹುದಲ್ಲಾ ಎಂದು ಇದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ರೂಲ್ಸ್ ಇಲ್ಲದೇ ಈಗ ವ್ಯವಹಾರವನ್ನು ಮಾಡುತ್ತಿದ್ದೀರಾ ?

ಶ್ರೀ ವೈ. ರಾಮಕೃಷ್ಣ.—ಈಗ ರೂಲ್ಸ್ ಇದೆ. ಇಲ್ಲ ಎಂದು ಹೇಳಲಿಲ್ಲ. ಮತ್ತೆ ಸಿಂಧಿ ಮತ್ತು ರೆಡ್ಡೇನ್ ಹಾಗೂ ಬಾವಲಿ ಮತ್ತು ರೆಡ್ಡೇನ್ ತಳಿಗಳು ಅತ್ಯುತ್ತಮವಾದುವು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಸರ್ಕಾರ ಮಾಡಿರತಕ್ಕ ತಪ್ಪನ್ನು ನಾನು ಒಪ್ಪಿಕೊಳ್ಳುತ್ತೇನೆ, ಕೃತಕ ಗರ್ಭದಾರಣೆ ಮಾಡುವುದರಿಂದ ಎಲ್ಲಾ ಕಾರ್ಯಗಳು ಸಾಧನೆಯಾದವು ಎಂದು ನಾನು ಹೇಳುವುದಕೆ ಹೋಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ತಳಿಗಳನ್ನು ಗುರುತಿಸಬೇಕಾದರೆ ಅಲ್ಲಿನ ಅಧಿಕಾರಿಗಳು ಹೆಚ್ಚಿನ ಶ್ರಮವನ್ನು ವಹಿಸಬೇಕಾಗುತ್ತದೆ. ಮಲೆನಾಡು ಗಿಡ್ಡಕ್ಕೆ ರೆಡ್ಡೇನ್ ತಳಿಯನ್ನು ಕೃತಕವಾಗಿ ಗರ್ಭದಾರಣೆ ಮಾಡಿದರೆ ಹಸು ಬದುಕುವುದಕ್ಕೇ ಕಷ್ಟವಾಗುತ್ತದೆ. ಬಾವಲಿ ಎಂಬ ಜಾತಿಯ ವೀರ್ಯ ಸಿಕ್ಕುವುದೇ ಕಷ್ಟವಾಗಿದೆ. ಹೆಚ್ಚಿನ ಹಣವನ್ನು ಕೊಟ್ಟು ಗುಜರಾತಿನವರು, ಮದ್ರಾಸ್‌ನವರು, ಊಟಿಯವರು ಕೊಂಡೊಯ್ಯುತ್ತಿರುವುದರಿಂದ ಇವುಗಳು ಬಹಳ ಕಮ್ಮಿಯಾಗಿವೆ. ಇವತ್ತು ಮದ್ರಾಸಿನಿಂದ ತರಿಸಿ ಎಂದು ಏನು ಒಂದು ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ವಿಚಾರ ಮಾಡಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ಅನಿಮಲ್ ಹಸ್ಬೆಂಡರಿ ಇಲಾಖೆ ಬಗ್ಗೆ ಉತ್ತರವನ್ನು ಕೊಟ್ಟು ಕೋರ್ಟುಗಳ ವ್ಯವಹಾರದ ಬಗ್ಗೆ ಹೋಗುವುದಕ್ಕೆ ಮೊದಲು ನಾನು ಒಂದು ಸ್ಪಷ್ಟೀಕರಣವನ್ನು ಕೇಳಬಯಸುತ್ತೇನೆ. ಈಗ ತಾಂತ್ರಿಕ ಪರಿಣತಿಯನ್ನು ಪಡೆದಿರತಕ್ಕ ಅನಿಮಲ್ ಹಸ್‌ಬೆಂಡರಿ

ಇಲಾಖೆಯಲ್ಲಿ ಇರತಕ್ಕ ಅಧಿಕಾರಿಗಳನ್ನು ಎಂದರೆ ಅಲ್ಲಿನ ಡೈರೆಕ್ಟರ್‌ನ್ನು ಆಗಲೀ ಅಥವಾ ಡಾಕ್ಟರ್‌ಗಳನ್ನಾಗಲೀ ವರ್ಗಾವಣೆ ಮಾಡಿ ಬೇರೆ ಇಲಾಖೆಗಳಿಗೆ ಎಂದರೆ ಸಾರ್ವಜನಿಕ ಆಡಳಿತವನ್ನು ಹೊಂದಿರತಕ್ಕ ಇಲಾಖೆಗಳಿಗೆ ಎಂದರೆ ರೆವಿನ್ಯೂ ಇಲಾಖೆಗಳಿಗಾಗಲೀ, 'ಕಾಡಾ' ಯೋಜನೆಗಳಿಗಾಗಲೀ, ವರ್ಗಾವಣೆ ಮಾಡಲಾಗಿದೆಯೋ ?

SRI Y. RAMAKRISHNA.—It doesn't come within the purview of this portfolio. It is the DPAR which deals with the transfer of officers.

SRI B. BASAVALINGAPPA.—I am very sorry that the Hon. Minister is replying in that way. Why are you adopting the tendency of posting the Director of the Animal Husbandry to other Administrative Departments like Revenue, C.A.D.A. etc ? Have you got scheme of that type ?

RI Y. RAMAKRISHNA.—I don't deal with that portfolio. The DPAR is being dealt with by the Chief Minister.

SRI B. BASAVALINGAPPA,—Mr, Speaker Sir, I am putting the specific question. The Director of Animal Husbandry is posted to C.A.D.A. I want to know how he has permitted such a transfer, whether that transfer is in the fitness of things, whether this is the consistent policy of the Government ?

SRI Y. RAMAKRISHNA.—I have made the point very clear, the question of ting is the concern of the Chief Minister.

SRI B. BASAVALINGAPPA.—It is not the question of Chief Minister. Whether the Director of Animal Husbandry can be posted to Revenue Department or C.A.D.A. or to a non-technical department. Please answer squarely.

SRI Y. RAMAKRISHNA.—You are putting the question to a wrong man.

SRI B. BASAVALINGAPPA.—I rise to a point of order. He takes shelter saying that it is the concern of the Chief Minister. Now he is in-charge of the Animal Husbandry Department. Is he not in-charge of the officer of the Animal Husbandry Department.

SRI Y. RAMAKRISHNA.—The matter is pending before the High Court. We cannot have a discussion on this.

SRI B. BASAVALINGAPPA.—Tendency is different but action you have taken is contrary to the public administration You have not control over your own department.

SRI Y. RAMAKRISHNA.—Please note it. The Director of Animal Husbandry is the Head of the Department. He is now under the control of DPAR. The matter is pending before the High Court. I think that is sufficient.

SRI B. BASAVALINGAPPA —You are expressing your helplessness in the matter.

ಶ್ರೀ ವೈ. ರಾಮಕೃಷ್ಣ.—ಶ್ರೀ ರಾಮೇಗೌಡರು ಫ್ರೋಜನ್ ಸಿಮನ್ ಬಗ್ಗೆ ಹೇಳುತ್ತಾ ಅವರ ಮನೆಯಲ್ಲಿ ಈ ಪ್ರಯೋಗದಿಂದ ಹೆಚ್ಚು ಕಡಿಮೆಯಾಗಿದೆಯೆಂದು ಹೇಳಿ ಭಯವನ್ನು ಹುಟ್ಟಿಸಿದ್ದಾರೆ. ಈ ಬಗ್ಗೆ ಎಕ್ಸ್‌ಪರ್ಟ್ಸ್ ಕಳುಹಿಸಿ ನೋಡಿಸಿ ಆ ನಂತರ ಆ ಬಗ್ಗೆ we will take action.

SRI B. BASAVALINGAPPA.—How can you take action when you have no control over your own department ?

ಶ್ರೀ ವೈ. ರಾಮಕೃಷ್ಣ.—ಈ ರೀತಿ ಹೇಳಿದರೆ ಹೇಗೆ? ಇದು ಒಂದು ತರಹ ಜಾಳಗಂಟೆ ಕೆಲಸವಾಗುತ್ತದೆ.

SRI B. BASAVALINGAPPA.—He is promising so many things. I say, since you have no control over your departments with regard to the transfer and posting, you cannot ask people to do certain jobs.

SRI R. GUNDU RAO.—The hon member knows things very well, while he was Minister. Whether he had control over transfer of Deputy Commissioners, Divisional Commissioners or Revenue Secretary. Ordering transfer is the prerogative of the Chief Minister. It has nothing to do with that Minister. Were you competent to transfer Divisional Commissioner or Deputy Commissioner? You were not competent to transfer even a Tahsildar.

SRI B BASAVALINGAPPA.—I am happy that the Chief Minister is present. He was not present when I spoke. I said squarely that the Director of Animal Husbandry, being a technical man, cannot be posted to the Revenue Department or the C.A.D.A.

6-00 P.M.

SRI R. GUNDU RAO.—It is concerned to the Chief Minister and to the D.P.A.R.

MR SPEAKER.—There should not be a dialogue directly between the Hon Chief Minister and the hon, Member. The speech should be addressed to the Speaker. With the permission of the Chair only, the Hon. Member should speak.

SRI B. BASAVALINGAPPA.—Sir, the Hon. Chief Minister always looks to my eyes as a very calm person. He has answered in a very calm manner.

SRI R. GUNDU RAO.—The Hon. Member is wearing cooling glasses today.

SRI B. BASAVALINGAPPA —My question is very simple. I was a Revenue Minister. I had full control over the Revenue Department, as far as the transfers of the Tahsildars are concerned. As regards

the transfers of the Assistant Commissioners and the Deputy Commissioners, I used to recommend and the Chief Minister would accord approval. Now, I put a simple and specific question to the Hon. Chief Minister. Whether or not the Minister incharge of the Department–take for example Animal Husbandry which is held by Sri Ramakrishna–has got any say or recommendatory role in the matter of sending proposals that such and such a person of the Department be transferred? Or whether the Chief Minister himself with out taking any consent of the Minister concerned can transfer officers out of the Department? No doubt, the Chief Minister has got powers in respect of transfers but the question is whether he can make transfers without the prior approval of the proposal of the concerned Minister. I say, that is not right. If there is a technical man, he cannot be transferred to an administrative post.

SRI R. GUNDU RAO.—My intention was not to interfere when the concerned Minister was giving a reply. But since the hon. Member has raised this point, I have to interfere. The Minister incharge of the Animal Husbandry is in full control of the administration of that Department. But the Head of the Department and any other Officer above the Head of the Department directly come under the D.P.A.R. and the Chief Minister. Secondly while transferring the officers in the public interest, it is left to the D.P.A.R. and the Chief Minister. The Chief Minister need not consult the concerned Minister to make transfers. Since last 10 years, this is being done. My friend Sri Basavalingappa knows it very well. Now, his arguement is whether the Director of Animal Husbandry can be transferred to a non-technical Department. It can be done. For example, the C.A.D.A. is a very important institution. The present Chief Secretary was the Administrator of CADA; the present Corporation Administrator was the Administrator of CADA and Divisional Commissioner.

SRI H. D. DEVE GOWDA.—Chief Engineers have been posted as Administrators of CADA.

SRI R. GUNDU RAO.—That is why I am saying this. Just because the Head of the Department is transferred to some post, it does not mean that the concerned Minister is not having control over the Department. The concerned Minister is difenitely having control but when the question of transfers come, various considerations will be there. A Chief Conservator of forests is posted as Administrator, CADA. Two years back when Sri Basavalingappa was Minister, a Chief Conservator of Forests was made the Director of Horticulture. Transfers can be made when the Officer is useful. The question why

he was posted does not arise at all. Whatever the suggestions are given by the member, they will be welcomed. The hon. Member may question why a Chief Engineer be posted as Special Secretary in the Secretariat? Why previously one Chief Engineer was made a Special Secretary to the Government? It is left to the decision of the Government and the Chief Minister. Suggestions are welcome. But suggestion is yours, operation is ours.

SRI B. BASAVALINGAPPA.—I would like to ask the Chief Minister as to whether it is permissible to post some Engineer as a Deputy Commissioner or Divisional Commissioner. Posting some Chief Engineer as an Additional Secretary or Secretary etc., is not outside the jurisdiction. His services, as a technical man, may be required at the Secretariat Level and hence he can be appointed. But whether a doctor can be posted as an administrator? I say, no. Doctors cannot be posted as administrators. It is not correct. If this method is adopted, it may lead to punishmsnt of certain officers who are qualified in certain fields or sciences

ಶ್ರೀ ವೈ. ರಾಮಕೃಷ್ಣ.—ಇನ್ನು ರೆಡ್ ಡೈನ್ ತಳಿಗಳ ಬಗ್ಗೆ ಮಾನ್ಯ ರಾಮೇಗೌಡರು ಹೇಳಿದರು. ಅದು ಒಂದು ಆನಂದಕರವಾದ ಸಂಗತಿ. ನಿಜವಾಗಿಯೂ ಇದು ರೈತರಿಗೆ ಒಂದು ಕಡಿಮೆ ಬೆಲೆಯಲ್ಲಿ ಸಿಕ್ಕ ತಕ್ಕಂಥ ಉತ್ತಮವಾದ ತಳಿಯೆಂದು ಹೇಳಿದರೆ ತಪ್ಪಾಗಲಾರದು. ಈವತ್ತು ಹುಟ್ಟಿದ ಕರುವಿಗೆ ಮೂರು ಸಾವಿರ ನಾಲ್ಕು ಸಾವಿರ ಬೆಲೆಯಾಗುತ್ತದೆ ಎಂದು ಹೇಳಿದರೆ ಸಂತೋಷಪಡತಕ್ಕಂಥ ಸಂಗತಿಯಾಗಿರುತ್ತದೆ. ಮಾನ್ಯ ರಾಮೇಗೌಡರು ಈ ಕರುಗಳನ್ನು ಬಡರೈತರಿಗೆ ಸಬ್‌ಸಿಡಿ ರೇಟ್‌ನಲ್ಲಿ ಹಂಚಿ ಎಂದು ಹೇಳಿದರು. ಅವರು ಹೇಳಿದ್ದರಲ್ಲಿ ಭಿನ್ನಾಭಿಪ್ರಾಯವೇನು ಇಲ್ಲ. ಈಗ ನಮ್ಮಲ್ಲಿ ೫೦-೬೦ ಕರುಗಳು ಇವೆ. ಅದರ ಸಂಖ್ಯೆಯನ್ನು ನೂರಕ್ಕೆ ಹೆಚ್ಚಿಸಿ ಅದನ್ನು ಹಂಚಿಸೋಣವೆಂದು ಇಟ್ಟುಕೊಂಡಿರುತ್ತೇವೆ. ಈಗಾಗಲೇ ವಯಸ್ಸಿಗೆ ಬಂದವುಗಳನ್ನು ಆದಷ್ಟು ಜಾಗ್ರತೆಯಾಗಿ ಹಂಚಲು ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಜೆ. ಎಚ್. ಪಟೇಲ್.— ಮಾನ್ಯ ಮಂತ್ರಿಗಳು ಡಿಪಾರ್ಟ್‌ಮೆಂಟ್ ಅಫಿಷಿಯಲ್ಸ್ ಟ್ರಾನ್ಸ್‌ಫರ್ ಬಗ್ಗೆ, ಅದು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟದ್ದು ಎಂದು ಹೇಳಿದರು, ಕೊನೆಪಕ್ಷ ಅಲ್ಲಿ ಎಷ್ಟು ಹಸುಗಳು, ಎಷ್ಟು ಕುರಿಗಳು ಇವೆ ಎನ್ನುವುದನ್ನಾದರೂ ಹೇಳುವುದಕ್ಕೆ ಆಗುತ್ತದೆಯೋ ಎಂದು ಕೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಮಿಶ್ರತಳಿ ಕರುಗಳನ್ನು ನಾವು ೫ ಕಡೆಗಳಲ್ಲಿಯೇ ಅಲ್ಲ ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಇಡಬೇಕೆಂದು ನಮ್ಮ ಆಶಯವಿರುತ್ತದೆ. ಪ್ರತಿಯೊಂದು ಜಿಲ್ಲೆಯಲ್ಲೂ ಇಂಥ ಒಂದು ಪ್ರಾಜೆಕ್ಟನ್ನು ಮಾಡಿ ಲ್ಯಾಂಡ್ ಲೆಸ್ ಲೇಬರರ್ಸ್ ಏನು ಇದ್ದಾರೆ ಅಂಥವರ ಅಭಿವೃದ್ಧಿಗೋಸ್ಕರವಾಗಿ ಈ ಯೋಜನೆಯನ್ನು ತರಬೇಕು ಎನ್ನುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ಸಲಹೆ ಕೊಟ್ಟಿರುವುದೇನೆಂದರೆ ಹಳ್ಳಿಕಾರ್ ತಳಿಯನ್ನು ಅಭಿವೃದ್ಧಿಪಡಿಸಬೇಕಾದ್ದು. ಅದನ್ನು ನಾನು ಒಪ್ಪುತ್ತೇನೆ. ಪ್ರಪ್ರಥಮವಾಗಿ ಹಳ್ಳಿಕಾರ್ ತಳಿ ಕಾಪಾಡುವುದಕ್ಕೋಸ್ಕರದ ಒಂದು ಫಾರಮ್ ಮಾಡಲು ಈಗಾಗಲೇ ಕೈಗೊಂಡಿದ್ದೇವೆ. ಕುಂಕನಹಳ್ಳಿ, ತುಮಕೂರು ಜಿಲ್ಲೆ. ಇಲ್ಲಿ ಈ ತಳಿಯ ಅಭಿವೃದ್ಧಿಗೋಸ್ಕರವಾಗಿ ಈ ಫಾರಮ್ ತೆಗೆದುಕೊಳ್ಳುವುದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಮೃತಮಹಲ್, ಹಳ್ಳಿಕಾರ್ ತಳಿ ಏನು ಇದೆ ಅದನ್ನು ಅಭಿವೃದ್ಧಿಪಡಿಸಿ ರೈತರಿಗೆ ಉಪಯೋಗವಾಗುವಂಥ ರೀತಿಯಲ್ಲಿ ಹಂಚುವುದಕ್ಕೆ ಏರ್ಪಾಡು ಮಾಡುತ್ತೇವೆ.

ಇನ್ನು ಅಮೃತಮಹಲ್ ಕಾವಲ್ ವಿಚಾರದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಾನಾದರೂ ಹೇಳುವುದೇನೆಂದರೆ ಹಿಂದೆ ಈ ಅಮೃತಮಹಲ್ ಕಾವಲು ೨ ಲಕ್ಷ ಎಕರೆ ಇತ್ತು. ಆದರೆ

ಅದೆಲ್ಲಾ ಹೋಗಿ ಇವತ್ತು ಕೇವಲ ೫೦ ಸಾವಿರ ಎಕರೆಗೆ ಇಳಿದಿದೆ. ಆದ್ದರಿಂದ ಈಗ ನಾವು ಅಂತಿಮವಾಗಿ ಒಂದು ನಿರ್ಧಾರಕ್ಕೆ ಬಂದು ಇನ್ನು ಮುಂದೆ ಯಾರಿಗೂ ಯಾವುದೇ ಸಂದರ್ಭದಲ್ಲೂ ಈ ಅಮೃತಮಹಲ್ ಕಾವಲಿನಲ್ಲಿ ೧ ಎಕರೆಯನ್ನೂ ಕೂಡ ಯಾರಿಗೂ ಕೊಡಕೂಡದೆಂದು ಮಾಡಿದ್ದೇವೆ. ಈ ೫೦ ಸಾವಿರ ಎಕರೆಯಲ್ಲಿ ಹುಲ್ಲು ಬೆಳೆಯುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇತ್ತೀಚೆಗೆ ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮಿಷನ್‌ನ ಸದಸ್ಯರಾದ ಶ್ರೀಮಾನ್ ಸ್ವಾಮಿನಾಥನ್‌ರವರು ಬಂದಿದ್ದರು. ಅವರು ನಮ್ಮ ಫೈನಾನ್ಸ್ ಮಿನಿಸ್ಟರ್‌ರವರ ಜೊತೆಯಲ್ಲಿ ಮಾತನಾಡುತ್ತಿದ್ದಾಗ್ಗೆ ನಾನು ಅವರನ್ನು ರಿಕ್ವೆಸ್ಟ್ ಮಾಡಿಕೊಂಡು, ನಾವು ಸುಮಾರು ೨೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ ಅದಕ್ಕೆ ತಾವು, ಮಂಜೂರಾತಿಯನ್ನು ಮತ್ತು ಹಣವನ್ನು ನೀಡಬೇಕೆಂದು ಕೋರಿದ್ದೇವೆ. ಈಗಾಗಲೇ ಈ ಯೋಜನೆಯನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅವರು ಅದನ್ನು ಮಂಜೂರು ಮಾಡಿಕೊಡುತ್ತಾರೆಂಬ ಭರವಸೆ ನನಗಿದೆ. ಆದರೆ ಈ ಯೋಜನೆಗೆ ತಗಲಬಹುದಾದ ಎಲ್ಲ ಹಣವನ್ನೂ ಒಟ್ಟಿಗೆ ಕೊಡಲಾರರೆಂದು ನನಗನಿಸುತ್ತದೆ. ಅಂದರೆ ಹಂತ ಹಂತವಾಗಿ ಕೊಡುವ ಸಂಭವ ಇದೆ. ಈ ಹಣ ನಮಗೆ ಸಿಕ್ಕಿದರೆ ಅಮೃತ್ ಮಹಲ್ ಕಾವಲ್‌ನಲ್ಲಿ ಫಾಡರ್‌ನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಇನ್ನು ಅನಿಮಲ್ ಹಸ್ಬೆಂಡರಿ ವಿಚಾರದಲ್ಲಿ ಹೇಳುವುದಾದರೆ......

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಮಾತ್ರ ಹೇಳ ಬಯಸುತ್ತೇನೆ. ಈ ಅಮೃತಮಹಲ್ ಕಾವಲ್‌ನಲ್ಲಿ ಸುಮಾರು ೨೦-೩೦ ವರ್ಷಗಳಿಂದಲೂ ಬಗರ್ ಹುಕುಂ ಸಾಗುವಳಿಯನ್ನು ಕೆಲವರು ಮಾಡಿಕೊಂಡು ಬರುತ್ತಿದ್ದಾರೆ ಇದು ಹೆಚ್ಚಾಗಿ ಕಡೂರು ಮತ್ತು ಹಾಸನ ಜಿಲ್ಲೆಯ ಕೆಲವು ಕಡೆಗಳಲ್ಲಿ ಇದೆ. ಅವರನ್ನು ತಾವು ಅಲ್ಲಿಂದ ಬಿಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಬಹಳ ಹಿಂದೆಯೇ ಒಂದು ನಿರ್ಣಯವನ್ನು ಮಾಡಿದ್ದೇವೆ ಯಾರ್‍ಯಾರು ಬಹಳ ವರ್ಷಗಳಿಂದ ೨-೩-೫ ಎಕರೆ ಜಮೀನನ್ನು ಬಗರ್ ಹುಕುಂ ಮಾಡಿಕೊಂಡು ಬರುತ್ತಿದ್ದಾರೆ, ಆ ಜಮೀನನ್ನು ಅವರವರಿಗೇ ಕೊಡಬೇಕೆಂದು. ಆದ್ದರಿಂದ ತಾವೂ ಕೂಡ ಈ ಬಗರ್ ಹುಕುಂ ಮಾಡುತ್ತಿರುವ ಜನರಿಗೇ ಆ ಜಮೀನನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಹಿಂದೆ ೨ ಲಕ್ಷ ಎಕರೆ ಇದ್ದುದು ಇವತ್ತು ೫೦ ಸಾವಿರ ಎಕರೆಗೆ ಇಳಿದಿದೆ. ಇದರಲ್ಲಿ ಇನ್ನು ಒಂದೇ ಒಂದು ಅಂಗುಲ ಜಾಗವನ್ನೂ ಬೇರೆಯವರಿಗೆ ಕೊಡುವುದಕ್ಕಾಗುವುದಿಲ್ಲ. ಇದರಲ್ಲಿ ಅನಿಮಲ್ ಹಸ್ಬೆಂಡರಿ ಮತ್ತು ಅಗ್ರಿಕಲ್ಚರ್‌ಗೆ ಉಪಯೋಗಿಸಬೇಕಾಗುತ್ತವೆ.

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ, ಹಿಂದೆ ಶೇರ್ವೇಗಾರರು ಎಂದು ಲೇಬಲ್ ಹಚ್ಚಿಕೊಂಡು ಕೆಲವರು ಆ ಜಮೀನನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಅವರಿಗೆ ಈಗ ೫೦-೧೦೦ ಎಕರೆ ಇದ್ದರೆ ಆ ಜಮೀನಿನ ಜೊತೆಗೆ ಇನ್ನೂ ೫೦-೧೦೦ ಎಕರೆ ಜಮೀನನ್ನು ತೆಗೆದುಕೊಳ್ಳುವುದಕ್ಕೆ ಸಂಚು ಮಾಡುತ್ತಿದ್ದಾರೆ. ಅಂಥವರು ಬಹಳ ಜನ ಇದ್ದಾರೆ. ತಮಗೆ ಬೇಕಾದರೆ ಒಂದು ದೊಡ್ಡ ಪಟ್ಟಿಯನ್ನೇ ಕೊಡುತ್ತೇನೆ. ಇದನ್ನು ತಾವು ಏನಾದರೂ ಮಾಡಿ ತಪ್ಪಿಸಬೇಕು. ಹಿಂದೆ ಮಾನ್ಯ ಬಸವಲಿಂಗಪ್ಪನವರೇ ಮಾನ್ಯ ಕಂದಾಯ ಮಂತ್ರಿಯವರಾಗಿದ್ದಾಗ ಹಂಚಿದ್ದರು. ಈಗ ಇದನ್ನು ಕೊಡದಹಾಗೆ ವಾಪಸ್ಸು ತೆಗೆದುಕೊಳ್ಳುತ್ತೀರಾ?

ಶ್ರೀ ವೈ. ರಾಮಕೃಷ್ಣ.—ಕೇಂದ್ರ ಸರ್ಕಾರದವರು ನಮಗೆ ಹಣವನ್ನು ಕೊಡುವುದಿಲ್ಲ. ಈ ಅಮೃತ್‌ಮಹಲ್ ಕಾವಲ್‌ನಲ್ಲಿ ಒಂದು ಎಕರೆ ಜಾಗವನ್ನು ಯಾರಿಗೂ ಕೊಡುವುದಿಲ್ಲವೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅವರಿಗೆ ಕೊಟ್ಟಿರತಕ್ಕ ಜಮೀನನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕಂಡು ಬಂದರೆ ಅದನ್ನು ತೆಗೆದುಕೊಳ್ಳೋಣ.

ಶ್ರೀ ಹೆಚ್ ಡಿ. ದೇವೇಗೌಡ.—ಶೇರ್ವೇಗಾರರಿಗೆ ಅವರು ಸಲ್ಲಿಸಿರುವ ಸೇವೆಗೆ ಹಣವನ್ನು ಬೇಕಾದರೆ ಕೊಡಿ ಆದರೆ ಅವರಿಗೆ ೫೦-೧೦೦ ಎಕರೆ ಜಮೀನನ್ನು ಕೊಡುವುದಕ್ಕೆ ಮಾತ್ರ ಹೋಗಬೇಡಿ.

ಶ್ರೀ ವೈ. ರಾಮಕೃಷ್ಣ.—ಯಾರಿಗೇ ಆಗಲಿ ಒಂದು ಎಕರೆಯನ್ನೂ ಕೊಡುವುದಿಲ್ಲವೆಂದು ನಾವು ನಿರ್ಧಾರವನ್ನು ಮಾಡಿದ್ದೇವೆ.

ಇನ್ನು ರೆಂಡರ್‌ಪೆಸ್ಟ್ ವಿಚಾರದಲ್ಲಿ ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್‌ರವರು ಮತ್ತು ಆರ್ಮುಗಂ ರವರು ಮಾತನಾಡುತ್ತಾ ರೆಂಡರ್‌ಪೆಸ್ಟ್ ರೋಗ ಕಂಟೋನ್ಮೆಂಟ್‌ನಲ್ಲಿ ಆಗಿದೆ ಎಂದು ಹೇಳಿದರು. ಆದರೆ ಕಂಟೋನ್ಮೆಂಟ್‌ನಲ್ಲಿ ಆಗಿರತಕ್ಕದು ರೆಂಡರ್‌ಫೆಸ್ಟ್ ಅಲ್ಲ, ಅದು ಬೇರೆ ಕಾಯಿಲೆ. ಆದರೆ ಅದು ರೆಂಡರ್ ಪೆಸ್ಟ್ ಖಾಯಿಲೆ ಎಂದು ಅವರು ತಿಳಿದುಕೊಂಡರೆ ಅದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಈಗತಾನೆ ನಾನು ಫೋನ್‌ಮಾಡಿ ವಿಷಯವನ್ನು ತರಿಸಿಕೊಂಡಿದ್ದೇನೆ. ಬೇಕಾದರೆ ಇದನ್ನು ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಕಳುಹಿಸಿಕೊಡುತ್ತೇವೆ. ಅವರೇ ನೋಡಲಿ.

ಇನ್ನು ಕಾಲು ಮತ್ತು ಬಾಯಿ ರೋಗಕ್ಕೆ ಸಂಬಂಧಿಸಿದ ವ್ಯಾಕ್ಸಿನ್ ಬಗ್ಗೆ ಅವರು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನು ಐ.ಸಿ.ಎ.ಆರ್.ನ ಒಬ್ಬ ಸದಸ್ಯನಾಗಿದ್ದೇನೆ ನಾನು ಈ ಖಾತೆಯನ್ನು ವಹಿಸಿ ಕೊಂಡಮೇಲೆ ಡೆಲ್ಲಿಗೆ ಹೋದೆ. ಅಲ್ಲಿ ನಾನು ಭಾಷಣ ಮಾಡಿದ್ದು ಅದೇ ಮೊದಲು. ಅಲ್ಲಿ ಭಾಷಣ ಮಾಡುತ್ತಿರುವಾಗ ಈ ವಿಚಾರದಲ್ಲಿ ನಮ್ಮ ಇಡೀ ದೇಶಕ್ಕೆ ಎಷ್ಟು ಕಮಿಟ್‌ಮೆಂಟ್ ಆಗಬಹುದೆಂದು ಕೇಳಿದರು. ಸುಮಾರು ೨ ಲಕ್ಷ ಆಗಬಹುದೆಂದು ನಾನು ಹೇಳಿದೆ. ಕಾಲು ಮತ್ತು ಬಾಯಿ ರೋಗದ ವ್ಯಾಕ್ಸಿನೇಷನ್‌ಗೆ ಸರ್ಕಾರದವರು ಛಾರ್ಜ್ ಮಾಡಬಾರದೆಂದು ನಾನು ಕೇಳಿಕೊಂಡೆ ಈ ರೆಂಡರ್‌ಪೆಸ್ಟ್ ಮತ್ತು ಫುಟ್ ಅಂಡ್ ಮೌತ್‌ಗೆ ಸಂಬಂಧಪಟ್ಟ ವ್ಯಾಕ್ಸಿನೇಷನ್‌ನ್ನು ತೆಗೆದುಕೊಳ್ಳುತ್ತಿರುವುದರಲ್ಲಿ ನಮ್ಮ ಕರ್ನಾಟಕವೇ ಮೊಟ್ಟಮೊದಲನೆಯದು. ಒಂದು ಇಂಜಕ್ಷನ್ ಟ್ಯೂಬ್‌ಗೆ ೮ ರೂಪಾಯಿ ಆಗುತ್ತದೆ. ಇದನ್ನು ಬಡ ರೈತ ದುಡ್ಡು ಕೊಟ್ಟು ತರುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಮಾತನಾಡುತ್ತಾ ಸರ್ಕಾರದವರು ಕೊಡುವ ಔಷಧಿ ಸಬ್‌ಸ್ಟ್ಯಾಂಡರ್ಡ್ ಆಗಿರುತ್ತದೆ. ಅದರಲ್ಲಿ ಇರಬೇಕಾದ್ದು ಇರುವುದಿಲ್ಲ ಎಂದು ಹೇಳಿದರು. ನಾವು ಔಷಧಿಯನ್ನು ಕೊಟ್ಟಮೇಲೆ ರೆಸ್ಪಾಂಡ್ ಆಗಿದ್ದರೆ ನಮಗೂ ಹಾಗೆಯೇ ಅನಿಸುತ್ತದೆ ಎಸ್.ಪಿ.ಡಿ ಯವರು ಈ ಔಷಧಿ ಗಳನ್ನು ಕೊಳ್ಳುವಾಗ ಲೋಯಸ್ಟ್ ಕೊಟೇಷನ್ ಕೇಳುತ್ತಾರೆ, ಫ್ಯಾಕ್ಟರಿಯವರು ಸ್ಯಾಂಪಲ್ ಕೊಡುವಾಗ ಒಳ್ಳೆಯದನ್ನು ಕೊಟ್ಟು ಸಪ್ಲೈ ಮಾಡುವಾಗ ಬೇರೆ ಕ್ವಾಲಿಟಿಯದನ್ನು ಕೊಡಬಹುದೆಂದು ಕಾಣುತ್ತದೆ. ಆದ್ದರಿಂದ ನನ್ನ ಒಂದು ಸಲಹೆ ಏನೆಂದರೆ, ನಾವು ಪ್ರತಿವರ್ಷವೂ ಸುಮಾರು ೧ ಕೋಟಿ ರೂಪಾಯಿಯಷ್ಟು ಔಷಧಿಗಳನ್ನು ಹೊರಗಡೆಯಿಂದ ತರಿಸಿಕೊಳ್ಳುತ್ತಿದ್ದೇವೆ, ಇದಕ್ಕೆ ಬದಲಾಗಿ ನಮ್ಮ ರಾಜ್ಯದಲ್ಲಿಯೇ ಒಂದು ಫಾರ್ಮಸಿಯನ್ನು ಸ್ಥಾಪನೆ ಮಾಡಿ ನಮಗೆ ಬೇಕಾದ ಔಷಧಿಗಳನ್ನೆಲ್ಲಾ ಇಲ್ಲೇ ತಯಾರಿಸಿಕೊಳ್ಳುವುದು ಉತ್ತಮ. ಅಲ್ಲದೆ ಹೆಚ್ಚು ತಯಾರಿಸಿದರೆ ಹೊರಗಡೆಗೂ ಕಳುಹಿಸಿಕೊಟ್ಟು ಆದಾಯವನ್ನು ಸಂಪಾದನೆ ಮಾಡಿಕೊಳ್ಳಬಹುದು. ಉದಾಹರಣೆಗೆ ಹೇಳುವುದಾದರೆ ಹೆಬ್ಬಾಳದಲ್ಲಿರುವ ಇನ್‌ಸ್ಟಿಟ್ಯೂಟ್‌ನಿಂದ ವೆಸ್ಟ್ ಬಂಗಾಳಕ್ಕೆ ಕೆಲವು ಔಷಧಿಗಳನ್ನು ಕಳುಹಿಸಿಕೊಡುತ್ತಿದ್ದೇವೆ. ಇವತ್ತು ಅದು ಏರ್‌ಲಿಫ್ಟ್ ಮಾಡಿರಬಹುದು. ಅಂತೂ ಇನ್ನೂ ಕೆಲವೇ ದಿವಸಗಳಲ್ಲಿ ನಮ್ಮ ರಾಜ್ಯದಲ್ಲೇ ಒಂದು ಫಾರ್ಮಸಿಯನ್ನು ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇನೆ.

ಇನ್ನು ಮದರ್ ಡೈರಿ ಕೆ.ಡಿ.ಡಿ.ಸಿ. ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳಿದರು. ಇದು ಬೆಂಗಳೂರಿನಲ್ಲಿರತಕ್ಕದ್ದು. ಮಾನ್ಯ ಸದಸ್ಯರಾದ ಶ್ರೀಮಾನ್ ರಾಮೇಗೌಡರವರಿಗೆ ನನಗಿಂತಲೂ ಹೆಚ್ಚಿನ ವಿಚಾರ ಗೊತ್ತಿರಬಹುದು ನಾವು ಈ ಡೈರಿ ಡೆವಲಪ್‌ಮೆಂಟ್‌ಗೆ ಸರಿಯಾದ ಸ್ಥಳ ಬೇಕೆಂದು ಹೆಬ್ಬಾಳದ ಹತ್ತಿರವೋ ಅಥವಾ ಜಕ್ಕೂರು ಹತ್ತಿರವೋ ಎಲ್ಲೋ ಒಂದು ಕಡೆ ನೋಡಿದರು. ಆದರೆ ಅಲ್ಲಿ ತಾವು ಹೇಳಿದಂತೆ ಲ್ಯಾಂಡ್ ಲಿಟಿಗೇಷನ್ ಬಂದಿದ್ದರಿಂದ ಬೇರೆಕಡೆ ಸೈಟನ್ನು ಸೆಲೆಕ್ಟ್ ಮಾಡಬೇಕಾಗಿ ಬಂತು. ಇದು ಹೆಚ್.ಎ.ಎಲ್. ಹತ್ತಿರ ಇದೆ. ಆದಷ್ಟು ಜಾಗ್ರತೆ ಇದರ ಕೆಲಸಕಾರ್ಯಗಳು ಪ್ರಾರಂಭವಾಗುವಂತೆ ನೋಡುತ್ತೇವೆ. ಹಾಲಿನ ವಿಚಾರದಲ್ಲಿ ಹೇಳುವುದಾದರೆ, ಮಾನ್ಯ ಸದಸ್ಯರು ಹೇಳಿದ ವಿಚಾರಗಳನ್ನು ನಾನೇ ಒಪ್ಪಿಕೊಂಡಿದ್ದೇನೆ. ಇವತ್ತು ಹಸುವಿನ ಬೆಲೆ ಜಾಸ್ತಿಯಾಗಿದೆ, ಹುಲ್ಲಿನ ಬೆಲೆ ಜಾಸ್ತಿಯಾಗಿದೆ ಹಸುವಿಗೆ ಹಾಕುವ ಹಿಂಡಿ, ಬೂಸಾದ ಬೆಲೆ ಕೂಡ ಜಾಸ್ತಿಯಾಗಿದೆ ಅಂದಮೇಲೆ ಹಸುವಿನ ಹಾಲಿನ ಬೆಲೆಯೂ ಜಾಸ್ತಿಯಾಗಲೇಬೇಕು. ಹಸುಗಳನ್ನು ಸಾಕಿರುವವನೂ ಬದುಕಬೇಕಲ್ಲವೆ ? ಸರ್ಕಾರದವರು ಈ ವಿಚಾರವನ್ನು ಒಪ್ಪಿಕೊಂಡು ಒಂದು ಸಮಿತಿಯನ್ನು ಮಾಡಬೇಕೆಂದು ಮಾಡಿದ್ದಾರೆ.

ಶ್ರೀ ಪಿ. ರಾಂದೇವ್.—ಆ ಸಮಿತಿಯಲ್ಲಿ ಕನ್‌ಸ್ಯೂಮರ್‌ನ್ನೂ ಹಾಕಬೇಕು.

ಶ್ರೀ ವೈ. ರಾಮಕೃಷ್ಣ.—ಕನ್‌ಸ್ಯೂಮರ್‌ನ್ನೂ ಅದರಲ್ಲಿ ನಾವು ಹಾಕಬೇಕಾಗುತ್ತದೆ.

SRI M. C. NANAIAH.—I appeal to the Hon'ble Minister to forget urban population. Please think of rural population.........

ಶ್ರೀ ವೈ. ರಾಮಕೃಷ್ಣ.—ಮಾನ್ಯ ಸ್ನೇಹಿತರಾದಂಥ ಲಕ್ಷ್ಮೀಸಾಗರ್ ಹಾಗೂ ಮಾನ್ಯ ರಾಮದೇವ್ ರವರು ಹಾಲು ವಿಚಾರದಲ್ಲಿ. ಹಾಲಿನಲ್ಲಿರುವ ಪೌಷ್ಟಿಕಾಂಶವನ್ನು ತೆಗೆಯುವುದು ಬೇಡ ಮತ್ತೆ ಹಾಲಿನ ಹೆಚ್ಚಿಸುವುದು ಸರಿಯಾದುದಲ್ಲವೆಂದು ಹೇಳಿದರು. ಆದರೆ ಆ ಅನಿಮಲ್ಸಿಗೆ ಕೊಡುವ ಎಲ್ಲಾ ಆಹಾರದ ಬೆಲೆ ಜಾಸ್ತಿಯಾಗಿರುವಾಗ ಹಾಲಿಗೆ ಜಾಸ್ತಿ ಬೆಲೆ ಹಾಕಬಾರದು ಎಂದು ಹೇಳಿದರೆ ಹೇಗೆ ? ಆದ್ದರಿಂದ ಹಾಲಿನ ಬೆಲೆಯನ್ನು ಜಾಸ್ತಿಮಾಡಬೇಕಾಗುತ್ತೆ ಅದನ್ನು ಕೊಡಲೆ ಬೇಕಾಗುತ್ತದೆ.

SRI A. LAKSHMI SAGAR.—This is a very unreasonable attitude on the part of the Government. I must protest against this attitude of the Hon'ble Minister. We cannot forget the interest of the urban oppulation...........

ಶ್ರೀ ಕೆ. ಎಚ್. ಪನುಮೇಗೌಡ.—ಮಾನ್ಯ ಅಧ್ಯಕ್ಷರೆ. ರೈತನ ಪ್ರಶ್ನೆ ಬಂದಾಗ ಮಾನ್ಯ ಸದಸ್ಯರು ಏತಕ್ಕೆ ಪ್ರೊಟೆಸ್ಟ್ ಮಾಡುತ್ತಾರೆ. ಬೇರೆ ಯಾವುದೇ ಬೆಲೆ ಜಾಸ್ತಿಯಾದರೆ ಸದ್ದು ಮಾಡುವುದಿಲ್ಲ. ಅದೇ ರೈತನ ಬಗ್ಗೆ ಏತಕ್ಕೆ ಈ ರೀತಿ ಮಾಡುತ್ತಾರೆ ?

ಶ್ರೀ ವೈ. ರಾಮಕೃಷ್ಣ.—ಈ ವಿಷಯದಲ್ಲಿ ಮಾತ್ರ ಮತ್ತೆ ಹಿಂದೆ ಹೋಗುವುದಿಲ್ಲ. ಜಾಸ್ತಿ ಮಾಡೇ ಮಾಡುತ್ತೇವೆ. ತಾವೆಲ್ಲರೂ ಕೊಡಬೇಕಾಗುತ್ತದೆ.

SRI A. LAKSHMI SAGAR.—I appeal to the Hon'ble Minister to look into the interest of urban population also...........

ಶ್ರೀ ವೈ. ರಾಮಕೃಷ್ಣ.—ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ರೈತನ ಕಷ್ಟವನ್ನು.........

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಹಳ್ಳಿ ರೈತರ ವಿಚಾರ ಹಾಗಿರಲಿ ಆದರೆ ಪಟ್ಟಣದ ಹಸುಗಳನ್ನು ಬೀದಿಯಲ್ಲಿ ಬಿಟ್ಟು ಮನೆಗೆ ಬಂದಾಗ ಹಾಲು ಕರೆದುಕೊಳ್ಳುವವರಿಗೆ ಮೊದಲು ಕಾನೂನಿನಲ್ಲಿ ಪನಿಷ್ ಮಾಡುವ ರೀತಿ ಏನಾದರೂ ಸರ್ಕಾರದವರು ಕಾನೂನು ಮಾಡಬೇಕೆಂದು ಹೇಳುತ್ತೇನೆ,

ಶ್ರೀ ವೈ. ರಾಮಕೃಷ್ಣ.—ಇನ್ನು ದನಕರುಗಳಿಗೆ ಫೀಡ್ ತಯಾರು ಮಾಡುವ ಬಗ್ಗೆ ಇದನ್ನು ವಿಚಾರ ಮಾಡಿದ್ದೇವೆ ; ಮಂಡ್ಯಾ ಜಿಲ್ಲೆಯಲ್ಲಿ ನಾವು ಹೊಸದಾಗಿ ಒಂದು ಫ್ಯಾಕ್ಟರಿ ಮಾಡುತ್ತಾ ಇದ್ದೇವೆ. ಆದಷ್ಟು ಜಾಗ್ರತೆ ಮಾಡಲು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಜೊತೆಗೆ ಈ ಮಿಶ್ರತಳಿ ಬಗ್ಗೆ ಮಾನ್ಯ ಶ್ರೀ ರಾಮೇಗೌಡರು ಒಂದು ಸಲಹೆಯನ್ನು ಕೊಟ್ಟಿದ್ದಾರೆ, ಅದು ಏನು ಎಂದರೆ ಕನಿಷ್ಠ ೧೦ ಲೀಟರ್ ಹಾಲು ಕೊಡತಕ್ಕಂಥ ತಳಿಯನ್ನು ನಮ್ಮ ರಾಜ್ಯದಲ್ಲಿ ಅಭಿವೃದ್ಧಿಪಡಿಸಬೇಕೆಂದು. ಇದನ್ನು ನಾನು ಕೂಡ ಒಪ್ಪುತ್ತೇನೆ ಶ್ರೀಮಾನ್ ರಾಮೇಗೌಡರು ಹೇಳಿದ್ದಕ್ಕೆ, ಒಂದು ಉದಾಹರಣೆಯನ್ನು ಹೇಳುತ್ತೇನೆ. ಅಗ್ರೋ ಫೆಡರೇಷನ್‌ನ ಆಶ್ರಯದಲ್ಲಿ ಹಿಂದೆ ಹೊರದೇಶದಲ್ಲಿ ಈ ರೀತಿ ಮಿಶ್ರ ತಳಿಗಳು ೩೦–೪೦ ಲೀಟರ್ ಅಲ್ಲ, ಅಲ್ಲಿ ೬೩-೫೫ ಲೀಟರ್ ಹಾಲು ಕೊಡುವಂತಹ ಅನಿಮಲ್ಸ್ ಬೇಕಾದಷ್ಟು ಇದೆ, ಆದ್ದರಿಂದ ಅದಕ್ಕೆ ನಾವು ಒಂದು ಅಗ್ರಿಮೆಂಟ್ ಮಾಡಿಕೊಳ್ಳುವುದರಲ್ಲಿದ್ದೇವೆ, ಜೊತೆಗೆ ಇನ್ನೂ ಹೆಚ್ಚಿನ ಅಭಿವೃದ್ಧಿಪಡಿಸುವುದಕ್ಕೋಸ್ಕರ ಆಲೋಚನೆ ಮಾಡುತ್ತಾ ಇದ್ದೇವೆ. ಇದನ್ನು ಮಾಡಬೇಕಾದರೆ ಅದು ರೈತರನ್ನು ಅವಲಂಬಿಸಿದೆ. ಇದು ಸರ್ಕಾರದ ಪ್ರೋಗ್ರಾಂ ಅಲ್ಲ, ಇದು ರೈತರ ಪ್ರೋಗ್ರಾಂ ಆಗ ಬೇಕೆಂಬುದೇ ನನ್ನ ಆಸೆ. ಅವರಿಗೆ ಬೇಕಾದರೆ ಸಬ್ಸಿಡಿ ಮತ್ತು ಮೇವಿನಲ್ಲಿ ಸ್ವಲ್ಪ ಕನ್ಸೀಷನ್ ಕೊಡ ಲಾಗುತ್ತದೆ ; ಕಾರಣ, ಒಂದು ರೀತಿಯ ಇನ್ಸೆಂಟೀವ್ ಕೊಡುವಂತಾದ್ದು ಮಾಡಬೇಕಾಗಿದೆ. ಎಲ್ಲಾ ಪ್ರೋಗ್ರಾಂನ್ನು ಸರ್ಕಾರ ತೆಗೆದುಕೊಳ್ಳುವುದು ಸರಿಯಲ್ಲ. ಅಗ್ರೋ ಫೆಡರೇಷನ್‌ರವರಿಗೆ ಜಮೀನನ್ನು ಲಕ್ಕಿಹಳ್ಳಿಯಲ್ಲಿ ಕೊಟ್ಟಿದೆ, ಇದು ಯಶಸ್ವಿಯಾದರೆ ಮುಂದೆ ಒಂದೊಂದು ಡಿಸ್ಟ್ರಿಕ್ಟ್‌ನಲ್ಲಿ ಕೂಡ ತೆಗೆಯು ತ್ತೇವೆ, ಆಮೇಲೆ ತಾಲ್ಲೂಕು ಮಟ್ಟದಲ್ಲಿ ಕೂಡಾ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಯಾವುದಾದರು ರೈತರಿಗೆ ಪರಿಹಾರ ಕೊಡಬೇಕೆಂದರೆ ಪ್ರತಿಭಟಿಸುತ್ತಾರೆ, ಅದೇ ಮಾಂಸದ ಬೆಲೆ ಕೇಜೀಗೆ ೨೫ ರೂಪಾಯಿಗೆ ಹೋಗಿದೆ, ಸುಮ್ಮನೆ ಇದ್ದಾರೆ. ಅದೇ ಹಾಲಿಗೆ ನಾಲ್ಕು ಆಣೆ ಜಾಸ್ತಿ ಅಥವಾ ಅಕ್ಕಿಗೆ

ನಾಲ್ಕು ಆಣೆ ಜಾಸ್ತಿ ಎಂದರೆ ಏಕೇ ತೊಂದರೆ ಬೀಳುತ್ತೀರಿ ? ಮಾಂಸದ ಬೆಲೆ ೨೫ ರೂಪಾಯಿ ಆದರೂ ಕೂಡ ತಿನ್ನುವವರು ತಿನ್ನುತ್ತಲೇ ಇದ್ದಾರೆ. ಆದ್ದರಿಂದ ಮಾಂಸವನ್ನು ಎಸೆನ್ಸಿಯಲ್ ಕಮಾಡಿಟೀಸ್‌ನಲ್ಲಿ ಏತಕ್ಕೆ ತರಬಾರದು ಎಂದು ಯೋಚಿಸುತ್ತಿದ್ದೇವೆ, ಆ ರೀತಿ ಆ ಕಾನೂನಿನಲ್ಲಿ ತಂದು ಇದರ ಪ್ರೈಸ್ ಕಂಟ್ರೋಲ್ ಏಕೆ ಮಾಡಬಾರದು ? ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುರಿ ಮೇಕೆಗಳನ್ನು ತೆಗೆದು ಕೊಳ್ಳುತ್ತಿದ್ದಾರೆ......

ಶ್ರೀ ರಾಮಚಂದ್ರ ರೆಡ್ಡಿ.—ಮಾಂಸದ ಬೆಲೆಯನ್ನು ಕಂಟ್ರೋಲ್ ಮಾಡಿದರೆ ಅದು ಕೂಡಾ ರೈತರಿಗೇ ತೊಂದರೆಯಾಗುವುದಿಲ್ಲವೇ ? ಒಂದು ಮೇಕೆಯನ್ನು ಸಾಕಿ ಬೆಳೆಸಬೇಕಾದರೆ ಎಷ್ಟು ಕಷ್ಟವಿರುತ್ತದೆ, ಇದನ್ನು ಯೋಚನೆ ಮಾಡಬೇಕಾಗುತ್ತದೆ ?

ಶ್ರೀ ಎಂ. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ, ಮಾಂಸದ ಬೆಲೆ ಕಡಿಮೆಯಾಗಬೇಕಾದರೆ, ಲಿಂಗಾಯಿತರು ಹಾಗೂ ಬ್ರಾಹ್ಮಣರು ಮಾಂಸವನ್ನು ತಿನ್ನದ ರೀತಿ ಮಾಡಿದರೆ ಇದರ ಬೆಲೆ ಕಡಿಮೆಯಾಗುತ್ತದೆ ?

ಶ್ರೀ ಜೆ. ಎಚ್. ಪಟೇಲ್.—ಅದು ಯಾರು ತಿನ್ನುತ್ತಿದ್ದಾರೆ, ಎನ್ನುವುದನ್ನು ಮಾನ್ಯ ಸದಸ್ಯರು ಗುರುತಿಸಿದ್ದಾರೆಯೇ ? ಹಾಗೆ ಗುರುತಿಸಿದ್ದರೆ ಅವರಿಗೇ ನೇರವಾಗಿ ಅವರೇ ಕೇಳಬಹುದಲ್ಲ ? ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು ?

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ಮಾದೇಗೌಡರು ಹಾಲು ಉತ್ಪಾದನೆ ಬಗ್ಗೆ ಇದರಲ್ಲಿ ೩ ಲಕ್ಷ ಜನ ಇದನ್ನೇ ಅವಲಂಬಿಸಿಕೊಂಡಿದ್ದಾರೆಂದು ಹೇಳಿದರು ; ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಇದರ ಬಗ್ಗೆ ನಾವು ಬನ್ನೂರು ಮತ್ತು ಬೈಂದೂರುಗಳಲ್ಲಿ ಎರಡು ಕೇಂದ್ರಗಳನ್ನು ಮಾಡಿದ್ದೇವೆ. ಇನ್ನು ಮೆಡಿಕಲ್ ಕಾಲೇಜುಗಳಿಗೆ ಅಡ್ಮಿಷನ್‌ಗೆ ನೂಕು ನುಗ್ಗಲು ಇದೆ, ಅದೇ ನಮ್ಮ ವೆಟರ್‌ನರಿ ಕಾಲೇಜುಗಳಿಗೆ ಏತಕ್ಕೆ ಇಲ್ಲ ಎಂದು ಕೇಳಿದರು. ಪ್ರಪ್ರಥಮವಾಗಿ ನಾನು ಅಗ್ರಿಕಲ್ಚರಲ್ ಯೂನಿವರ್ಸಿಟಿ ವೈಸ್ ಚಾನ್ಸಲರ್‌ರವರ ಜೊತೆಯಲ್ಲಿ ಬೆಳಿಗ್ಗೆ ಮಾತನಾಡಿಕೊಂಡು ಬಂದಿದ್ದೇನೆ, ಈ ಸಾರಿ ಕನಿಷ್ಟ ೧೦೦ ಜನಕ್ಕಾದರೂ ಈ ಸಾರಿ ಅಡ್ಮಿಷನ್ ಕೊಡದೆ ಹೋದರೆ ನಾವು ಬೇರೆ ಕಾಲೇಜನ್ನೇ ತೆಗೆಯಬೇಕಾಗುತ್ತದೆ. ಆದ್ದರಿಂದ ಈಗ ನಮಗೆ ಬೇಕಾಗಿರುವುದು ಡಾಕ್ಟರ್‌ಗಳು ೩೦೦ ಜನ ಅವರಲ್ಲಿ ೨೫೦ ಡಾಕ್ಟರುಗಳನ್ನು ರಿಸರ್ಚ್ ಸೇರಿ ಈ ಸಾರಿ ಬರುತ್ತಾರೆ ಆದ್ದರಿಂದ ನಮಗೆ ಇನ್ನು ೫೦ ಜನ ಡಾಕ್ಟರ್ ಷಾರ್ಟೇಜ್ ಬರಬಹುದು. ಆದ್ದರಿಂದಲೇ ನಾನು ಕನಿಷ್ಟ ಈ ಸಾರಿ ೧೫೦ ಅಡ್ಮಿಷನ್ ಕೊಡಬೇಕೆಂದು ಹೇಳಿದ್ದೇನೆ. ೧೫೦ ಆಗದೆ ಇದ್ದರೂ ಇನ್ನು ಎರಡು ವರ್ಷಗಳಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

೬–೩೦ ಪಿ.ಎಂ.

ಜೊತೆಗೆ ಡ್ಯೆರಿ ಟೆಕ್ನಾಲಜಿ ಡಿಗ್ರಿ ಕೋರ್ಸಿಗೆ ೫೦ ಜನಗಳಿಗೆ ಅಡ್ಮಿಷನ್ ಕೊಡಬೇಕೆಂದಿದ್ದೇವೆ ವೆಟರ್‌ನರಿ ಡಾಕ್ಟರುಗಳ ಕೋರ್ಸಿಗೆ ೧೫೦ ಡ್ಯೆರಿ ಟೆಕ್ನಾಲಜಿ ಕೋರ್ಸಿಗೆ ೫೦ ಜನಗಳಿಗೆ ಹೀಗೆ ಒಟ್ಟು ೨೦೦ ಜನಗಳಿಗೆ ಅಡ್ಮಿಷನ್ ಸಿಕ್ಕುತ್ತದೆ.

ಶ್ರೀ ಎಚ್.ಡಿ ಚೌಡಯ್ಯ.—ವೆಟರ್‌ನರಿ ಲಿವ್ ಸ್ಟಾಕ್ ಇನ್‌ಸ್ಪೆಕ್ಟರ್ಸ್ ಮತ್ತು ಕಾಂಪೌಂಡರ್‌ಗಳ ಹುದ್ದೆಗಳು ಬಹಳ ಕಡಿಮೆ ಇದೆ.

ಶ್ರೀ ವೈ. ರಾಮಕೃಷ್ಣ.—ಇದರಲ್ಲಿ ಒಟ್ಟು ೪೦೦ ಪೋಸ್ಟ್‌ಗಳು ಇದ್ದವು ಇದರಲ್ಲಿ ಈಗ ೨೦೦ ಪೋಸ್ಟ್‌ಗಳಿಗೆ ಅರ್ಜಿಯನ್ನು ಕರೆದಿದ್ದೇವೆ. ೨೭ ಸಾವಿರ ಅರ್ಜಿಗಳು ಬಂದಿವೆ ಈ ಹುದ್ದೆಗಳಿಗೆ ಬರತಕ್ಕವರಿಗೆ ಟ್ರೈನಿಗ್ ಕೊಡಬೇಕೆಂದು ಹೆಸರುಘಟ್ಟ ಮುಂತಾದ ೪ ಕಡೆಗಳಲ್ಲಿ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಈ ೪೦೦ ಪೋಸ್ಟ್‌ಗಳನ್ನು ಒಂದು ತಿಂಗಳಲ್ಲಿ ಫೈನಲ್ ಮಾಡಿ ೨೦೦ ಜನ ಲಿವ್‌ಸ್ಟಾಕ್ ಇನ್‌ಸ್ಪೆಕ್ಟರುಗಳನ್ನು ತೆಗೆದುಕೊಳ್ಳುತ್ತೇವೆ. ಈ ಅನಿಮಲ್ ಹಜ್ಬೆಂಡರಿ ಡಿಪಾರ್ಟ್‌ಮೆಂಟಿನಲ್ಲಿ ಒಟ್ಟು ೧೨೦೦ ಪೋಸ್ಟ್‌ಗಳು ಇವೆ. ಈ ಪೋಸ್ಟ್‌ಗಳನ್ನು ಅತಿ ಶೀಘ್ರವಾಗಿ ಭರ್ತಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಮೇಗೌಡ.—ಕರ್ನಾಟಕ ಡ್ಯೆರಿ ಡೆವಲಪ್‌ಮೆಂಟ್ ಕಾರ್ಪೋರೇಷನ್ನಿಗೆ ವರ್ಲ್ಡ್ ಬ್ಯಾಂಕಿನಿಂದ ಬರಬೇಕಾಗಿದ್ದ ಗ್ರಾಂಟ್ ನಿಂತು ಹೋಗಿದೆಯೋ ಹೇಗೆ ?

ಶ್ರೀ ವೈ ರಾಮಕೃಷ್ಣ.—ಅವರು ಕೊಡಬೇಕಾದ ಹಣವನ್ನು ಕೊಟ್ಟಿದ್ದಾರೆ. ೫೦ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಅಗ್ರಿಮೆಂಟ್ ಆಗಿದೆ. ಅಗ್ರಿಮೆಂಟ್ ಆದಮೇಲೆ ಕೊಡಬೇಕು ಈಗ ನಮ್ಮ ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ಮೇಕೆ ಫಾರಂ ಮಾಡಿದ್ದೇವೆ. ಆ ಫಾರಂ ಅನ್ನು ಕಿತ್ತೂರಿಗೆ ಕೊಟ್ಟಿದ್ದೇವೆ. ಅದಕೆ ಬೇಕಾದ ಕಟ್ಟಡಗಳನ್ನೂ ಕೂಡ ಅಲ್ಲಿ ಕಟ್ಟಿಸಿದ್ದೇವೆ.

ಶ್ರೀ ಜೆ ಎಚ್. ಪಟೇಲ್.—ಸ್ವಾಮಿ ನಮ್ಮ ರಾಜ್ಯದಲ್ಲಿ ಕುರಿಗಳು ಎಷ್ಟಿವೆ ? ಮತ್ತು ಇಲ್ಲಿರತಕ್ಕ ೧೬೫ ಕುರಿಗಳನ್ನು ಸೇರಿಸಿಕೊಂಡರೆ ಎಷ್ಟಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಅದು ನನಗೆ ಗೊತ್ತಿಲ್ಲ. ಬಿಜಾಪುರ ಮತ್ತು ಕಾರವಾರದಲ್ಲಿ ಹೊಸ ಡೈರಿ ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಯೋಜನೆಯನ್ನು ಹಾಕಿದ್ದೇವೆ. ಇದರ ಬಗೆ ಗೌರ್ನಮೆಂಟ್ ಆರ್ಡರನ್ನು ಕೂಡ ಇಷ್ಯೂ ಮಾಡಿದ್ದೇವೆ ಧಾರವಾಡದಲ್ಲಿ ಪೌಡರ್ ಪ್ಲಾಂಟ್ ಹಾಕಬೇಕೆಂದಿದ್ದೇವೆ. ಅದು ಈಗಾಗಲೇ ಟೆಂಡರ್ ಕರೆಯುವ ಪರಿಸ್ಥಿತಿಗೆ ಬಂದಿದೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ ಯಾವ ಆರ್ಗ್ಯೂಮೆಂಟ್ ಇಲ್ಲದೆ ನಿಮ್ಮ ಬಡ್ಜೆಟ್ ಪಾಸು ಮಾಡಿಕೊಡುತ್ತೇವೆ. ಆದರೆ ಶ್ರೀಮಾನ್ ಜೆ. ಎಚ್. ಪಟೇಲರು ಕುರಿಗಳು ಎಷ್ಟಿವೆ ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಗೊತ್ತಿಲ್ಲ ಎಂದು ಹೇಳಿದರು. ಅದಕ್ಕೆ ಇಲ್ಲಿರತಕ್ಕ ೧೬೩ ** ಅದಕ್ಕೆ ಶ್ರೀಮಾನ್ ಭಾಸ್ಕರನಾಯ್ಡು ಅವರು ಸೇರಿಸ್ಕಿಕೊಳ್ಳಿ ಎಂದು ಹೇಳಿದರು.

ಶ್ರೀ ಭಾಸ್ಕರ ನಾಯ್ಡು.—ನಾನು ಆ ರೀತಿ ಹೇಳಲಿಲ್ಲ. ಮಾನ್ಯ ಬಸವಲಿಂಗಪ್ಪನವರಿಗೆ ಮಂತ್ರಿ ಪದವಿ ಹೋದಮೇಲೆ ಕಿವಿ ಕೂಡ ಹೋಗಿವೆ.

MR. SPEAKER.—I expunge those words if at all Mr. Bhaskar Naidu has said that. Speaker does not belong to any political party.

ಶ್ರೀ ವೈ. ರಾಮಕೃಷ್ಣ,—ಕೋಳಿ ಮತ್ತು ಕುರಿಗಳನ್ನು ಸಾಕುವುದಕ್ಕೆ ನಾವು ಹೊಸ ಹೊಸ ಯೋಜನೆಗಳನ್ನು ಜಾರಿಗೆ ತರುತ್ತಿದ್ದೇವೆ. ಈ ಖಾತೆಗೆ ಸಂಬಂಧಪಟ್ಟ ಹಾಗೆ ಅನೇಕ ಮಾನ್ಯ ಸದಸ್ಯರು ಕೆಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಆಲೋಚನೆ ಮಾಡುತ್ತೇನೆ.

ಇನ್ನು ಲೆಜಿಸ್ಲೇಚರ್ ಬಗ್ಗೆ ಹೇಳುವುದಾದರೆ ಲಿಜಿಸ್ಲೇಚರನ್ನು ಕಾರ್ಯಾಂಗದಿಂದ ಬೇರ್ಪಡಿಸತಕ್ಕ ವಿಚಾರದಲ್ಲಿ ನಾನೂ ಭಾಷಣ ಮಾಡಿದ್ದೇನೆ. ಅಧ್ಯಕ್ಷರೂ ಕೂಡ ಅನೇಕ ಸಾರಿ ಹೇಳಿದ್ದಾರೆ. ಮೇಲ್ಮನೆಯ ಸಭಾಪತಿಯವರೂ ಕೂಡ ಲೆಜಿಸ್ಲೇಚರನ್ನು ಕಾರ್ಯಾಂಗದಿಂದ ಬೇರ್ಪಡಿಸಬೇಕು ಇಂಡಿಪೆಂಡೆಂಟ್ ಲೆಜಿಸ್ಲೇಚರ್ ಇರಬೇಕು ಎಂದು ಹೇಳಿದ್ದಾರೆ. ಅದಕ್ಕೆ ನಾವೂ ಒಪ್ಪಿದ್ದೇವೆ. ತಮಗೆ ಗೊತ್ತಿರುವ ಹಾಗೆ ತಾವು ಒಂದು ಆದೇಶವನ್ನು ಕೊಟ್ಟಿದ್ದೀರಿ, ತಾವು ವಿಧಾನಪರಿಷತ್ತಿನ ಚೇರ್ಮನ್ ಅವರು ಮತ್ತು ಮುಖ್ಯ ಮಂತ್ರಿಗಳು ಈ ಮೂರು ಜನಗಳೂ ಸೇರಿ ಮಾತನಾಡೋಣ. ಮತ್ತು ಈ ಸೆಷನ್ ಮುಗಿದ ಕೂಡಲೇ ನಾನು ಮತ್ತು ಕಾರ್ಯದರ್ಶಿ ಅವರು ಡೆಲ್ಲಿ ಮತ್ತು ಇನ್ನೂ ಕೆಲವು ರಾಜ್ಯಗಳಿಗೆ ಹೋಗಿ ನೋಡಿಕೊಂಡು ಬಂದು ಇದರ ಬಗ್ಗೆ ಕೂಡಲೇ ಕ್ರಮತೆಗೆದುಕೊಳ್ಳುತ್ತೇವೆ.

MR. SPEAKER.—This is hanging for the last sveveral years.

SRI Y. RAMAKRISHNA.—I will look into it, at least by first of next January.

ಇನ್ನು ಟ್ರಾನ್ಸ್‌ಲೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ ಶ್ರೀಮತಿ ಪ್ರಮಿಳಾ ಅವರು ಎತ್ತಿದ್ದಾರೆ. ಇದು ತಮಗೆ ಗೊತ್ತಿದೆ ಈಗ ಲಾಂಗ್ವೇಜ್ ಕಮಿಷನ್ ಅಬಾಲಿಷ್ ಆಗಿದೆ ಅದರ ಕೆಲಸ ಸ್ವಲ್ಪ ಹೆಚ್ಚು ಕಡಿಮೆ ಮುಗಿದಿದೆ. ೪ ಸಾವಿರ ಪದಗಳ ಗ್ಲಾಸರಿಯನ್ನು ತಯಾರು ಮಾಡಿದ್ದಾರೆ. ಅದು ಪ್ರಿಂಟ್‌ನಲ್ಲಿ ಇದೆ. ಆ ಗ್ಲಾಸರಿ ಪ್ರಿಂಟ್ ಆಗಿ ಬಂದಮೇಲೆ ಡ್ರಾಫ್ಟಿಂಗ್ ಸೆಕ್ಷನ್‌ನಲ್ಲಿ ಕನ್ನಡ ಡ್ರಾಫ್ಟಿಂಗ್ ಮಾಡಿ ಎಲ್ಲರಿಗೂ ಅದನ್ನು ಕನ್ನಡದಲ್ಲಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ತಾವು ಹೇಳಿದ ಹಾಗೆ

** As directed by the Chair the words are expungd

ಕನ್ನಡಕ್ಕೆ ಬೇರೆ ಬೇರೆ ಅರ್ಥ ಬಂದರೆ ಚೆನ್ನಾಗಿ ಕಾಣುವುದಿಲ್ಲ. ಆದ್ದರಿಂದ ಒಂದು ಕಮಿಷನ್ ತೆಗೆದು ಹಾಕಿದ್ದೇವೆ. ಟ್ರಾನ್ಸ್‌ಲೇಷನ್ ನಿಲ್ಲಿಸಿದ್ದೇವೆ. ಕಾನೂನು ಆಕ್ಟ್‌ಗಳನ್ನು ಕನ್ನಡದಲ್ಲಿ ಮಾಡಬೇಕೆಂದು ಕೆಲವು ಮಾನ್ಯ ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾವು ಈಗಾಗಲೇ ಸೆಂಟ್ರಲ್ ಆಕ್ಟ್‌ಗಳನ್ನು ಕ್ರಿಮಿನಲ್ ಪ್ರೊಸೀಜರ್ ಕೋಡ್, ಮತ್ತು ರೈತರಿಗೆ ಸಂಬಂಧ ಪಟ್ಟ ಎಲ್ಲಾ ಆಕ್ಟ್‌ಗಳನ್ನೂ ಕನ್ನಡದಲ್ಲಿ ಮಾಡಿಸಿದ್ದೇವೆ. ಸೆಂಟ್ರಲ್ ಗೌರ್ನಮೆಂಟ್ ಆಕ್ಟ್ ಕನ್ನಡಕ್ಕೆ ಟ್ರಾನ್ಸ್‌ಲೇಷನ್ ಆಗದೆ ಉಳಿದಿರುವುದನ್ನು ಟ್ರಾನ್ಸ್‌ಲೇಷನ್ ಮಾಡುವುದಕ್ಕೆ ಸರ್ಕಾರದವರು ಹಣ ಕೊಟ್ಟಿದ್ದಾರೆ.

ಲೇಜಿಸ್ಲೇಚರ್‌ನಲ್ಲಿ ಪ್ರಮೋಷನ್ ಕೊಡತಕ್ಕ ವಿಷಯ. ಇದು ೧೯೭೭ ನೇ ಇಸವಿಯಿಂದಲೇ ಜಾರಿಗೆ ಬಂದಿದೆ. ಇದನ್ನು ಏತಕ್ಕೆ ಅನುಷ್ಠಾನಕ್ಕೆ ತರಲಿಲ್ಲವೋ ಆಶ್ಚರ್ಯವಾಗುತ್ತದೆ. ಇದರ ಬಗ್ಗೆ ಗೌರ್ನಮೆಂಟ್ ಆರ್ಡರ್ ಆಗಬೇಕು ಎಂದು ಇಟ್ಟುಕೊಂಡಿದ್ದರೆ, ಇದರ ಬಗ್ಗೆ ಗೌರ್ನಮೆಂಟ್ ಆರ್ಡರ್ ಆಗಬೇಕಾದರೆ ಅದನ್ನು ತಕ್ಷಣ ಇಷ್ಯೂ ಮಾಡಿಸುತ್ತೇನೆ.

ರಿಪೋರ್ಟರ್ಸ್ ಮತ್ತು ಸ್ಟೆನೋಗ್ರಾಫರುಗಳಿಗೆ ಪ್ರಮೋಷನ್ ಕೊಡುವ ಬಗ್ಗೆ ಹೇಳುವುದಾದರೆ ರಿಪೋರ್ಟರ್ ಆದವರು ರಿಪೋರ್ಟರ್ ಆಗಿಯೇ ರಿಟೈರ್ ಆಗಬೇಕು, ಸ್ಟೆನೋಗ್ರಾಫರ್ ಆದವರು ಸ್ಟೆನೋಗ್ರಾಫರ್ ಆಗಿಯೇ ರಿಟೈರ್ ಆಗಬೇಕು, ಕ್ಲಾರ್ಕ್ ಆದವರು ಕ್ಲಾರ್ಕ್ ಆಗಿಯೇ ರಿಟೈರ್ ಆಗಬೇಕು ಎಂದು ಯಾರು ಹೇಳುವುದಿಲ್ಲ. ಅವರಿಗೆ ಪ್ರಮೋಷನ್ ಅಪರಚ್ಯುನಿಟಿ ಕೊಡಬೇಕು. ಆದ್ದರಿಂದ ಅವರಿಗೆ ತಕ್ಕ ಸ್ಥಾನಮಾನಗಳನ್ನು ಕೊಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಅದನ್ನು ಮಾಡಿ ಕೊಡುತ್ತೇವೆ.

ಇಷ್ಟು ಲೆಜಿಸ್ಲೇಚರ್‌ಗೆ ಸಂಬಂಧಪಟ್ಟದ್ದು. ಇನ್ನು ಶ್ರೀಮಾನ್ ಎ. ಲಕ್ಷ್ಮಿಸಾಗರ್‌ರವರು ಕೋರ್ಟಿನಲ್ಲಿ ಪೆಂಡೆನ್ಸಿ ಜಾಸ್ತಿ ಇದೆ ಎನ್ನುವ ಮಾತನ್ನು ಹೇಳಿದರು ಈ ಬಗ್ಗೆ ಹೇಳಬೇಕಾದರೆ ನಾವೂ ಕಾನೂನು ಮಾಡುತ್ತೇವೆ, ಪಾರ್ಲಿಮೆಂಟ್ ಕೂಡ ಕಾನೂನು ಮಾಡುತ್ತದೆ ಇಷ್ಟು ಜಾಸ್ತಿ ಸಂಖ್ಯೆಯಲ್ಲಿ ಪೆಂಡೆನ್ಸಿ ಇರುವುದಕ್ಕೆ ಕಾರಣ ಏನೆಂದರೆ ಈವೊತ್ತಿನ ದಿವಸ ಜನತೆಯಲ್ಲಿ ನಾಗರೀಕತೆ ಜಾಸ್ತಿಯಾಗಿ ಬೆಳೆಯುತ್ತಾ ಇರುವುದರಿಂದ ಅವರು ತಮ್ಮ ಹಕ್ಕನ್ನು ಚಲಾಯಿಸುವುದಕ್ಕೆ ಪ್ರತಿಯೊಬ್ಬರೂ ಕೂಡ ಕೋರ್ಟಿಗೆ ಹೋಗುತ್ತಿದ್ದಾರೆ.

ಶ್ರೀ ಕೆ. ಪ್ರಭಾಕರ್. - ಈ ಲೆಜಿಸ್ಲೇಚರ್ ಬಗ್ಗೆ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದೇನೆಂದರೆ ಹತ್ತಾರು ವರ್ಷ ನಾವು ಇಲ್ಲಿ ಕೆಲಸ ಮಾಡುತ್ತೇವೆ. ನಾವು ಈ ಮನೆಯಲ್ಲಿ ಏನೇನು ಕಾಂಟ್ರಿಬ್ಯೂಷನ್ ಮಾಡಿದ್ದೇವೆ ಅದನ್ನು ನೋಡಬೇಕು ಎಂದರೆ ಅದು ಒಂದು ಕಡೆ ಸಿಕ್ಕುವುದಿಲ್ಲ. ನಾವು ಮಾಡಿರತಕ್ಕಂಥಾ ಭಾಷಣಗಳನ್ನು ಹುಡುಕ ಬೇಕಾದರೆ ಕಷ್ಟ. ಆದುದರಿಂದ ಅದು ಬೇಗ ಸಿಕ್ಕುವ ಹಾಗೆ ಮಾನ್ಯ ಮುಖ್ಯಮಂತ್ರಿಗಳಾಗಲೀ, ಮಾನ್ಯ ಮಂತ್ರಿಗಳಾಗಲಿ ಏನಾದರೂ ಒಂದು ಹೊಸ ರೂಪ ಕೊಟ್ಟು ಅದು ಬೇಗನೆ ಸಿಕ್ಕುವ ಹಾಗೆ ಮಾಡಿದರೆ ಒಳ್ಳೆಯದು ಈ ಬೇಡಿಕೆಯನ್ನು ತಾವು ಈಡೇರಿಸಿ ಕೊಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಅದು ಸಾಧ್ಯವಾಗುವುದಿಲ್ಲ. ಅದನ್ನು ಡೇಟ್‌ವೈಸ್ ಮಾಡಬೇಕಾದರೆ ೨೨೪ ಮಂದಿಯೂ ಕೂಡ ಭಾಷಣ ಮಾಡಿದರೆ ಅದನ್ನೆಲ್ಲಾ ಡೇಟ್‌ವೈಸ್ ಮಾಡಬೇಕು ಎಂದರೆ ಕಷ್ಟ. ಆ ರೀತಿ ಎಲ್ಲೂ ಇರುವುದು ನಾ ಕಾಣೆ. ಇದು ಪಾರ್ಲಿಮೆಂಟ್ ಪ್ರೊಸೀಜರ್‌ನಲ್ಲೂ ಇಲ್ಲ. ತಾವೇನೋ ಈ ಬಗ್ಗೆ ಒಂದು ಸಲಹೆ ಕೊಟ್ಟಿದ್ದೀರಿ. ಅದೇನೋ ಒಳ್ಳೆಯದು. ಆದರೆ ಈ ಒಂದು ಪದ್ಧತಿ ಪಾರ್ಲಿಮೆಂಟಿನಲ್ಲೂ ಕೂಡ ಇಲ್ಲಾ. ಆದುದರಿಂದ ತಾವು ಕೊಟ್ಟ ಸಲಹೆ ಅಷ್ಟು ಉತ್ತಮವಾದ ಸಲಹೆಯಲ್ಲ.

ಅಧ್ಯಕ್ಷರು.—ಈ ಪ್ರೊಸೀಡಿಂಗ್ಸ್ ಬಗ್ಗೆ ಒಂದೊಂದು ಇಂಡೆಕ್ಸ್ ಇದೆ. ಅದರಲ್ಲಿ ಯಾವ ಯಾವ ಸದಸ್ಯರು ಯಾವ್ಯಾವುದರ ಮೇಲೆ ಭಾಷಣ ಮಾಡಿದ್ದಾರೆ ಎಂಬ ವಿವರಗಳೆಲ್ಲಾ ಅದರಲ್ಲಿ ಇರುತ್ತದೆ.

ಶ್ರೀ ವೈ. ರಾಮಕೃಷ್ಣ.—ನಾನು ಪೆಂಡೆನ್ಸಿ ವಿಚಾರದ ಬಗ್ಗೆ ಹೇಳುತ್ತಿದ್ದೆ. ಆ ವಿಚಾರದಲ್ಲಿ ಹೇಳುವುದಾದರೆ ಯಾವ್ಯಾವ ಕೋರ್ಟಿನಲ್ಲಿ ಎಷ್ಟೆಷ್ಟು ಸಾವಿರ ಕೇಸಸ್ ಪೆಂಡೆನ್ಸಿ ಇದೆ ಎನ್ನುವುದನ್ನು ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್‌ನಲ್ಲಿ ಕೊಟ್ಟಿದ್ದೇನೆ. ಪೆಂಡೆನ್ಸಿ ಜಾಸ್ತಿ ಇರತಕ್ಕಂಥಾದ್ದು ಒಳ್ಳೆಯದಲ್ಲ ಎನ್ನುವುದು ಗೊತ್ತಿದೆ. ಈಗಾಗಲೇ ಈ ಸಭೆಯ ಮುಂದೆ ಬಂದಿದ್ದಂಥಾ ೨ ಬೆಂಗಳೂರು ಸಿಟಿ ಸಿವಿಲ್

ಕೋರ್ಟ್ (ಅಮೆಂಡ್‌ಮೆಂಟ್) ಬಿಲ್'' ಒಂದಕ್ಕೆ ತಾವೆಲ್ಲಾ ಒಪ್ಪಿಗೆ ಕೊಟ್ಟಿದ್ದೀರಿ. ಇದರಲ್ಲಿ ಎರಡು ಅಪೀಲ್‌ಗೆ ಅವಕಾಶ ಇರುವುದಿಲ್ಲ. ಇದರಲ್ಲಿ ಒಂದು ಅಪೀಲ್‌ಗೆ ಮಾತ್ರ ಹೋಗಬಹುದು. ಅನಂತರ ಬೇಕಾದರೆ ರಿವಿಷನ್‌ಗೂ ಹೋಗಬಹುದು. ಈಗ ಇದನ್ನು ಪ್ರಾಯೋಗಿಕವಾಗಿ ತೆಗೆದುಕೊಂಡು ಬಂದಿದ್ದೇವೆ. ಒಂದು ವೇಳೆ ಇದು ಸಹಕಾರಿಯಾಗುತ್ತದೆ ಎಂದು ಖಾತರಿಯಾದ ಮೇಲೆ ನಂತರ ಅದನ್ನು ಎಲ್ಲ ನಗರ ನ್ಯಾಯಾಲಯಗಳಿಗೂ ಕೂಡ ವಿಸ್ತರಿಸಬೇಕು ಎನ್ನುವ ಮನೋಭಾವ ನಮಗೆ ಇದೆ. ಆವಾಗ ಇಷ್ಟೊಂದು ಪೆಂಡೆನ್ಸಿ ಕೇಸ್ ಇರುವುದಿಲ್ಲ, ಕಡಿಮೆ ಬರುತ್ತದೆ. ಕೇಸಸ್‌ಗಳೂ ಕೂಡ ಇದರಿಂದ ಬೇಗನೆ ಇತ್ಯರ್ಥವಾಗುತ್ತದೆ. ತಮಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕಾದರೆ ೪ ತಿಂಗಳಿನಲ್ಲಿ ೫ ಕೋರ್ಟುಗಳನ್ನು ಹೊಸದಾಗಿ ಸ್ಥಾಪನೆ ಮಾಡಿದ್ದೇವೆ. ಇನ್ನೂ ಕೆಲವು ಕೋರ್ಟುಗಳನ್ನು ಸ್ಯಾಂಕ್ಷನ್ ಮಾಡುವ ಸ್ಟೇಜಿನಲ್ಲಿದ್ದೇವೆ. ಇದರಿಂದ ಪೇಡೆನ್ಸಿ ಸ್ವಲ್ಪ ಕಡಿಮೆಯಾಗಬಹುದು. ಈಗ ೪೭ ಮುನ್ಸೀಫರುಗಳನ್ನು ನೇಮಕ ಮಾಡಿದ್ದೇವೆ. ಇನ್ನೂ ೫೦ ಜನ ಮುನ್ಸೀಫರು ಬೇಕಾಗುತ್ತದೆ, ಈ ಬಗ್ಗೆ ಹೈಕೋರ್ಟಿನವರನ್ನು ಕೇಳಿ ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಕೋರ್ಟ್ ಇಲ್ಲದೇ ಇರುವ ಕಡೆಗಳಲ್ಲಿ ಇಂಥಾ ಕೋರ್ಟುಗಳನ್ನು ತೆರೆಯುವ ಉದ್ದೇಶ ಇದೆ. ಹೀಗೆ ಮಾಡಿದರೆ ಮುಂದೆ ನ್ಯಾಯಾಲಯು ಗಳಲ್ಲಿ ಹೆಚ್ಚು ಕೇಸಸ್‌ಗಳು ಪೆಂಡೆನ್ಸಿ ಇರುವುದಕ್ಕೆ ಅವಕಾಶವಾಗುವುದಿಲ್ಲ ಕಡಿಮೆಯಾಗುತ್ತದೆ.

ನಿಮಗೆ ಇನ್ನೊಂದು ವಿಷಯ ಹೇಳಬೇಕಾದರೆ ಈಗ ಡೆಟ್ ರಿಲೀಫ್ ಬಿಲ್ ಬಗ್ಗೆ ಸಾವಿರಾರು ಕೇಸ್‌ಗಳು ಕೋರ್ಟಿನಲ್ಲಿ ಪೆಂಡಿಂಗ್ ಇವೆ. ಇದನ್ನು ಹೈಕೋರ್ಟ್‌ನವರು ವಜಾ ಮಾಡಿದ್ದರಿಂದ ಮತ್ತೆ ಅದನ್ನು ಸುಪ್ರೀಂ ಕೋರ್ಟಿಗೆ ಹೋಗಿ ಅಪೀಲ್ ಮಾಡಿದ್ದೇವೆ. ಈ ಬಗ್ಗೆ ೫ ಲಕ್ಷ ಕೇಸಸ್ ತೀರ್ಮಾನವಾಗಬೇಕಾಗಿದೆ. ಸರ್ಕಾರ ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡುತ್ತಾ ಇದೆ. ಅದಕ್ಕೋಸ್ಕರವಾಗಿ ಇದಕ್ಕೇನೆ ಒಂದು ಬೆಂಚ್ ಇಡಬೇಕೆಂದು ಕೋರ್ಟಿನವರನ್ನು ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ. ಆ ರೀತಿ ಮಾಡಿದರೆ ಇದರ ಬಗ್ಗೆ ಪೆಂಡೆನ್ಸಿ ಕೇಸಸ್‌ಗಳು ಏನು ಇವೆ ಅವುಗಳನ್ನು ಶೀಘ್ರವಾಗಿ ತೀರ್ಮಾನ ಮಾಡಬಹುದು.

ಇನ್ನು ಲೀಗಲ್ ಏಡ್ ವಿಷಯವಾಗಿ ಹೇಳಬೇಕಾದರೆ ಇದರ ಬಗ್ಗೆ ನಾವು ಬಹಳ ತೀವ್ರವಾಗಿ ಕೆಲಸ ಮಾಡಬೇಕಾಗಿದೆ. ಈವೊತ್ತಿನ ದಿವಸ ಬಡವರಿಗೆ ತೀವ್ರವಾಗಿ ನ್ಯಾಯ ಸಿಗಬೇಕೆನ್ನುವ ವಿಚಾರದಲ್ಲಿ ನಾವೆಲ್ಲರೂ ಕೂಡ ಏಕಾಭಿಪ್ರಾಯ ಉಳ್ಳವರಾಗಿದ್ದೇವೆ ಎನ್ನುವ ಮಾತನ್ನು ಬೇರೆ ಹೇಳಬೇಕಾದ್ದಿಲ್ಲ. ಇದರಲ್ಲಿ ಇನ್ನೊಂದು ಪ್ರಶ್ನೆ ಏನೆಂದರೆ ಲಾ ಗ್ರಾಜುಯೇಟ್ಸ್ ತಮ್ಮ ಡಿಗ್ರಿಯನ್ನು ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ಕಡ್ಡೇ ಪಕ್ಷ ೩ ಶಿಬಿರಗಳಲ್ಲಿ ಭಾಗವಹಿಸಬೇಕಾಗುತ್ತದೆ. ಈ ಬಗ್ಗೆ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಶ್ರೀ ಭಗವತಿಯವರು ಇಲ್ಲಿಗೆ ಬಂದಿದ್ದಾಗ ಮಾತನಾಡಿದ್ದೇನೆ. ಅಲ್ಲದೆ ಈ ಬಗ್ಗೆ ಲೀಗಲ್ ಅಡ್ವೈಸ್ ಕೌನ್ಸಿಲ್ ಏನು ಇದೆ ಅವರನ್ನೂ ಕೂಡ ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ. ವೈಸ್‌ಛಾನ್ಸಲರಲ್ಲೂ ಕೂಡ ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ ಇದಕ್ಕೆ ಬೇಕಾದ ವಿವರಗಳನ್ನು ತಯಾರಿಸಿ ಈ ಬಗ್ಗೆ ಸರ್ಕಾರದವರು ಒಂದು ನಿರ್ಧಾರ ತೆಗೆದುಕೊಂಡ ಮೇಲೆ ನಂತರ ವಿಶ್ವವಿದ್ಯಾನಿಲಯಗಳಿಗೆ ಸೂಚನೆ ನೀಡಲಾಗುವುದು ಈಗ ಏನಾಗಿದೆ ಎಂದರೆ ಈ ಕಾನೂನಿನ ಪ್ರತಿಫಲ ನಿಜವಾಗಿ ಯಾರಿಗೆ ಸಿಕ್ಕಬೇಕೋ ಅವರಿಗೆ ಸಿಕ್ಕುತ್ತಾ ಇಲ್ಲ. ಆವರಿಗೆ ಈ ಕಾನೂನಿನ ಪ್ರತಿಫಲ ಯಾವ ರೀತಿ ಸಿಗಬೇಕು ಅನ್ನುವುದನ್ನು ಯೋಚನೆ ಮಾಡಿ ಅವರಿಗೆ ಇದರ ಪ್ರತಿಫಲವನ್ನು ಒದಗಿಸಿಕೊಡಬೇಕೆಂದು ಒಂದು ನಿರ್ಧಾರ ತೆಗೆದುಕೊಂಡಿದ್ದೇವೆ. ತಮಗೆ ಹೇಳಬೇಕಾದರೆ ಒಂದು ಇನೂಷ್ಯೂರೆನ್ಸ್ ಆಗಲಿ, ಒಂದು ಸಾಮಾಜಿಕ ನ್ಯಾಯವಾಗಲಿ ಈ ಒಂದು ಲೀಗಲ್ ಏಡ್‌ನಲ್ಲಿ ಆ ಬಡಜನರಿಗೆ ಯಾವ ರೀತಿ ನ್ಯಾಯ ಸಿಗಬೇಕೋ ಅದು ಸಿಗುತ್ತಾ ಇಲ್ಲ. ಮೊದಲನೇ ಹೆಂಡತಿ ಇದ್ದರೂ ಸಹ ಇನ್ನೊಬ್ಬರನ್ನು ಮದುವೆ ಯಾಗುವುದು, ವಾಹನ ಅಪಘಾತದಲ್ಲಿ ನೊಂದವರಿಗೆ ಪರಿಹಾರ ಕೇಳಲು ಮುಂದೆ ಬಾರದೆ ಇರುವುದು ಇಂಥಾವರಿಗೆ ಕಾನೂನಿನ ಪರಿಚಯ ಮಾಡಿಕೊಡಬೇಕಾದ್ದು ಸರ್ಕಾರದ ಪ್ರಥಮ ಕರ್ತವ್ಯವಾಗಿದೆ. ಅವರು ಯಾರಾದರೂ ಲಾಯರ್ಸ್ ಹತ್ತಿರ ಹೋಗಿ ಇದರ ಬಗ್ಗೆ ಕಾಂಪೆನ್ಸೇಷನ್ ತೆಗೆದುಕೊಳ್ಳಬೇಕೆಂಬ ಅರಿವೇ ಅವರಿಗೆ ಇರುವುದಿಲ್ಲ. ಇದೇ ರೀತಿಯಾಗಿ ಲ್ಯಾಂಡ್ ಅಕ್ವಿಜಿಶನ್ ಕಾಂಪೆನ್ಸೇಷನ್ ಬಗ್ಗೆ ಪರಿಹಾರ ಕೇಳಲು ಲೀಗಲ್ ಏಡ್ ಬೇಕಾಗಿದೆ. ಅದರಿಂದ ಇವರಿಗೆ ಪರಿಹಾರ ಲಕ್ಷಾಂತರ ರೂಪಾಯಿ ಬರುತ್ತದೆ. ಈ ಒಂದು ಲೀಗಲ್ ಏಡ್ ಸ್ಕೀಂ ಒಂದನ್ನು ಜಾರಿಗೆ ತಂದರೆ ಅವರ ಒಂದು ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ದೊರಕಿಸಿ ಕೊಟ್ಟಂತಾಗುತ್ತದೆ. ಈ ಕೆಲಸಗಳನ್ನು ಬುದ್ಧಿವಂತರಾದ ಜನರು ಮುಂದೆ ಬಂದು ಮಾಡಬೇಕು. ತಮಗೆ ಹೇಳಬೇಕಾದರೆ ಈವೊತ್ತಿನ ದಿವಸ ಈ ಲ್ಯಾಂಡ್ ಕಾಂಪೆನ್ಸೇಷನ್ ಬಗ್ಗೆ ಬಹಳ

ಮೋಸ ನಡೆಯುತ್ತಾ ಇದೆ. ಮೈನರ್ಸ್, ವಿಡೋಸ್ ಇವರಿಗೆಲ್ಲಾ ಪರಿಹಾರ ಕೊಡುವುದಕ್ಕೆ ಏನು ಒಂದು ಕಾನೂನು ಅರಿವು ಬೇಕೋ ಅದನ್ನೂ ಈ ಲೀಗಲ್ ಏಡ್‌ನಲ್ಲಿ ಅಳವಡಿಸಿಕೊಂಡು ಏತಕ್ಕೆ ಮಾಡಬಾರದು ಅನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಜನತೆಯಲ್ಲಿ ಈ ಬಗ್ಗೆ ಏನೊಂದು ಚಿಂತನೆ ಇದೆಯೋ ಆ ವಿಷಯದಲ್ಲಿ ವೈಸ್‌ಛಾನ್ಸಲರನ್ನೂ ಕೂಡ ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿರ ತಕ್ಕಂಥಾ ಜನರಿಗೆ ಈ ಕಾನೂನಿನ ಒಂದು ಅರಿವು ತಿಳಿಯಲು ಯಾವ ರೀತಿ ಮಾಡಬೇಕು, ಅಡ್ವಟೈಸ್ ಮಾಡಬೇಕೋ ಇನ್ನಾವ ರೀತಿ ಮಾಡಬೇಕೋ ಎನ್ನುವುದರ ಒಂದು ಯೋಜನೆ ಹಾಕಿಕೊಂಡಿದ್ದೇವೆ. ಈ ವಿಷಯವನ್ನು ಈ ಸಭೆಗೆ ತಿಳಿಸಲು ನಾನು ಇಷ್ಟಪಡುತ್ತೇನೆ. ಇನ್ನೂ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ ಎಂದು ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಹೆಚ್. ಹನುಮೇಗೌಡ.—ಫ್ಲಡ್ ಆಪರೇಷನ್–೨, ಇದು ೬೦ ಕೋಟಿ ರೂಪಾಯಿಯ ಒಂದು ಯೋಜನೆ. ಈ ಒಂದು ಪ್ರಾಜೆಕ್ಟ್ ಇಂಡಿಯನ್ ಡೈರಿ ಕಾರ್ಪೊರೇಷನ್‌ನವರು ಮಾಡತಕ್ಕಂಥಾ ಪ್ರಾಜೆಕ್ಟ್. ಇದಕ್ಕೆ ಮಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ನಿನವರು ಮೊದಲನೇ ಸ್ಟೇಜಿನಲ್ಲಿ ಮೂರನೇ ಒಂದು ಭಾಗದಷ್ಟು ಅಂದರೆ ೨೦ ಕೋಟಿ ರೂಪಾಯಿ ಹಣವನ್ನು ಸಬ್ಸಿಡಿಯಾಗಿ ಕೊಟ್ಟಿದ್ದಾರೆ. ಆ ಬಗ್ಗೆ ಏನು ಮಾಡಿದ್ದೀರಿ. ಎರಡನೆಯದಾಗಿ ಯೂರೋಪಿಯನ್ ಎಕನಾಮಿಕ್ ಕಂಟ್ರೀಸ್‌ನವರು ಸಾವಿರಾರು ಟನ್ ಮಿಲ್ಕ್ ಪೌಡರನ್ನು ಏನು ಕೊಟ್ಟಿದ್ದಾರೆ ಅದನ್ನು ಏನು ಮಾಡಿದ್ದೀರಿ ತಿಳಿಸಬೇಕು.

ಇನ್ನು ಎರಡನೆಯದಾಗಿ ಡಾಕ್ಟರ್ ಕುರಿಯನ್ ಅವರು ಥಿಯರಿ ಪ್ರಕಾರ ಯಾರು ಬೇಕಾದರೂ ಕೂಡ ಈ ಬಗ್ಗೆ ಪ್ರೊಸೆಸಿಂಗ್ ಮಾರ್ಕೆಟಿಂಗ್ ಮಾಡಬಹುದು. ಈಗ ಕಡಿಮೆ ಇದೆ. ಅವರು ಹೇಳಿದಂತೆ ಮಾಡಿದರೆ ಡೈರಿ ಅಭಿವೃದ್ಧಿ ಇನ್ನೂ ಚೆನ್ನಾಗಿ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಜಾರಿಗೆ ತಂದಿದ್ದೀರಾ ? ಇದನ್ನು ಆಂಧ್ರ ಪ್ರದೇಶದವರು ಒಪ್ಪಿಕೊಂಡಿದ್ದಾರೆ, ತಮಿಳುನಾಡಿನವರು ಒಪ್ಪಿಕೊಂಡಿದ್ದಾರೆ, ಕೇರಳದವರು ಒಪ್ಪಿಕೊಂಡಿದ್ದಾರೆ, ಆದರೆ ಕರ್ನಾಟಕದವರು ಒಪ್ಪಿಲ್ಲಾ. ಇದಕ್ಕೆ ಕಾರಣ ಏನು ಎಂದರೆ ಇಲ್ಲಿರುವವ ಯಾರೋ ಒಬ್ಬಿಬ್ಬ ಅಧಿಕಾರಿಗಳು ನಮಗೆ ಬರುವ ಲಾಭ ಎಲ್ಲಿ ಹೋಗುತ್ತದೋ ಅಂತ ಇಲ್ಲಿ ರೈತರಿಗೆ ಆಗತಕ್ಕಂಥಾ ಅನುಕೂಲಗಳನ್ನು ತಡೆಯುತ್ತಿದ್ದಾರೆ. ಈ ಅನ್ಯಾಯಕ್ಕೆ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ.

ಇನ್ನು ಮೂರನೆಯದಾಗಿ ಈ ಕಮರ್ಷಿಯಲ್ ಬ್ಯಾಂಕ್ಸ್‌ನವರು ಡೈರಿ ಡೆವಲಪ್‌ಮೆಂಟ್‌ಗೋಸ್ಕರ ಹಸುಗಳನ್ನು ಕೊಂಡುಕೊಳ್ಳಲಿಕ್ಕೆ ಸಾಲ ಕೊಡಬೇಕು ಎನ್ನುವ ಆದೇಶವಿದ್ದರೂ ಸಹ ಅವರು ಇವರಿಗೆ ಸಾಲ ಕೊಡುತ್ತಾ ಇಲ್ಲ. ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನ ನಾಲ್ಕು ಯೂನಿಯನ್ ಸಹ ಒಂದು ವರ್ಷಕ್ಕೆ ೧೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇದರ ಜೊತೆಗೆ ಮಿಲ್ಕ್ ಪ್ರೊಡ್ಯೂಸ್ ಕೋ–ಆಪರೇಟೀವ್ ಬ್ಯಾಂಕ್‌ನವರೂ ಸಹ ಸೇರಿ ಮಾಡುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ಈ ಎರಡು ಯೋಜನೆಯನ್ನು ಸಹ ತಮ್ಮ ಕಾಲದಲ್ಲಿ ಜಾರಿಗೆ ತರುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಆಪರೇಷನ್ ಫ್ಲಡ್–೨ರ ಬಗ್ಗೆ ಹೇಳುವುದಾದರೆ ಇದು ೫೫ ಕೋಟಿ ರೂಪಾಯಿಯ ಯೋಜನೆ. ಮೊದಲನೇ ಸ್ಟೇಜ್‌ನಲ್ಲಿ ಇವರು ೨೦ ಕೋಟಿ ರೂಪಾಯಿ ಕೊಟ್ಟಿದ್ದಾರೆ.

ಶ್ರೀ ಕೆ. ಹೆಚ್ ಹನುಮೇಗೌಡ —ಈ ಬಗ್ಗೆ ಸೆಕೆಂಡ್ ಸ್ಟೇಜ್ ತೆಗೆದುಕೊಂಡರೆ ಇದರಿಂದ ಇನ್ನೂ ೭–೮ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಆ ಬಗ್ಗೆ ಏನಾದರೂ ಒಂದು ನಿರ್ಧಾರ ತೆಗೆದುಕೊಂಡಿದ್ದೀರಾ ?

ಶ್ರೀ ವೈ. ರಾಮಕೃಷ್ಣ.—ಸರ್ಕಾರ ಆ ಬಗ್ಗೆ ಇನ್ನೂ ಏನೂ ನಿರ್ಧರಿಸಿಲ್ಲಾ.

ಶ್ರೀ ಕೆ. ಹೆಚ್. ಹನುಮೇಗೌಡ.—ಡಾಕ್ಟರ್ ಕುರಿಯನ್ ಅವರು ರೈತರ ಬಗ್ಗೆ ಕಳವಳ ಇಟ್ಟಿರತಕ್ಕಂಥಾ ಮಹಾವ್ಯಕ್ತಿ. ಹಿಂದೆ ಮಾನ್ಯ ದೇವರಾಜ್ ಅರಸ್‌ರವರು ಇದ್ದಾಗ ೨—೩ ಸಾರಿ ಇಲ್ಲಿಗೆ ಬಂದಿದ್ದರು. ಆವಾಗ ಅವರೊಂದಿಗೆ ಮಾತನಾಡಲು ಅವಕಾಶ ಸಿಗಲಿಲ್ಲ. ನಂತರ ಮುಖ್ಯ ಕಾರ್ಯದರ್ಶಿಯವರನ್ನು ಕಂಡು ಈ ಬಗ್ಗೆ ೨೦ ಕೋಟಿ ರೂಪಾಯಿಯ ಒಂದು ಯೋಜನೆ ಏನು ಇದೆ ಇದು ಕರ್ನಾಟಕ ರಾಜ್ಯದಲ್ಲಿರುವ ರೈತರಿಗೆ ತುಂಬಾ ಅನುಕೂಲವಾಗುತ್ತದೆ, ಈ ಯೋಜನೆಯನ್ನು ಜಾರಿಗೆ ತರಬೇಕು ಎಂದು ನಾಲ್ಕಾರು ಸಲ ಇಲ್ಲಿಗೆ ಬಂದು ಒತ್ತಾಯಪಡಿಸಿ ಹೋಗಿದ್ದಾರೆ. ಇಬ್ಬರು ಮೂವರು ಅಧಿಕಾರಿಗಳಿಂದ ಇದೆಲ್ಲಾ ನಡೆಯುತ್ತಿದೆ. ಇದಕ್ಕೆ ತಾವು ಅವಕಾಶ ಮಾಡಿಕೊಡಬೇಡಿ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಸದಸ್ಯರು ಇದರ ಬಗ್ಗೆ ನನಗೆ ಒಂದು ಪತ್ರ ಬರೆಯಲಿ. ನಾನು ಅದರ ಬಗ್ಗೆ ಕಾರ್ಯಕ್ರಮ ಕೈಕೊಳ್ಳುತ್ತೇನೆ.

ಶ್ರೀ ಜಿ. ಎಸ್, ಶಿವನಂಜಪ್ಪ.—ನಮ್ಮ ಶಿರಾ ತಾಲ್ಲೂಕ್ ಬಳಿ ನೇರಳೇಗುಡ್ಡದ ಬಳಿ ೩೦೦ ಎಕರೆ ಜಮೀನು ಇದೆ. ಮತ್ತು ಹತ್ತು ಸಾವಿರ ಎಕರೆ ಪ್ರದೇಶದಷ್ಟು ಕಾಡು ಪ್ರದೇಶವಿದೆ. ಈ ಮೊದಲು ಅಲ್ಲಿಗೆ ಡೆವಲಪ್‌ಮೆಂಟ್ ಆಫೀಸರ್ ಆದಂಥ ಶ್ರೀ ರಾಮದೇವಶಿಂಧ್ಯೆ ಅವರು ಅಲ್ಲಿಗೆ ಬಂದು ಸ್ಥಳ ಪರಿಶೀಲನೆ ಮಾಡಿ, ಅದು ಕುರಿ ಅಭಿವೃದ್ಧಿಪಡಿಸಲು ಯೋಗ್ಯವಾದ ಸ್ಥಳವೆಂದು ಒಂದು ವರದಿ ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುವನ್ನು ತಿಳಿಸಬೇಕು.

ಇನ್ನು ನಮ್ಮ ದೇಶದ ದನಗಳ ಸಂಪತ್ತನ್ನು ನಮ್ಮ ರಾಜ್ಯಕ್ಕೆ ಹೋಲಿಕೆ ಮಾಡಿ ನೋಡಿದಾಗ ನಿಜಕ್ಕೂ ನಮ್ಮ ರಾಜ್ಯದಲ್ಲಿ ಕಡಿಮೆ ಇದೆ ಇದನ್ನು ಅಭಿವೃದ್ಧಿಪಡಿಸಲು ಈ ಮೊದಲಿನ ಸರ್ಕಾರದವರು ಕೆಲವು ಕಾರ್ಯಕ್ರಮಗಳನ್ನು ಕೈಕೊಂಡಿದ್ದರು. ಇದರ ಪ್ರಕಾರ ನಮ್ಮ ತುಮಕೂರು ಜಿಲ್ಲೆಗೆ ಒಂದು ಮೊಬೈಲ್ ಆಸ್ಪತ್ರೆ ಕೊಟ್ಟಿದ್ದಾರೆ. ಈ ಆಸ್ಪತ್ರೆಯವರು ಪ್ರತಿ ತಾಲ್ಲೂಕ್ ಹಾಗೂ ಪ್ರತಿ ಹೋಬಳಿಗೂ ಹೋಗಿ ದನಕರುಗಳನ್ನು ಪರೀಕ್ಷೆ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಅನುಕೂಲವಾಗಿದೆ. ಆದ್ದರಿಂದ ಪ್ರತಿ ತಾಲ್ಲೂಕ್ ಕೇಂದ್ರಕ್ಕೂ ಒಂದೊಂದು ಮೊಬೈಲ್ ಆಸ್ಪತ್ರೆ ಒದಗಿಸಿದರೆ, ನಾವು ಯಾರಾದರೂ ಫೋನ್ ಮಾಡಿದರೆ ಇಲ್ಲವೇ ಹೇಳಿಕಳುಹಿಸಿದರೆ ಅವರು ಕೂಡಲೇ ಬರಲು ಅನುಕೂಲವಾಗುತ್ತದೆ; ಇದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು.

ಇನ್ನು ತುರುವೇಕೆರೆಯಲ್ಲಿ ಒಂದು ಕೋರ್ಟನ್ನು ತೆರೆಯಲು ಸರ್ಕಾರದವರು ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ, ಇಲ್ಲಿ ಕೋರ್ಟ್ ಇಲ್ಲದ ಕಾರಣ ಜನರು ದೂರದ ಸ್ಥಳಗಳಿಗೆ ಹೋಗಬೇಕಾಗಿದೆ. ಜನರ ಕಷ್ಟ ತಪ್ಪಿಸಲು ಕೂಡಲೇ ಅಲ್ಲಿ ಕೋರ್ಟ್ ಸ್ಥಾಪನೆ ಮಾಡಬೇಕು.

ಇನ್ನು ಕಾಯಿಲೆ ಬಂದ ಹಸುಗಳನ್ನು ಆಸ್ಪತ್ರೆಗಳಿಗೆ ತೆಗೆದುಕೊಂಡು ಹೋದರೆ ಅಲ್ಲಿನ ಡಾಕ್ಟರ್‌ಗಳು ಔಷಧಿವಿಲ್ಲವೆಂದು ೨೫–೩೦ ರೂಪಾಯಿಗಳ ಔಷಧಗಳನ್ನು ಬರೆದುಕೊಡುತ್ತಾರೆ. ಇಷ್ಟು ಹಣ ಖರ್ಚು ಮಾಡಲು ರೈತರಿಗೆ ಕಷ್ಟ ಇರುತ್ತದೆ. ಆದ್ದರಿಂದ ಸರ್ಕಾರದವರು ಹೆಚ್ಚಿನ ಔಷಧಗಳನ್ನು ಒದಗಿಸಬೇಕು. ಮತ್ತು ಪ್ರತಿ ಪಂಚಾಯಿತಿ ಮಟ್ಟದಲ್ಲಿಯೂ ಒಂದೊಂದು ಡೈರಿಯನ್ನು ಸ್ಥಾಪಿಸಬೇಕು. ಮತ್ತು ಕೋಆಪರೇಟಿವ್ ಸೊಸೈಟಿಗಳನ್ನು ಸ್ಥಾಪಿಸಿ ಅದರ ಮೂಲಕ ಎಲ್ಲ ಹರಿಜನ ಮತ್ತು ಗಿರಿಜನರಿಗೂ ಒಂದೊಂದು ಹಸುಗಳನ್ನು ಒದಗಿಸಿಕೊಟ್ಟರೆ ಆ ಜನರ ಏಳಿಗೆಯಾಗುತ್ತದೆ. ಆದಕಾರಣ ಇದರ ಬಗ್ಗೆಯೂ ಸರ್ಕಾರ ಕ್ರಮ ಕೈಕೊಳ್ಳಬೇಕು.

ಶ್ರೀ ವೈ ರಾಮಕೃಷ್ಣ.—ಮಾನ್ಯ ಸದಸ್ಯರು ಹೇಳಿದ ಶ್ರೀ ರಾಮದೇವಶಿಂಧ್ಯ ಅವರ ವರದಿಯನ್ನು ತರಿಸಿ ನಾನು ನೋಡುತ್ತೇನೆ, ಮತ್ತು ಅದರ ಬಗ್ಗೆ ನಾನು ಸೂಕ್ತ ಕ್ರಮ ಕೈಕೊಳ್ಳುತ್ತೇನೆ.

ಇನ್ನು ಮೊಬೈಲ್ ವ್ಯಾನ್‌ಗಳನ್ನು ಈಗ ೩ ಜಿಲ್ಲೆಗಳಿಗೆ ಕೊಟ್ಟಿದ್ದೇವೆ. ಮತ್ತೆ ಹತ್ತಕ್ಕೆ 'ಆರ್ಡರ್ ಪ್ಲೇಸ್ ಮಾಡಿದ್ದೇವೆ. ಮತ್ತೆ ಕಾಡಾ ಪ್ರೋಗ್ರಾಮ್‌ನಲ್ಲಿ ೪–೫ ಬರುವುದಿದೆ. ಆಗ ಎಲ್ಲ ಜಿಲ್ಲೆಗಳಿಗೂ ಒದಗಿಸಲು ಸಾಧ್ಯವಾಗುತ್ತದೆ.

ಇನ್ನು ತುರುವೇಕೆರೆಗೆ ಕೋರ್ಟ್ ಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ಹೈಕೋರ್ಟಿನಿಂದ ನಮಗೆ ರೆಕಮೆಂಡೇಷನ್ ಬಂದರೆ, ನಾನು ಅದನ್ನು ಪರಿಶೀಲನೆ ಮಾಡುತ್ತೇನೆ ಒಂದು ಕೋರ್ಟಿನಿಂದ ಇನ್ನೊಂದು ಕೋರ್ಟಿಗೆ ಇಷ್ಟು ಅಂತರವಿರಬೇಕು ಮತ್ತು ಇಷ್ಟು ಕೇಸ್‌ಗಳಿರಬೇಕೆಂದು ಒಂದು ನಿಯಮವಿದೆ. ಅದರ ಪ್ರಕಾರ ಹೈಕೋರ್ಟಿನವರು ನಮಗೆ ರೆಕಮೆಂಡೇಷನ್ ಮಾಡಿದರೆ, ನಾವು ಪರಿಶೀಲನೆ ಮಾಡುತ್ತೇವೆ.

ಇನ್ನು ಪ್ರತಿ ಪಂಚಾಯಿತಿ ಮಟ್ಟದಲ್ಲಿಯೂ ಒಂದೊಂದು ಡೈರಿ ಇರಬೇಕೆಂದು ಹೇಳಿದ್ದಾರೆ. ಸರ್ಕಾರದ ಆಶಯವೂ ಅದೇ ಆಗಿದೆ ಜನರು ಮುಂದೆ ಬಂದು ರಿಜಿಸ್ಟರ್ಡ್ ಮಾಡಿಸಿದರೆ ನಾವು ಹಣ ಕೊಡುತ್ತೇವೆ. ಈ ಮೂಲಕ ಹರಿಜನ ಮತ್ತು ಗಿರಿಜನರ ಅಭಿವೃದ್ಧಿಯಾಗಬೇಕೆಂದು ಅವರು ಹೇಳಿದ್ದಾರೆ. ಈಗಾಗಲೇ ಸರ್ಕಾರದವರು ಹರಿಜನ ಮತ್ತು ಗಿರಿಜನರಿಗೆ ಹಸು, ಎಮ್ಮೆಗಳನ್ನು ಒದಗಿಸುವುದಕ್ಕಾಗಿ ೨೨ ಲಕ್ಷ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ಜೊತೆಗೆ ಎಸ್. ಎಫ್. ಡಿ. ಎ. ಹಾಗೂ

ಐ. ಆರ್. ಡಿ. ಪಿ. ಸ್ಕೀಮುಗಳಲ್ಲಿಯೂ 18 ಪರ್ಸೆಂಟ್ ಹಣವನ್ನು ಈ ಜನರಿಗೆ ಅನುಕೂಲ ಮಾಡಿ ಕೊಡಲು ಮೀಸಲಿಟ್ಟಿದ್ದೇವೆ. ಹೀಗೆ ವಿಶೇಷವಾದಂಥ ಸ್ಕೀಮುಗಳನ್ನು ಹರಿಜನ ಮತ್ತು ಗಿರಿಜನರಿಗಾಗಿ ಹಾಕಿಕೊಂಡಿದ್ದೇವೆ.

SRI VEERASHETTY KUSHNOOR.—I am again stressing the same oint which the hon. member Sri K. H. Hanumegowda said. There, is a correspondence between Dr. Korean and myself. I have already brought it to the notice of the previous Chief Minister and again to the present Chief Minister also that the Secretariat of our Government is coming in the way of formation of the federations. I do not know, why they are against that federation. From the last year the matter is pending and they are not bringing it to the notice of the Minister. We are going to be benefitted. Not only that. Tamil Nadu had raised an objection and Andhra Pradesh also had raised an objection. But now they have agreed whereas only our Government of Karnataka is coming in the way of formation of the federations. I request the Minister that he should call for the concerned file immediately. I had also written about three months back but no action has been taken. I once again urge for early decision because Dr. Korean is very much interested and has said that if the federation is formed, we will get about 20 Crores from the project. I once again request the Hon. Minister to look into the matter personally.

SRI Y. RAMAKRISHNA.—It is a vital point that the Hon. Ex-Minister is rising. ಈ ವಿಷಯ ಇವೊತ್ತೇ ನನಗೆ ಗೊತ್ತಾಗಿದ್ದು. ಫೆಡರೇಷನ್ ಮಾಡಿಕೊಂಡರೆ 20 ಕೋಟಿ ರೂಪಾಯಿಗಳು ಬರುತ್ತದೆಂದು ಹೇಳಿದ್ದಾರೆ. ಇದರ ಬಗ್ಗೆ ಫೈಲ್ ಇದ್ದರೆ, ತರಿಸಿ ನೋಡುತ್ತೇನೆ. ಮತ್ತು ತಕ್ಷಣವೇ ಕ್ರಮ ಕೈಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್.—ಬೆಂಗಳೂರು ನಗರದಲ್ಲಿ ಒಂದು ಆಧುನಿಕ ಕಸಾಯಿಖಾನೆ ತೆರೆಯುವ ಬಗ್ಗೆ ಬೆಂಗಳೂರು ನಗರಸಭೆ ಒಂದು ತೀರ್ಮಾನ ತೆಗೆದುಕೊಂಡಿತ್ತು. ಇದಕ್ಕೆ ಡಬ್ಲ್ಯು.ಎಚ್.ಓ. ನವರು ಆರ್ಥಿಕ ಸಹಾಯ ಕೊಡುತ್ತೇವೆಂದು ಹೇಳಿದ್ದರು. ಈಗ ಅದು ಯಾವ ಹಂತದಲ್ಲಿದೆ ?

ಎರಡನೆಯದಾಗಿ ಈ ಕೃತಕಗರ್ಭಧಾರಣೆಯಿಂದ ಹಸುಗಳು ಗರ್ಭವಾಗುತ್ತಿಲ್ಲ. ವೀರ್ಯವೆಲ್ಲಾ ನಿರ್ವೀರ್ಯವಾಗುತ್ತಿದೆ. ಇದಕ್ಕೆ ಕಾರಣವೇನೆಂಬುದನ್ನು ತಿಳಿಸಬೇಕು.

ಶ್ರೀ ವೈ. ರಾಮಕೃಷ್ಣ—ಮಾನ್ಯ ರಾಮೇಗೌಡರು ಹೇಳಿದಂತೆ ಕೃತಕ ಗರ್ಭಧಾರಣೆಯಿಂದ ಶೇಕಡಾ 20ರಷ್ಟು ಹಸುಗಳು ಗರ್ಭವಾಗುತ್ತವೆ. ಈ 20 ಹಸುಗಳನ್ನು ಮಾನ್ಯ ರಾಮದೇವ್ ಅವರು ನೋಡಿದ್ದರೆ ಈ ಪ್ರಶ್ನೆ ಹಾಕುತ್ತಿರಲಿಲ್ಲ. ಆದರೆ ಅವರು ಉಳಿದ 80 ಹಸುಗಳನ್ನು ನೋಡಿ ಈ ಪ್ರಶ್ನೆ ಹಾಕಿದ್ದಾರೆ.

ಇನ್ನು ಆಧುನಿಕ ಕಸಾಯಿಖಾನೆಗೆ ಸಹಾಯ ಪಡೆಯುವ ಅವಧಿ ಮುಗಿದು ಹೋಗಿರಬಹುದೆಂದು ಕಾಣುತ್ತದೆ. ಒಂದುವೇಳೆ ಅವಧಿ ಏನಾದರು ಇದ್ದರೆ, ಆ ಸಹಾಯವನ್ನು ಉಪಯೋಗಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಜಿ ರಾಮೇಗೌಡ—ಸಿವಿಲ್ ಸ್ಟೇಷನ್‌ನಲ್ಲಿರುವ ಆಸ್ಪತ್ರೆ ತೆರೆದು ನೂರು ವರ್ಷವಾಗಿದೆ. ಅದನ್ನು ಇಂಪ್ರೂವ್ ಮಾಡಿಲ್ಲ. ಅಲ್ಲಿಗೆ ದಿನವೂ ಚಿಕಿತ್ಸೆಗಾಗಿ ನೂರಾರು ನಾಯಿಗಳು ಮತ್ತು ಹಸುಗಳು ಬರುತ್ತವೆ. ಆದಕಾರಣ ಅಲ್ಲಿ ಒಂದು ಎಕ್ಸರೇ ಸೆಕ್ಷನ್ ಪ್ರಾರಂಭ ಮಾಡುವ ವಿಚಾರ ಕೂಡ ಇತ್ತು,

ಈಗ ಅದು ಯಾವ ಹಂತದಲ್ಲಿದೆ ಎಂಬುದನ್ನು ತಿಳಿಸಬೇಕು. ಮತ್ತು ಇದನ್ನೆಲ್ಲಾ ಇಂಪ್ರೂವ್ ಮಾಡುವುದಾದರೆ ಆ ಏರಿಯಾದ ಜನರು ಒಂದು ಲಕ್ಷ ರೂಪಾಯಿಗಳ ಡೊನೇಷನ್ ಕೊಡಲು ಮುಂದೆ ಬಂದಿದ್ದಾರೆ. ಅದನ್ನು ಸಹಾ ಉಪಯೋಗಿಸಿಕೊಳ್ಳುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಮಾನ್ಯ ಸದಸ್ಯರು ಹೇಳಿದಂತೆ ಆ ಕಟ್ಟಡಕ್ಕೆ ನೂರು ವರ್ಷ ವಯಸ್ಸಾಗಿದೆ. ಜೊತೆಗೆ ಅವರು ರಿಪೇರಿ ವಗೈರೆ ಮಾಡಿ ಅದನ್ನು ಇಂಪ್ರೂವ್ ಮಾಡಬೇಕೆಂದು ಏನು ಹೇಳಿದ್ದಾರೆ, ಅದು ಸರ್ಕಾರದ ಪರಿಶೀಲನೆಯಲ್ಲಿದೆ, ಮತ್ತು ಅದು ಪ್ಲಾನ್‌ನಲ್ಲಿ ಸೇರಿದೆ, ಆದ್ದರಿಂದ ಆ ಕೆಲಸವನ್ನು ಮಾಡಿಸಿಕೊಡುತ್ತೇವೆ.

ಶ್ರೀ ಡಿ.ಟಿ. ರಾಮು.— ಈಗ ರೈತರ ಹತ್ತಿರವಿರುವಂತಹ ಮಿಶ್ರತಳಿ ಹಸುಗಳು ರೋಗಗಳಿಗೆ ತುತ್ತಾಗಿ ಸಾಯುತ್ತಿವೆ. ೪ ಹಸುಗಳು ಒಬ್ಬ ರೈತನ ಹತ್ತಿರವಿದ್ದರೆ, ೩ ಹಸುಗಳು ಸಾಯುತ್ತಿವೆ. ಇದರಿಂದ ರೈತರಿಗೆ ಆಗುವಂತಹ ನಷ್ಟವನ್ನು ತಪ್ಪಿಸಲು ಜೀವವಿಮೆಯನ್ನು ಕಡ್ಡಾಯ ಮಾಡುತ್ತೀರಾ?

ಎರಡನೆಯದಾಗಿ ಈ ಇಲಾಖೆಯವರು ಜಾಹೀರಾತು ಕೊಟ್ಟರೂ ಸಹ ಡಾಕ್ಟರ್‌ಗಳು ಅರ್ಜಿ ಹಾಕಿಕೊಳ್ಳುತ್ತಿಲ್ಲ. ಪ್ರತಿಭಾಪಲಾಯನವಾಗುತ್ತಿದೆ. ಇದಕ್ಕೆ ಕಾರಣ ಬೇರೆಬೇರೆ ರಾಜ್ಯಗಳಲ್ಲಿ ಉತ್ತಮವಾದಂಥ ವೇತನಶ್ರೇಣಿ ಇರುವುದರಿಂದ ಇಲ್ಲಿ ಕಲಿತವರೆಲ್ಲಾ ಅಲ್ಲಿಗೆ ಹೋಗುತ್ತಿದ್ದಾರೆ. ಇದನ್ನು ತಪ್ಪಿಸಲು ಇಲ್ಲಿಯೂ ಸಹ ಒಳ್ಳೆಯ ವೇತನ ಶ್ರೇಣಿಯನ್ನು ಕೊಟ್ಟು, ಇವರ ಒಂದು ಸೇವೆ ನಮ್ಮ ರಾಜ್ಯಕ್ಕೆ ದೊರೆಯುವಂತೆ ಮಾಡುತ್ತೀರಾ?

೭-೦೦ ಪಿ.ಎಂ.

ಮೂರನೆಯದು, ನಾನು ರಿಟ್ ಹಾಕಿದರೆ. ಆ ರಿಟ್ ಪರಿಹಾರ ಆಗಬೇಕಾದರೆ ೬ ವರ್ಷ ಆಗುತ್ತದೆ ಈ ರೀತಿ ಎಷ್ಟು ಕೇಸುಗಳು ಹೈಕೋರ್ಟ್‌ನಲ್ಲಿ ಪೆಂಡಿಗ್ ಇವೆ. ಆದುದರಿಂದ ಹೆಚ್ಚು ನ್ಯಾಯಾಧೀಶರನ್ನು ನೇಮಕಮಾಡಬೇಕು. ರಿಟ್ ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೆ ಒಂದು ಸ್ಪೆಷಲ್ ಬೆಂಚನ್ನು ರಚಿಸಬೇಕು. ತಾಲ್ಲೂಕಿನಲ್ಲಿ ಒಂದೊಂದು ಕೋರ್ಟನ್ನು ತೆರೆಯುತ್ತೇವೆಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಅದರಂತೆ ಎಲ್ಲಾ ತಾಲ್ಲೂಕುಗಳಲ್ಲಿ ಕೋರ್ಟ್‌ಗಳನ್ನು ತೆರೆಯುತ್ತೀರಾ?

ಶ್ರೀ ವೈ. ರಾಮಕೃಷ್ಣ.—ಇನ್‌ಷೂರೆನ್ಸ್ ಸ್ಕೀಂ ವಿಚಾರದಲ್ಲಿ ನಮ್ಮ ರೈತರಿಗೆ "ಭಾಗ್ಯಜ್ಯೋತಿ" ಸ್ಕೀಮನ್ನು ಇಂಟರ್‌ಡ್ಯೂಸ್ ಮಾಡಿದ್ದೇವೆ. ರೈತರೇ ತಮ್ಮ ಹಸುಗಳು ಹೋದಾವು ಎಂಬ ಭಯದಿಂದ ಇನ್‌ಷ್ಯೂರೆನ್ಸ್ ಮಾಡಬೇಕಾಗುತ್ತದೆ. ಹಸುಗಳು ಸತ್ತರೆ ಬ್ಯಾಂಕ್‌ನವರು ಪರಿಹಾರ ಕೊಡುತ್ತಾರೆ, ಈ ಬಗ್ಗೆ ರೈತರಿಗೆ ಮೋಸಮಾಡಿಲ್ಲ, ರೈತರು ಆ ಸ್ಕೀಮನ್ನು ಉಪಯೋಗಿಸಿಕೊಳ್ಳದೇಹೋದರೆ ಏನು ಮಾಡುವುದಕ್ಕಾಗುತ್ತದೆ. ರೈತರನ್ನು ಒತ್ತಾಯ ಮಾಡಬೇಕಾಗುತ್ತದೆಯೇ ಹೊರತು ಕಾನೂನು ಮೂಲಕ ಮಾಡುವುದಕ್ಕೆ ಸಾಧ್ಯವಿಲ್ಲ. ಮತ್ತೆ ಮಾನ್ಯ ಸದಸ್ಯರು ಉತ್ತಮ ಶ್ರೇಣಿ ಕೊಡಿ ಎಂದು ಹೇಳಿದರು. ಸರ್ಕಾರ ಇದನ್ನು ಪರಿಶೀಲಿಸುತ್ತದೆ ಎಂದು ಹೇಳಿದ್ದೇನೆ. ಮತ್ತೆ ಹೈಕೋರ್ಟ್ ವಿಚಾರ ಹೇಳಿದ್ದಾರೆ. ಹೈಕೋರ್ಟ್ ಬಿಲ್ಡಿಂಗ್ ಏನಿದೆ ಅಲ್ಲಿ ಜಾಸ್ತಿ ಜಡ್ಜ್‌ಗಳಿಗೆ ಅವಕಾಶ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಎಂ.ಜಿ.ಐ.ಡಿ. ಬಿಲ್ಡಿಂಗನ್ನು ನಮ್ಮ ಹೈಕೋರ್ಟ್‌ಗೆ ಬೇಕು ಎಂದು ಹೇಳಿದ್ದೇವೆ, ಅವರಿಂದ ಖಾಲಿ ಮಾಡಿಕೊಡುತ್ತೇವೆ ಎಂದು ಭರವಸೆ ಬಂದಿದೆ. ಈಗ ಹೈಕೋರ್ಟ್‌ಗೆ ಸ್ಥಳ ಸಾಕಾಗುತ್ತಾ ಇಲ್ಲ.

ಶ್ರೀ ಗಂಗಹನುಮಯ್ಯ.— ಹಾಲು ಉತ್ಪಾದಕರ ಸಂಘಗಳಲ್ಲಿ ಹರಿಜನ—ಗಿರಿಜನರಿಗೆ ಹಾಲು ಹಾಕಬೇಕಾದರೆ ಹಸು ಇರಬೇಕು ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಅದು ತಮಗೆ ಗೊತ್ತಿದ್ದರೆ ಅಥವಾ ಕಾನೂನು ಇದ್ದರೆ ಅದನ್ನು ಮೊದಲು ತೆಗೆದುಹಾಕಿ. ಹರಿಜನ—ಗಿರಿಜನರು ಆ ಸಂಘಸಂಸ್ಥೆಗಳಲ್ಲಿ ಸದಸ್ಯತ್ವ ಪಡೆದುಕೊಂಡರೆ ಹಾಲು ಹಾಕುವುದಕ್ಕೆ ಸಾಧ್ಯವಿದೆ, ದಯವಿಟ್ಟು ಆದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ವೈ. ರಾಮಕೃಷ್ಣ.—ಸೊಸೈಟಿಗಳಲ್ಲಿ ಹರಿಜನ - ಗಿರಿಜನರಿಗೆ ಮಾತ್ರ ನಾವು ಹೇಳುವುದಲ್ಲ. ಯಾರೇ ಆಗಲಿ, ಷೇರು ಬಂಡವಾಳ ಕೊಡುವುದಕ್ಕೆ ತಯಾರಾಗಿದ್ದಾರೆ ಅವರು ಮಾಡಬಹುದು. ಹರಿಜನ—ಗಿರಿಜನರಿಗೆ ಮೆಂಬರ್‌ಶಿಪ್ ಕೊಡುವುದಿಲ್ಲ ಎನ್ನುವುದನ್ನು ನನ್ನ ಗಮನಕ್ಕೆ ತಂದರೆ, ಅದು ನಿಜವಾಗಿದ್ದರೆ ಅವರ ಮೇಲೆ ಕೇಸ್‌ಹಾಕಿ ಪ್ರಾಸಿಕ್ಯೂಷನ್ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಚ್ ಟಿ. ಚೌಡಯ್ಯ.—ಮಾನ್ಯ ಮಂತ್ರಿಗಳು ಬಹಳ ಉತ್ಸಾಹದಿಂದ ಪ್ರತಿಯೊಂದು ಪಂಚಾಯಿತಿಗೆ ಎಂ.ಪಿ.ಸಿ.ಎಸ್. ಇರಬೇಕು, ಅದು ಸರ್ಕಾರದ ಆಸೆ ಎಂದು ಅಪ್ಪಣೆ ಕೊಡಿಸಿದರು. ಈ

ವಿಷಯದಲ್ಲಿ ನಾನು ಫೆಬ್ರುವರಿ ತಿಂಗಳಲ್ಲಿ ಪತ್ರ ಬರೆದಿದ್ದೇನೆ. ನಿಮ್ಮ ಕೆ.ಡಿ.ಡಿ.ಸಿ. ಮ್ಯಾನೇಜಿಂಗ್ ಡೈರೆಕ್ಟರಿಗೆ ೧೦ ಸಾರಿ ಫೋನ್ ಮಾಡಿದ್ದೇನೆ, ಚೀಫ್ ಮ್ಯಾನೇಜರ್‌ಗೆ ಫೋನ್ ಮಾಡಿದ್ದೇನೆ, ಇಂದಿನ ವರೆಗೆ ಉತ್ತರ ಇಲ್ಲ.

ಶ್ರೀ ವೈ. ರಾಮಕೃಷ್ಣ.— ತಾವು ಪತ್ರ ಬರೆದಿದ್ದು ಉಂಟು, ಕೊಟ್ಟಿದ್ದು ಉಂಟು, ನಾನು ಅದನ್ನು ಕಳಿಸಿದ್ದು ಉಂಟು. ಎಗ್ಸಾಮಿನ್ ಮಾಡಿಸಿದ್ದು ಉಂಟು ವ್ಯಾನ್‌ಗೆ ಯಾವ ಯಾವ ಕಡೆ ಹೋಗಬೇಕು ಎಂದು ರೂಟ್ ಫಿಕ್ಸ್ ಆಗಬೇಕು. ಅದಕ್ಕೆ ರೆಕಗಿಷನ್ ಕೊಡುತ್ತಾರೆ ನಾನು ಆಫೀಸರ್ಸ್ ಮೀಟಿಂಗ್ ಇಟ್ಟುಕೊಂಡಿದ್ದೇನೆ. ಅದನ್ನ ಮಾಡಿಕೊಡುತ್ತೇನೆ.

ಶ್ರೀ ಎ.ಬಿ. ಪಾಟೀಲ್.— ಮಾನ್ಯ ಸಚಿವರು ಹೈದರಾಬಾದ್ ಕರ್ನಾಟಕದ ಬಗ್ಗೆ. ಗುಲ್ಬರ್ಗಾದ ಬಗೆ ಏನೂ ಹೇಳಲಿಲ್ಲ. ಅಮೆರಿಕಾದೇಶದಲ್ಲಿ ಪ್ರತಿಯೊಂದು ಮನೆ ಮನೆಯಲ್ಲೂ ಡೈರಿ ನಡೆಸಿದ್ದಾರೆ. ಮಾನ್ಯ ಸಚಿವರು ಅಮೆರಿಕಾ ದೇಶಕ್ಕೆ ಹೋಗಿ ಅಧ್ಯಯನ ಮಾಡಿಕೊಂಡು ಬಂದರೆ ಚೆನ್ನಾಗಿರುತ್ತದೆ. ರೈತರಿಗೆ ಟ್ರೈನಿಂಗ್ ಕೊಡತಕ್ಕ ಪದ್ಧತಿಯನ್ನು ನಾನು ಅಮೆರಿಕಾ ದೇಶದಲ್ಲಿ ನೋಡಿಕೊಂಡು ಬಂದಿದ್ದೇನೆ. ಆ ರೀತಿ ಮಾಡಿಸಿದರೆ ಈಗ ಅನಾನುಕೂಲ ಏನಿದೆ ಅದು ದೂರವಾಗುತ್ತದೆ. ಹೈದರಾಬಾದ್ ಕರ್ನಾಟದಲ್ಲಿ ಅದರಲ್ಲೂ ಗುಲ್ಬರ್ಗಾದಲ್ಲಿ ಡಾಕ್ಟರ್ಸ್ ಇಲ್ಲ, ಕಾಂಪೌಂಡರ್ಸ್ ಇಲ್ಲ,. ಯಾವರೀತಿಯ ವೆಟರ್ನರಿ ವ್ಯವಸ್ಥೆ ಇಲ್ಲ. ಗುಲ್ಬರ್ಗಾದಲ್ಲಿ ರೋಗರುಜಿನಗಳು ಬಂದು ಎಷ್ಟು ದನಗಳು ಸತ್ತಿವೆ ಎಂಬ ಅಂಕಿಅಂಶಗಳನ್ನು ತೆಗೆದುಕೊಂಡರೆ ಬೆಂಗಳೂರಿಗಿಂತ ಅಲ್ಲಿಗೆ ಪ್ರಿಫರೆನ್ಸ್ ಕೊಡಬೇಕು ಆದ್ದರಿಂದ ಹೈದರಾಬಾದ್ ಕರ್ನಾಟಕದಲ್ಲಿ ರೋಗ ರುಜಿನಗಳು ಬಂದು ಹೆಚ್ಚಾಗಿ ದನಗಳು ಸತ್ತಿರುವುದರಿಂದ ಅದರ ಬಗ್ಗೆ ವಿಶೇಷವಾಗಿ ಗಮನ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ರಾಮೇಗೌಡರೂ ಕೂಡ ಈ ಪ್ರಶ್ನೆಯನ್ನು ಎತ್ತಿದರು.

ಶ್ರೀ ಎಚ್.ಸಿ. ಶ್ರೀಕಂಠಯ್ಯ.— ಇದರ ಬಗ್ಗೆ ಅಧ್ಯಯನ ಮಾಡುವುದಕ್ಕೆ ಪಾಶ್ಚಿಮಾತ್ಯ ದೇಶಗಳಿಗೆ ಕಳಿಸಬೇಕು ಎಂದು ಮಾನ್ಯ ಸದಸ್ಯರು ಹೇಳಿದರು. ಈಗಾಗಲೇ ಅಧ್ಯಯನ ಮಾಡಿಕೊಂಡು ಬಂದು ಅಧ್ಯಕ್ಷರಾಗಿರುವವರನ್ನು ಏನು ತೆಗೆದುಹಾಕಿದಿರಿ ಅವರನ್ನು ಪುನರ್ನೇಮಕ ಮಾಡುತ್ತೀರಾ?

ಶ್ರೀ ವೈ. ರಾಮಕೃಷ್ಣ.— ರೈತರು ಎಲ್ಲರೂ ಹಾಲು ಉತ್ಪದನೆ ಮಾಡಿದರೆ ಅದಕ್ಕೆ ಮಾರ್ಕೆಟ ಬೇಕಾಗುತ್ತದೆ. ನಾನು ಮದ್ರಾಸಿನಲ್ಲಿ ನೋಡಿದೆ. ಮದ್ರಾಸ್ ಸಿಟಿಯೊಂದರಲ್ಲೇ ೬೯ ಮಿಲ್ಕ್ ಬೂತ್ಸ್ ಇವೆ, ಅಲ್ಲಿ ಪ್ಯಾಲೆಸ್ ಕಾರ್ನರ್‌ನಲ್ಲಿ ಒಂದು ದಿವಸದ ವ್ಯಾಪಾರ ೧೨ ಸಾವಿರ. ಅಲ್ಲಿ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ಚೀಸ್, ಹಾಲ್ಕೋವಾ ಎಲ್ಲಾ ಇದೆ. ಆ ಒಂದು ಸ್ಥಳದಲ್ಲಿ ಒಂದು ದಿವಸದ ವ್ಯಾಪಾರ ೧೨ ಸಾವಿರ ಅಂದಮೇಲೆ ನಮ್ಮ ರಾಜ್ಯ ಯಾವಾಗ ಆ ಮಟ್ಟಕ್ಕೆ ಬರುವುದು?

ಅಧ್ಯಕ್ಷರು.— ತಾವು ಡೆನ್ಮಾರ್ಕಿಗೆ ಹೋಗಿ ಬನ್ನಿ.

ಶ್ರೀ ವೈ. ರಾಮಕೃಷ್ಣ.— ಇದರ ಬಗ್ಗೆ ಡೆವಲಪ್ ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರು ಹೈದರಾಬಾದ್ ಕರ್ನಾಟಕದ ಬಗ್ಗೆ ಹೇಳಿದರು. ಮುನಿರಾಬಾದ್‌ನಲ್ಲಿ ಸ್ಟೇಷನ್ ಇದೆ, ಅಲ್ಲಿ ಫಾರಂ ಇದೆ, ಡಿ ಪಿ.ಎ.ಪಿ. ಸ್ಕೀಂ ಇದೆ, ವ್ಯಾನ್ ಕೊಟ್ಟಿದ್ದೇವೆ, ಹೈದರಾಬಾದ್ ಕರ್ನಾಟಕ ಭಾಗವನ್ನು ಯಾವರೀತಿಯಲ್ಲೂ ಕಡೆಗಣಿಸಿಲ್ಲ.

MR. SPEAKER.— The question is :

"That the respective sums not exceeding the amounts mentioned in the list of Demands inclusive of the sum granted 'on account" be granted to the Government to defray the charges which will come in course of payment during the financial year ending 31st day of March 1981 in respect of Demand Nos. 4, 34 and 35."

The motion was adopted and the Demands were granted.

(As ordered by the Chair, the demands voted are reproduced below.)

Demand No. 4

"That a sum not exceeding Rs. 14,99,01,000 on Revenue Account and Rs. 1.02,50,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1981 in respect of "Animal Husbandry and Dairy Development".

DEMAND NO. 34.

' That a sum not exceeding Rs. 1,34,94,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1981 in respect of 'State Legislatures'.

DEMEND MO. 35

"That a sum not exceeding Rs. 6,70,03,000 on Revenue Account inclusive of the snm granted 'on account' be granted to the Government to defray the charges which will come in course of payment during the financial year ending 31st day of March 1981 in respect of "Administration of Justice."

ANNOUNCEMENT

MR. SPEAKER.— The Business Advisory Committee which met to-day have recomended that demends relating to Rural Water Supply and Sanitation, Community Development and Integrated Rural Development Programme may be taken up on Tuesday the 22nd Jully 1980 and that demends relating to the Chief Minister may be taken up on 23rd, 24th, 25th, 26th, 28th and 29th July. A revised programme of Discussion on demands will be circulated to the members separately.

The Committee have also recommended that there may be two sittings of the House on Wednesday, Thursday and Friday *i.e.*, on 16th, 17th and 18th July to transact the following business:

1) The Karnataka State Universities (Amendment) Bill, 1980.

2) The Karnataka Vacant Land in Urban Areas (Prohibition of Alienation) (Amendment) Bill, 1980.

3) The Karnataka Forest (Amendment) Bill, 1980.

4) Discussion for Short Duration on Scarcity Conditions privailing in certain parts of the State.

Now, the House stands adjourned to meet again tommorow at Twelve of the Clock.

(The House adjourned Ten Minutes past Seven of the Clock to meet again at Twelve of the Clock on Tuesday, the 15th July, 1980)

W D 2817